ಅಪರಂಜಿ


ತಿಳಿನಗೆಯ ಕಾರಂಜಿ



ಬೆಳ್ಳಿ ಹಬ್ಬದ ವರ್ಷ

ಸೆಪ್ಟೆಂಬರ್ - 2008






ಛೆ, ವಿಂಡೋ ಸ್ಕ್ರೀನ್ ಜೊತೆ ಜೊತೆಗೆ ಕಂಪ್ಯೂಟರ್
ಸ್ಕ್ರೀನನ್ನೂ ಹಾಕ್ಕೋಬಾರದಿತ್ತು

ಬಿಡಿ ಪ್ರತಿ: ರೂ.10.00

ಅಪರಂಜಿ

ತಿಳಿನಗೆಯ ಕಾರಂಜಿ



ಸಂಪಾದಕ ಮಂಡಳಿ
ಶ್ರೀ ಎಂ. ಶಿವಕುಮಾರ್
ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ
ಉಪ ಸಂಪಾದಕರು
ಶ್ರೀ ಬಾಗೂರು ಚಂದ್ರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ
ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎನ್. ಪ್ರಶಾಂತ್
ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.
ವ್ಯಂಗ್ಯಚಿತ್ರಕಾರರು
ಶ್ರೀ ಬಾಗೂರು ಮಾರ್ಕಂಡೇಯ
ಜನಾರ್ಧನ ಸ್ವಾಮಿ
ಸು.ವಿ. ಮೂರ್ತಿ
ಚಂದಾ ವಿವರು
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ
ಒಮೇಗಾ ಲೇಸರ್ ಟೆಕ್



ಸಂಪುಟ 25
ಸಂಚಿಕೆ - 12
ಸೆಪ್ಟೆಂಬರ್ - 2008

ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



ಂ ಪ್ರಕಾಶ್

ಈ ದೇಶವನ್ನು ದೇವರೂ ಕಾಪಾಡಲಾರ - ಸುಪ್ರೀಂ ಕೋರ್ಟ್

● ಜಗನ್ನಿಯಾಮಕ ಬೆಚ್ಚಿಬಿದ್ದನಂತೆ

★★★

ಮುಷರಫ್‌ಗೆ ವಾಗ್ದಂಡನೆ - ಸುದ್ದಿ

● ಬೆಕ್ಕಿಗೆ ಗಂಟೆ ಕಟ್ಟುವವರಾರು?

★★★

ಕನ್ನಡ ಡಿಂಡಿಮ ಮೊಳಗಿಸಲು AKKA ಸಮ್ಮೇಳನಕ್ಕೆ ಸಜ್ಜು - ಸುದ್ದಿ

● ಡಿಂಡಿಮ ಅಂದ್ರೇನ್ ಸಾ?

★★★

ಪಿ.ಎಚ್.ಡಿ. ಗುಣಮಟ್ಟ ಕುಸಿತ - ವಿಷಾದ ಸುದ್ದಿ

● **Doctored Philisophy** ಅನ್ನಬಹುದು

★★★

ಮಾಯಾವತಿಗೆ ಪ್ರಧಾನಿ ಆಗುವ ಆಸೆ - ಪತ್ರಿಕೆ

● ಅವರು ಉತ್ತರ ಪ್ರದೇಶದ 'ಪ್ರಧಾನಿ'ಯಾಗಿದ್ದರೆ ಕ್ಷೇಮ

★★★

ನಕಲಿ ನೋಟು ತಡೆಗೆ ನೋಡಲ್ ಘಟಕ - ಸುದ್ದಿ

● ಅದು ನೋಡದಿರಲ್

★★★

ಡಿ.ಎಂ.ಕೆ.ಗೆ ಬೆಂಬಲ ವಾಪಸ್; ಎಡ ಪಕ್ಷಗಳ ನಿರ್ಧಾರ - ಸುದ್ದಿ

● ದ್ರಾವಿಡ್ ಮುರಿದ ಕಳಗಂ ಆಗುವುದೇ?

★★★

NASA ಗೆ ಶಾಲಾ ಮಕ್ಕಳ ಜೊತೆ ಹೋದ ಶಿಕ್ಷಕಿ ವಿವಾಹವಾಗಿ ಅಮೆರಿಕಾದಲ್ಲೇ ಇದ್ದಾರಂತೆ - ಸುದ್ದಿ

● ಆಹಾ! ಉಡಾವಣೆ ಅಂದರೆ ಹೀಗಿರಬೇಕು

★★★

ಗುರುಬಚನ್ ಸಿಂಗ್ ಪ್ರಸಂಗ

- ವತ್ಸನ



"ಇಲ್ಲಿನೋರಿಗೆ ಕಿಂಗ್ ಆರ್ಥರ್ ಅಂದ್ರೆ ನಮ್ಮಲ್ಲಿನ ಕೃಷ್ಣ ಇದ್ದಹಾಗೆ. ದುಷ್ಟಶಿಕ್ಷಕ ಶಿಷ್ಟಪರಿಪಾಲಕ ಆ ರಾಜ. ಆತನನ್ನ ಚಾರಿತ್ರಿಕ ವ್ಯಕ್ತಿ ಅನ್ನೋದಕ್ಕಿಂತ ಪೌರಾಣಿಕ ವ್ಯಕ್ತಿ ಅನ್ನೋದೇ ಹೆಚ್ಚು ಸಮಂಜಸ ಅಂತ ತೋರುತ್ತೆ. ನಮ್ಮ ಕೃಷ್ಣನ ಸುದರ್ಶನ ಚಕ್ರ ಇದ್ದಹಾಗೆ ಕಿಂಗ್ ಆರ್ಥರ್ ಹತ್ರ ಎಕ್ಸ್‌ಕ್ಯಾಲಿಬರ್ ಎಂಬ ಹೆಸರಿನ ಒಂದು ದೈವೀಶಕ್ತಿಯುಳ್ಳ ಕತ್ತಿ ಇತ್ತಂತೆ. ಅದರಿಂದ್ಲೇ ಅವನು ಶತ್ರುಗಳನ್ನ ಸಂಹಾರ ಮಾಡ್ತಾ ಇದ್ದದ್ದು ಅಂತ ಪ್ರತೀತಿ. ಈ ಶನಿವಾರ ನಿಮ್ಮನ್ನ ಕಿಂಗ್ ಆರ್ಥರ್ಸ್ ಕ್ಯಾಸಲ್‌ಗೆ ಕರ್ಕೊಂಡು ಹೋಗೋಣಾ ಅಂತ ಗೌರಿ ಹೇಳಿದಾಳೆ. ಶರಲೇಖ ಅಂಕಲ್‌ಗೆ ಇಂಥಾದ್ದೆಲ್ಲ ಇಷ್ಟ ಅಂತಿದ್ರಲ್ಲಾ ಮಾವ" ಅಂತ ರಾಮ್ ಹೇಳಿದ.

"ಅದಕ್ಕೇನು ಖಂಡಿತ ಹೋಗೋಣ. ಊರಿನಲ್ಲಿದ್ದಾಗ್ಲಂತೂ ಶರಲೇಖನಿಗೆ ಬಿಡುವೇ ಇರೋದಿಲ್ಲ. ಇಲ್ಲಿಗೆ ಬಂದಿರುವಾಗಲಾದ್ರೂ ಎಲ್ಲಾ ಪ್ರವಾಸಿಗರಂತೆ ಅಲ್ಲಿ ಇಲ್ಲಿ ಓಡಾಡ್ಕೊಂಡು ಕಾಲ ಕಳೀಲಿ. ಅಂದಹಾಗೆ ಏಳು ಗಂಟೆ ಆಗ್ತಾ ಬಂತಲ್ಲೋ ಗೌರಿ ಇನ್ನೂ ಬಂದೇ ಇಲ್ಲ. ಆರಕ್ಕೇ ಬರ್ತೀನಿ ಅಂತ ಹೇಳಿದ್ದ ನೆನಪು..." ಅಂತ ಸ್ವಲ್ಪ ಆತಂಕದಿಂದ್ಲೇ ಹೇಳಿದೆ.

ರಾಮ್ ಉತ್ತರಿಸುಕ್ಕೆ ಮುಂಚೇನೇ ಹೊರಬಾಗಿಲಿನ ಬೀಗ ತೆರೆದ ಸದ್ದಾಯಿತು. "ನೋಡಿ ಯಾರು ಬಂದಿದಾರೆ" ಅಂದುಕೊಂಡೇ ಗೌರಿ ಒಳಗೆ ಬಂದಳು. ಅವಳ ಹಿಂದೆ ಒಬ್ಬ ಯುವಕ ನಡೆದು ಬಂದ "ಹಲೋ ಅಂಕಲ್" ಎನ್ನುತ್ತಾ ನನ್ನ ಕೈ ಕುಲುಕಿದ. "ಇವನು ಸುರೀಂದರ್ ಸಿಂಗ್. ನಮ್ಮ ಯೂನಿವರ್ಸಿಟೀಲೇ ಡಾಕ್ಟರೇಟ್ ಮಾಡ್ತಿದಾನೆ. ತುಂಬಾ ಪ್ರತಿಭಾವಂತ." ಅಂತ ರಾಮ್ ಬಂದ ಹುಡುಗನ್ನ ನನಗೆ ಪರಿಚಯಿಸಿದ. ಅರೆ, ಪುನಃ ಅದೇ ತಪ್ಪು ಮಾಡ್ತಾ ಇದೀನಿ ನೋಡಿ. ಎಲ್ಲಿಂದ್ಲೋ ಶುರು ಮಾಡಿದ್ರೆ ಪಾಪ ನಿಮಗೆ ನನ್ನ ಮಾತಿನ ತಲೆಬುಡವಾದ್ರೂ ಹೇಗೆ ತಿಳಿಬೇಕು ಅಲ್ವೇ. ಶರಲೇಖ ಮತ್ತು ನಾನು ಬಾಳೇಹೊನ್ನೂರಿನಿಂದ ಬೆಂಗಳೂರಿಗೆ ಹಿಂತಿರುಗಿದ ನಂತರ ನಮ್ಮ ಅಕ್ಕನ ಮಗ ರಾಮ್‌ನಿಂದ ಒಂದು ಈ ಮೇಯ್ಲ್ ಬಂದಿತ್ತು. "ಈ ಬೇಸಿಗೇಲಿ ನೀವು ಮತ್ತು ನಿಮ್ಮ ಗೆಳೆಯ ಶರಲೇಖ ಇಂಗ್ಲೆಂಡಿಗೆ ಪ್ರವಾಸಕ್ಕೆ ಖಂಡಿತ ಬನ್ನಿ. ನಾವಿರೋ ಜಾಗ ಪ್ರವಾಸಿಗರಿಗೆ ಹೇಳಿ ಮಾಡಿಸಿದ್ದು. ತಕ್ಷಣ ಉತ್ತರಿಸಿ" ಅಂತಿತ್ತು ಅದರ ಒಕ್ಕಣೆ. ರಾಮ್ ಎಕ್ಸೆಟರ್ ಯೂನಿವರ್ಸಿಟೀಲಿ ಪ್ರೊಫೆಸರ್. ಗೌರಿಗೂ ಕೂಡ ಅದೇ ಕಾಲೇಜಿನಲ್ಲಿ ಕೆಲಸ. ಇಂಗ್ಲೆಂಡಿನ ನೈರುತ್ಯದ ತುದಿಯಲ್ಲಿನ ಕಾರ್ನ್‌ವಾಲ್ ತುಂಬಾ ರಮಣೀಯ ಪ್ರದೇಶ ಅಂತ ಓದಿದ್ದೆ. ಶರಲೇಖನಿಗೆ ಈ ಆಹ್ವಾನದ ಬಗ್ಗೆ ತಿಳಿಸಿದೆ. "ಸರಿ, ಹೋಗೋಣ" ಅಂದ ನನ್ನ ಮಿತಭಾಷಿ ಗೆಳೆಯ.

ಹಾಗಾಗಿ ಮೂರು ದಿನಗಳಿಂದ ಈ ಟಿಂಟಾಜೆಲ್ ಎಂಬ ಹಳ್ಳೀಲಿರೋ ಸೋದರಳಿಯನ ಮನೇಲಿ ನಮ್ಮ ಝಾಂಡಾ.

ನಾವೆಲ್ಲಾ ಮಾತನಾಡ್ತಾ ಕೂತಿದ್ದಾಗ ಶರಲೇಖ ತನ್ನ ಕೊಳಲು ಪ್ರಾಕ್ಟೀಸ್ ಮುಗಿಸಿ ಮೇಲಿನ ರೂಮಿನಿಂದ ಇಳಿದು ಬಂದ. ಶರಲೇಖನನ್ನು ನೋಡಿದ ತಕ್ಷಣ ಸುರೀಂದರ್ "ಅಂಕಲ್, ನಿಮಗೆ ನಮ್ಮ ತಂದೆ ಹೋಲಿಕೆ ತುಂಬಾ ಇದೆ. ಬಿಳೀ ಗಡ್ಡ, ತಲೆಗೊಂದು ಸರ್ದಾರ್ಜಿ ಪೇಟ ತಗುಲಿಸಿಬಿಟ್ರೆ ಥೇಟ್ ನಮ್ಮ ತಂದೇನೇ" ಅಂತ ಹೇಳುತ್ತಾ ತನ್ನನ್ನು ಪರಿಚಯಿಸಿಕೊಂಡ.

"ಗಡ್ಡ ಏನೋ ಬಿಡಬಹುದು. ಆದರೆ ಅದು ಪೂರ್ತಿ ಬಿಳಿಯಾಗಿರುತ್ತೆ ಅಂತ ಖಾತ್ರಿ ಇಲ್ಲ. ನನ್ನ ತಲೆ ಕೂದಲಿನ ತರಹ ಅದೂ ಕೂಡ ಉಪ್ಪು ಮೆಣಸು ರೂಪ ತಾಳಬಹುದೇನೋ. ಅಂದ ಹಾಗೆ ನಿಮ್ಮ ತಂದೆ ಎಲ್ಲಿದಾರೆ? ಏನ್ಮಾಡ್ತಾ ಇದಾರೆ?" ಅಂತ ಕೇಳಿದ ಶರಲೇಖ.

"ನಮ್ಮ ತಂದೆ ಹೆಸರು ಗುರುಬಚನ್ ಸಿಂಗ್. ಹತ್ತಿರದ ಎಕ್ಸೆಟರ್ ಪಟ್ಟಣದಲ್ಲಿ ಒಂದು ಬಟ್ಟೆ ಅಂಗಡಿ ನಡೆಸ್ತಾ ಇದಾರೆ. ಮನೆ ಕೂಡಾ ಅಲ್ಲೇನೇ. ಬಿಳೀ ಗಡ್ಡ ಅಂದಾಗ ಜ್ಞಾಪಕ ಬಂತು, ನಮ್ಮ ತಂದೆ ತಮ್ಮ ಬಿಳೀ ಗಡ್ಡದಿಂದಾನೇ ಐನೂರು ಪೌಂಡು ಸಂಪಾದಿಸೋದ್ರಲ್ಲಿದಾರಂತೆ" ಅಂದ ಸುರೀಂದರ್.

"ಬಿಳೀ ಗಡ್ಡಕ್ಕೆ ಐನೂರು ಪೌಂಡೇ, ಅದು ಹೇಗೆ ಸಾಧ್ಯ?" ಶರಲೇಖ ಪ್ರಶ್ನಿಸಿದ.

"ಯಾವುದೋ ಕೆನೇಡಿನ್ ಫೌಂಡೇಷನ್ನಿನೋರು ಇವರನ್ನ ಸೆಲೆಕ್ಟ್ ಮಾಡಿದಾರಂತೆ ಇವರ ಗಡ್ಡ ನೋಡಿ. ಮುಂದಿನ ಬುಧವಾರ ಬೆಳಿಗ್ಗೆ ಹತ್ತರಿಂದ ಮಧ್ಯಾಹ್ನ ಮೂರರವರೆಗೆ ಒಂದು ಪ್ರವಚನದಲ್ಲಿ ಭಾಗವಹಿಸಿದ್ರೆ ಐನೂರು ಪೌಂಡು ಸಂಭಾವನೆ ಅಂತೆ. ಪರವಾಗಿಲ್ಲ ಅಂದ್ಕೊಂಡೆ ನಮ್ಮಪ್ಪ ಈ ವಿಷಯ ಹೇಳಿದಾಗ." ಅಂತ ಹೇಳಿದ ಸುರೀಂದರ್.

"ಬುಧವಾರ ಬೆಳಿಗ್ಗೆ ಅಂದ್ರೆ.... ಅಂಗಡಿ ನೋಡ್ಕೊಳ್ಳೋವ್ರು?"

"ಯಾರೂ ಅಸಿಸ್ಟೆಂಟ್ ಇಲ್ಲ ಅಂಗಡೀಲಿ, ಒಂದು ದಿನ ಮುಚ್ಚಬೇಕಾಗುತ್ತೆ ಅಂತಿದ್ರು ನಮ್ಮಪ್ಪ"

"ಹೌದೇ, ಇಂಟರೆಸ್ಟಿಂಗ್. ನಿಮ್ಮಪ್ಪನ್ನ ಭೇಟಿ ಮಾಡುಕ್ಕೆ ಆಗುತ್ಯೇ? ನಿಜಕ್ಕೂ ಕುತೂಹಲಕಾರಿ ವಿಷಯ ಇದು" ಶರಲೇಖ ಪತ್ತೇದಾರಿ ಇನ್‌ಸ್ಟಿಂಗ್ಟ್ ಜಾಗ್ರತಗೊಂಡಿದ್ದು ನನಗೆ ತಿಳಿಯಿತು.

"ಓಹೋ ಅದಕ್ಕೇನು. ಈ ಶನಿವಾರ ಸಂಜೆ ಬಂದು ನಿಮ್ಮನ್ನ ನಮ್ಮನೇಗೆ ಕರ್ಕೊಂಡು ಹೋಗ್ತೀನಿ. ಇಲ್ಲಿಂದ ತುಂಬಾ ಹತ್ರ ನಮ್ಮನೆ."

ಶನಿವಾರ ಬೆಳಗ್ಗೆ ರಾಮ್ ಜೊತೆ ಕಿಂಗ್ ಆರ್ಥರ್ಸ್ ಕ್ಯಾಸಲ್ ನೋಡಲು ಹೋದೆವು. ಸಮುದ್ರ ತೀರದಿಂದಲೇ ಮೇಲೆದ್ದು ನಿಂತ ಗುಡ್ಡವೊಂದರ ಮೇಲಿದ್ದ ಈ ಕ್ಯಾಸೆಲ್ಲಿನ ಅವಶೇಷಗಳು ನಿಜಕ್ಕೂ ಈ ಪ್ರದೇಶದ ಹಳೆಯ ಇತಿಹಾಸವನ್ನು ಸಾರಿ ಹೇಳುತ್ತಿದ್ದವು. ನಮ್ಮ

ದಕ್ಷಿಣ ಕನ್ನಡದ ಮುರುಡೇಶ್ವರದ ಸಮುದ್ರ ತೀರವನ್ನು ನೆನಪಿಸುತ್ತಿದ್ದ ಇಲ್ಲಿನ ಪರಿಸರದ ರಮಣೀಯತೆ, ಅಂದಿನ ಬೆಳಗಿನ ಹಿತವಾದ ಬಿಸಿಲಿನಲ್ಲಿ ತುಂಬಾ ಅಪ್ಯಾಯಮಾನವಾಗಿತ್ತು. ಕ್ಯಾಸೆಲ್ಲಿನ ಆಸುಪಾಸಿನಲ್ಲಿ ಅಲೆದಾಡಿ, ಗೌರಿ ತಂದಿದ್ದ ಪಿಕ್‌ನಿಕ್ ತಿನಿಸುಗಳನ್ನು ಭುಂಜಿಸಿ ಸಂಜೆ ಮನೆ ಸೇರಿದಾಗ ಗಡಿಯಾರ ಅಟೆನ್ಷನ್ನಿನಲ್ಲಿ ನಿಂತು ಆರು ಗಂಟೆ ತೋರಿಸಿತ್ತು. ಆರೂವರೆಗೆ ಸುರೀಂದರ್ ತನ್ನ ಬೆನ್ಜ಼್ ಕಾರಿನಲ್ಲಿ ಶರಲೇಖನನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಬಂದ. ಏನೂ ಅಂತಹ ಮಹತ್ವದ ಕೆಲಸ ಇಲ್ಲದಿದ್ದುದರಿಂದ ನಾನೂ ಅವರ ಜೊತೆಯಲ್ಲಿ ಹೋದೆ. ಎಕ್ಸೆಟರ್ ದಕ್ಷಿಣ ಇಂಗ್ಲೆಂಡಿನ ಒಂದು ಪುಟ್ಟ ಊರು. ಇಲ್ಲಿನ ಎಲ್ಲಾ ಊರುಗಳಂತೆ ಅಚ್ಚುಕಟ್ಟಾದ ರಸ್ತೆಗಳು, ಊರಿನ ಮಧ್ಯೆ ಒಂದು ಬೆಲ್ಲದ ಅಚ್ಚಿನಂತಹ ಚರ್ಚ್, ಎಲ್ಲಿ ನೋಡಿದರೂ ಕಣ್ಣಿಗೆ ಬೀಳುವ ಹಸಿರು ಉದ್ಯಾನವನಗಳು, ಕಾಲು ಹಾದಿಯ ಮೇಲೆ ಅಲ್ಲಲ್ಲಿ ಅಚ್ಚ ಕೆಂಪು ಬಣ್ಣದ ಹಳೆಯ ಕಾಲದ ಪೋಸ್ಟ್ ಡಬ್ಬಗಳು, ಇವೆಲ್ಲಾ ಈ ನಾಡಿನ ನಿಜವಾದ ಸಂಸ್ಕೃತಿಯನ್ನು ಹಾಡುತ್ತಿದ್ದವು.

ಗುರುಬಚನ್ ಸಿಂಗ್ ಬಹು ಆದರದಿಂದ ನಮ್ಮನ್ನ ಬರಮಾಡಿಕೊಂಡ. ಮಗ ಹೇಳಿದಂತೆಯೇ ನಮ್ಮ ಹೋಸ್ಟ್‌ನ ಗಡ್ಡ ಬೆಳ್ಳಗೆ ಹೊಳೆಯುತ್ತಾ ಬಹಳ ಇಂಪ್ರೆಸಿವ್ ಆಗಿತ್ತು. ಟೀ ಕುಡಿಯುತ್ತಾ ಕುಳಿತಾಗ ಶರಲೇಖನೇ ಬಂದ ವಿಷಯ ಪ್ರಸ್ತಾಪಿಸಿದ.

''ನಿಮ್ಮ ಗಡ್ಡದ ಖ್ಯಾತಿ ಕೆನಡಾದವರೆಗೂ ಮುಟ್ಟಿದೆ ಅಂತ ನಿಮ್ಮ ಮಗ ಹೇಳಿದಾಗ ನನಗೆ ಅದು ಬಹು ಕೌತುಕದ ವಿಷಯವಾಗಿ ಕಂಡಿತು. ಅದರ ಬಗ್ಗೆ ನಿಮ್ಮನ್ನೇ ಕೇಳೋಣ ಅಂತ ಬಂದೆ. ನಿಮ್ಮದೇನೂ ಅಭ್ಯಂತರ ಇಲ್ಲದಿದ್ದರೆ.'' ಎಂದು ಪ್ರಾರಂಭಿಸಿದ ಶರಲೇಖ.

''ಓಹೋ ಅದಕ್ಕೇನು. ಅಗತ್ಯವಾಗಿ ಹೇಳ್ತೇನೆ. ಎರಡು ವಾರಗಳ ಹಿಂದೆ ಕೆನಡಾದಿಂದ ನನಗೊಂದು ಪತ್ರ ಬಂತು. ಅಲ್ಲಿ ನೆಲೆಸಿದ್ದ ಒಬ್ಬ ಅತಿ ಶ್ರೀಮಂತ ಸರ್ದಾರ್ಜಿ ಒಂದು ಕೋಟಿ ಡಾಲರುಗಳ ದತ್ತಿ ಇಟ್ಟು ನಿಧನ ಹೊಂದಿದ್ದಾನಂತೆ. ನನ್ನ ಅಭಿಪ್ರಾಯದಲ್ಲಿ ಆತನಿಗೆ ಹುಚ್ಚೋ ಬೆಪ್ಪೋ ಇದ್ದಿರಲೇಬೇಕು. ಯಾಕೆ ಅಂದ್ರೆ, ಆತ ತನ್ನ ವಿಲ್ಲಿನಲ್ಲಿ, ಇಂಗ್ಲೆಂಡಿನಲ್ಲಿ ನೆಲೆಸಿರೋ ಹಿರಿಯ ಸರ್ದಾರ್ಜಿಗಳನ್ನ ಹುಡುಕಿ ಅವರಿಗೆ ಮೂರು ಗಂಟೆಗಳ ಕಾಲ ಗುರು ಗ್ರಂಥ್ ಸಾಹೆಬ್‌ನಿಂದ ಪ್ರವಚನ ಬೋಧಿಸಿ ನಂತರ ಅವರಿಗೆ ಐನೂರು ಪೌಂಡುಗಳ ಸಂಭಾವನೆ ಕೊಡಬೇಕೆಂದು ಬರೆದಿದ್ದಾನಂತೆ. ಒಂದೇ ಶರತ್ತೆಂದರೆ ಆಯ್ಕೆಯಾದ ಸರ್ದಾರ್ಜಿಗೆ ತನಗಿದ್ದಂತೆಯೇ ಶುಭ್ರ ಬಿಳಿಯ ಗಡ್ಡ ಇರಬೇಕು ಅಂತ ವಿಧಿಸಿದ್ದಾನಂತೆ. ನಿಮ್ಮನ್ನ ಆಯ್ಕೆ ಮಾಡಿದ್ದೇವೆ. ಮುಂದಿನ ಬುಧವಾರ ನೀವು ಬನ್ನಿ. ಅಂತ ಆ ಪತ್ರದಲ್ಲಿತ್ತು. ಭೇಟಿಯ ಸ್ಥಳ ಈ ಊರಿನಲ್ಲೇ. ಏನೂ ನಷ್ಟವಿಲ್ಲವಲ್ಲಾ ಹೋಗಿಬರೋಣ ಅಂದುಕೊಂಡೆ. ಇಷ್ಟೇ ನೋಡಿ ವಿಷಯ'' ಅಂದ ಗುರುಬಚನ್ ಸಿಂಗ್.

''ಅಂಗಡಿ ಮುಚ್ಚಬೇಕಾಗುತ್ತೇನು ಆ ದಿನ?''

''ಮುಚ್ಚಬೇಕಾಗುತ್ತೆ ಅಂದುಕೊಂಡಿದ್ದೆ. ನನ್ನ ಅದೃಷ್ಟಕ್ಕೆ ಮೊನ್ನೆ ತಾನೆ ಒಬ್ಬ ತರುಣಿ ಕೆಲಸ ಹುಡುಕಿಕೊಂಡು ಬಂದಳು. ಕಾಲೇಜು ವಿದ್ಯಾರ್ಥಿನಿ ಅಂತೆ. ಗ್ಯಾಪ್ ಇಯರ್ ಅದಕ್ಕೆ

ಕಾಲೇಜಿಗೆ ಹೋಗಬೇಕಾಗಿಲ್ಲ. ಏನಾದ್ರೂ ಕೆಲಸವಿದೆಯಾ ಅಂತ ಬಂದ್ಲು. ಒಳ್ಳೇ ರೆಫರೆನ್ಸ್ ಇತ್ತು. ನೀವು ಕೊಟ್ಟ ಸಂಬಳ ನನಗೆ ಒಪ್ಪಿಗೆ ಅಂತ ಬೇರೆ ಹೇಳಿದ್ಲು. ಅವಳನ್ನ ಅಪಾಯಿಂಟ್ ಮಾಡಿಕೊಂಡಿದ್ದೀನಿ. ತುಂಬಾ ಮುತುವರ್ಜಿಯಿಂದ ಕೆಲಸ ಮಾಡ್ತಿದಾಳೆ. ಬಂದ ಗಿರಾಕಿಗಳೆಲ್ಲಾ ಅವಳನ್ನು ತುಂಬಾ ಮೆಚ್ಚಿಕೊಂಡಿದಾರೆ. ಏನು ನಯ ನಾಜೂಕು ಅಂತೀರಾ. ನಾಜ್ನೀನ್ ಅಂತ ಆಕೆ ಹೆಸರು. ಪಾಕಿಸ್ತಾನಿ. ಅವಳ ಮೇಲೆ ಅಂಗಡಿ ಬಿಟ್ಟು ನಿರಾತಂಕವಾಗಿ ಎಲ್ಲಿಗಾದರೂ ಹೋಗಿಬರಬಹುದು. ಅಲ್ದೇ ಬುಧವಾರ ಕೇವಲ ಮೂರು ಗಂಟೆಗಳ ಕಾಲ ತಾನೆ ನಾನು ಹೋಗಬೇಕಾಗಿರೋದು."

ಶರಲೇಖ ತನ್ನ ಪ್ರಶ್ನಾವಳಿಯನ್ನು ಮುಕ್ತಾಯಗೊಳಿಸಿದ. ಟೀ ಮುಗಿಸಿ ಅಲ್ಲಿಂದ ಹಿಂತಿರುಗುವಾಗ ಶರಲೇಖನ ವಿನಂತಿಯ ಪ್ರಕಾರ ಗುರುಬಚನ್ ಸಿಂಗನ ಬಟ್ಟೆ ಅಂಗಡಿಯ ಬಳಿ ಸ್ವಲ್ಪ ಹೊತ್ತು ನಿಂತು ಸುತ್ತಮುತ್ತ ಓಡಾಡಿ ನಂತರ ಮನೆಗೆ ಹಿಂತಿರುಗಿದೆವು.

ಮಾರನೆಯ ದಿನ ಶರಲೇಖ ಬಹು ಮೌನವಾಗಿದ್ದ. ಗುರುಬಚನ್ ಸಿಂಗ್‌ನ ಪರಿಸ್ಥಿತಿ ಇವನಿಗೆ ಕಳವಳವನ್ನುಂಟುಮಾಡಿದ್ದು ನನಗೆ ಸ್ಪಷ್ಟವಾಗಿತ್ತು. ಬೆಳಗಿನ ತಿಂಡಿ ಆದಮೇಲೆ "ಲಂಡನ್ನಿಗೆ ಹೋಗಿ ಜಿಮ್‌ನ ಭೇಟಿ ಮಾಡಿ ಬರ್ತೇನೆ. ರಾಮ್‌ಗೆ ಮಂಗಳವಾರ ಹಿಂದಕ್ಕೆ ಬರ್ತಾನೆ ಅಂತ ತಿಳಿಸಿಬಿಡು" ಅಂತ ಹೇಳಿ ಶರಲೇಖ ಲಂಡನ್ ಟ್ರೇನ್ ಹಿಡಿದ.

ಮಂಗಳವಾರ ಬೆಳಿಗ್ಗೆ ಶರಲೇಖನಿಂದ ಮೊಬೈಲ್ ಕಾಲ್ ಬಂತು. "ಎಕ್ಸೆಟರಿನಲ್ಲಿ ಇದ್ದೇನೆ. ಜಿಮ್ ಕೂಡಾ ಜೊತೆಯಲ್ಲಿ ಇದ್ದಾನೆ. ಇಲ್ಲಿನ ಓಕ್ ಕ್ಲಿಫ್ ಹೌಸಿಗೆ ನೇರವಾಗಿ ಬಂದುಬಿಡು. ಬಸ್‌ಸ್ಟಾಂಡ್ ಹತ್ತಿರಾನೇ ಇದೆ" ಅಂದ ಶರಲೇಖ.

ಸಂಜೆ ಮುಂಚೆಯೇ ನಾನು ಎಕ್ಸೆಟರಿನಲ್ಲಿದ್ದೆ. ಶರಲೇಖನ ಕೊಠಡಿಯಲ್ಲಿ ಜಿಮ್ ಕೂಡಾ ಕುಳಿತಿದ್ದ. ಇಬ್ಬರೂ ಗಂಭೀರವಾಗಿದ್ದದ್ದು ನೋಡಿ ನನಗೆ ಸಣ್ಣಗೆ ಆತಂಕ ಶುರುವಾಯಿತು.

"ಒಂದು ಟೆರರಿಸ್ಟ್ ಹಂಚಿಕೆಯನ್ನು ನಾಳೆ ಭೇದಿಸಿ ಅಪರಾಧಿಗಳನ್ನ ಹಿಡಿಯಬೇಕು. ಲಂಡನ್ನಿನ ಆಂಟಿ ಟೆರರಿಸ್ಟ್ ಸ್ಕ್ವಾಡ್ ಈಗಾಗಲೇ ಈ ಊರಿನಲ್ಲಿ ಬೀಡು ಬಿಟ್ಟಿದ್ದಾರೆ. ಅವತ್ತು ಸುರೀಂದರ್ ಬಿಳಿಯ ಗಡ್ಡಕ್ಕೆ ಐನೂರು ಪೌಂಡ್ ಅಂತ ಹೇಳಿದಾಗಲೇ ಇದರಲ್ಲಿ ಏನೋ ಕೃತ್ರಿಮ ಇದೆ ಅಂತ ಅಂದುಕೊಂಡೆ. ಆಮೇಲೆ ಅಂಗಡಿಯ ಪರಿಸರ ಪರಿಶೀಲಿಸಿದಾಗ ಅಂಗಡಿಗೆ ಹೊಂದಿಕೊಂಡಂತೆಯೇ ಇಲ್ಲಿನ ಅತಿ ದೊಡ್ಡ ಬ್ಯಾಂಕುಗಳಲ್ಲಿ ಒಂದಾದ ನಾರ್ಥರ್ನ್ ಬಾರ್ಕ್ಲೇಸ್ ಬ್ಯಾಂಕಿನ ಕಟ್ಟಡ ಇರುವುದನ್ನು ನೋಡಿದೆ. ನಾಳೆ ಬುಧವಾರ ನಾಜ್ನೀನ್ ಒಬ್ಬಳೇ ಅಂಗಡಿಯಲ್ಲಿ ಇರುವಂತೆ ಅನುಕೂಲ ಮಾಡಿಕೊಂಡಿರುವುದು ಸಂಶಯಾಸ್ಪದ ಅನ್ನಿಸಿತು. ಜಿಮ್‌ಗೆ ಫೋನ್ ಮಾಡಿ ತಿಳಿಸುವವರೆಗೂ ನನಗೆ ಚಿತ್ತಸಿದ್ಧಿ ಇರಲಿಲ್ಲ. ಅವನು ನಿನ್ನ ಮೊನ್ನೆ ಅಲ್ಲೆಲ್ಲಾ ಇಲೆಕ್ಟ್ರಾನಿಕ್ ಸರ್ವೆ ನಡೆಸಿ ಗುರುಬಚನ್ ಅಂಗಡಿಯ ಬೇಸ್‌ಮೆಂಟಿನಲ್ಲಿ ಅತಿ ಮುಂದುವರಿದ ಇಲೆಕ್ಟ್ರಾನಿಕ್ ಸಾಧನಗಳು ಇರುವುದನ್ನು ಪತ್ತೆ ಮಾಡಿದ್ದಾನೆ. ಆತಂಕವಾದಿಗಳನ್ನು ಪುರಾವೆ ಸಹಿತ ಹಿಡಿಯುವ ಉದ್ದೇಶದಿಂದ ನಾಳೆವರೆಗೂ ಕಾದು ಸ್ಥಳದಲ್ಲೇ ಅವರನ್ನು ಹಿಡಿಯುವ ಪ್ಲಾನ್ ನಮ್ಮದು" ಅಂತ ಶರಲೇಖ ವಿವರಿಸಿದ.

ಅವನ ಮಾತಿಗೆ ಪೂರಕವಾಗಿ ಜಿಮ್ "ನಿನ್ನೆ ನಮ್ಮ ಅಧಿಕಾರಿಗಳು ಬ್ಯಾಂಕಿನ ಮ್ಯಾನೇಜರನ್ನು ಭೇಟಿಮಾಡಿದ್ದರು. ನಾಳೆ ಬೆಳಿಗ್ಗೆ ಅವರ ಬ್ಯಾಂಕಿನಲ್ಲಿ ಹೊಸದಾಗಿ ನಿರ್ಮಿಸಿರುವ ಲಾಕರಿಗೆ ಇಲೆಕ್ಟ್ರಾನಿಕ್ ಬೀಗಗಳನ್ನು ಅಳವಡಿಸುವ ಕಾರ್ಯಕ್ರಮ ಇದೆಯಂತೆ, ಅಳವಡಿಸುವಾಗ ಹತ್ತಿರದಿಂದ ಸೂಕ್ಷ್ಮ ಉಪಕರಣಗಳ ಸಹಾಯದಿಂದ ಅದರ ಕೋಡನ್ನು ಕಂಡುಕೊಳ್ಳುವುದು ಸಾಧ್ಯವಂತೆ. ಒಮ್ಮೆ ಬ್ಯಾಂಕಿನ ಗುಪ್ತ ಕೋಡ್ ಆತಂಕವಾದಿಗಳ ಕೈಗೆ ಸಿಕ್ಕಿದರೆ ಮುಂದೆ ಆಗಬಹುದಾದ ಅನಾಹುತಾನ ಯಾರು ಬೇಕಾದರೂ ಊಹಿಸಬಹುದು" ಅಂತ ಇನ್ನೂ ಹೆಚ್ಚು ವಿವರಣೆ ನೀಡಿದ.

ಮಾರನೆಯ ಬೆಳಿಗ್ಗೆ ಜಿಮ್, ಶರಲೇಖ ಮತ್ತು ನಾನು ಆ ಅಂಗಡಿಯ ಹತ್ತಿರ ಹೊಂಚು ಕಾದೆವು. ಒಂಭತ್ತಕ್ಕೆ ಗುರುಬಚನ್ ಬಂದು ಅಂಗಡಿ ಬಾಗಿಲು ತೆರೆದು ಒಳಗೆ ಹೋದ. ಐದು ನಿಮಿಷಗಳ ನಂತರ ಒಬ್ಬ ತರುಣಿ ಅಂಗಡಿಯೊಳಕ್ಕೆ ಹೋದಳು. ಒಂಭತ್ತೂವರೆಯ ಹೊತ್ತಿಗೆ ಗುರುಬಚನ್ ಅಂಗಡಿಯಿಂದ ಹೊರಬಂದು ಕಾರು ಹತ್ತಿ ಹೊರಟ. ಐನೂರು ಪೌಂಡುಗಳ ಕನಸು ಕಾಣುತ್ತಿರಬಹುದು ಅಂದುಕೊಂಡೆ. ಅದಾದ ಐದು ನಿಮಿಷಗಳಲ್ಲಿ ಇಬ್ಬರು ಕಪ್ಪು ಗಡ್ಡ ಬಿಟ್ಟ ತರುಣರು ಅಂಗಡಿಯ ಒಳಹೊಕ್ಕರು. ಅವರುಗಳು ಒಳಹೊಕ್ಕ ಕೆಲವೇ ನಿಮಿಷಗಳಲ್ಲಿ ಅಂಗಡಿಯ ಬಾಗಿಲು ಮುಚ್ಚಿಕೊಂಡಿತು. ಹೊರಗಾಜಿನ ಮೂಲಕ ನೋಡಿದಾಗ "ಸ್ಟಾಕ್ ಪರಿಶೀಲನೆಗೋಸ್ಕರ ಅಂಗಡಿಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ" ಎಂಬ ಫಲಕ ಕಂಡುಬಂತು.

ಜಿಮ್ ಮತ್ತು ಶರಲೇಖ ಏನೂ ಅವಸರವಿಲ್ಲದೇ ತಮ್ಮ ಹೊಂಚನ್ನು ಮುಂದುವರಿಸಿದ್ದನ್ನು ಕಂಡು ನನಗೆ ಆಶ್ಚರ್ಯವಾಯಿತು. "ಬಾಗಿಲನ್ನು ಒಡೆದು ಒಳಕ್ಕೆ ಹೋಗೋಣ. ಏನಾದರೂ ಅನಾಹುತ ಆದೀತು" ಅಂತ ಗಾಬರಿಯಿಂದ ಹೇಳಿದೆ. ಜಿಮ್ ನಕ್ಕು, "ನಮ್ಮ ಸ್ಕ್ವಾಡಿನವರು ನಿನ್ನೆ ರಾತ್ರಿಯೇ ಅಂಗಡಿಯ ಒಳಗಡೆ ಅವಿತಿದ್ದಾರೆ. ಒಳಗಿನಿಂದ ನನಗೆ ವೀಕ್ಷಣೆ ವಿವರಣೆ ಬರುತ್ತಿದೆ. ಆ ತರುಣಿ ತನ್ನ ಸಂಗಡಿಗರೊಡನೆ ತನ್ನ ಇಲೆಕ್ಟ್ರಾನಿಕ್ ಉಪಕರಣವನ್ನ ಚಾಲನೆಗೊಳಿಸಿದ್ದಾಳಂತೆ. ಬ್ಯಾಂಕಿನಿಂದ ಹೊರಹೊಮ್ಮುತ್ತಿರುವ ಎಲ್ಲ ತಪ್ಪು ಕೋಡ್‌ಗಳನ್ನೂ ಇವರು ಬಹು ಮುತುವರ್ಜಿಯಿಂದ ರೆಕಾರ್ಡ್ ಮಾಡುತ್ತಿದ್ದಾರಂತೆ. ರೆಕಾರ್ಡಿಂಗ್ ಪೂರ್ತಿ ಮುಗಿದ ನಂತರ ಇವರನ್ನ ಹಿಡಿದರೆ ಮುಂದೆ ಕೋರ್ಟಿನಲ್ಲಿ ಅವರ ಅಪರಾಧವನ್ನು ಸಾಬೀತುಪಡಿಸುವ ಕೆಲಸ ಸುಲಭವಾದೀತು" ಅಂತ ಜಿಮ್ ಹೇಳಿದ. ಸುಮಾರು ಒಂದು ಗಂಟೆಯ ಕಾಲ ಕಾದಮೇಲೆ, ಅಂಗಡಿಯ ಬಾಗಿಲು ತೆರೆಯಿತು. ಒಳಗಿನಿಂದ ಪೋಲೀಸ್ ಅಧಿಕಾರಿಗಳು ಮೂವರು ಆತಂಕವಾದಿಗಳನ್ನು ಬಂಧಿಸಿ ಹೊರತಂದರು. ಅವರುಗಳನ್ನು ವ್ಯಾನಿನಲ್ಲಿ ಪೋಲೀಸ್ ಠಾಣೆಗೆ ಸಾಗಿಸಿದ ನಂತರ ನಾವು ಅಂಗಡಿಯ ಒಳಹೊಕ್ಕು ಗುರುಬಚನ್ ಆಗಮನಕ್ಕೆ ಕಾದೆವು. ನಾವೇನು ಬಹಳ ಹೊತ್ತು ಕಾಯಬೇಕಾಗಲಿಲ್ಲ. ಹತ್ತೇ ನಿಮಿಷಗಳಲ್ಲಿ ಸರ್ದಾರ್ಜಿ ಆಗಮಿಸಿದ. ನಮ್ಮಗಳನ್ನು ನೋಡಿ ಆತನಿಗೆ ಆಶ್ಚರ್ಯವೋ ಆಶ್ಚರ್ಯ.

"ಏನಿಮ, ನಾಷ್ಮೇನ್ ಎಲ್ಲಿ? ನೀವೆಲ್ಲಾ ಏನ್ಮಾಡ್ತಾ ಇದೀರಾ ಇಲ್ಲಿ?" ಅಂತ ಪ್ರಶ್ನೆಗಳ ಮಳೆಗರೆದ.

ಶರಲೇಖ "ಸಾವಧಾನ ಸರ್ದಾರ್ಜಿ, ಎಲ್ಲ ಹೇಳ್ತೀವಿ. ಅದಕ್ಕೆ ಮುಂಚೆ ನಿಮ್ಮ ಪ್ರವಚನದ ಕಥೆ ಏನಾಯ್ತು ಹೇಳಿ. ಎರಡು ಘಂಟೆ ಮುಂಚೇನೇ ಬಂದಿರೋಹಾಗಿದೆಯಲ್ಲಾ." ಅಂತ ಕೇಳಿದ.

ಅದಕ್ಕೆ ಗುರುಬಚನ್ "ಎಲ್ಲಾ ಬರೀ ಮೋಸ. ಅಲ್ಲಿಗೆ ಹೋದ ತಕ್ಷಣ ಎಲ್ಲಾ ಚೆನ್ನಾಗೇ ಇತ್ತು. ನನ್ನ ತರಹ ಮೂರು ಜನ ಇದ್ರು ಅಷ್ಟೇ. ಗುರ್ಬಾನೀದು ಒಂದು ಸಿಡಿ ಹಾಕಿದ್ರು. ಸ್ವಲ್ಪ ಹೊತ್ತು ಕೇಳೋದಕ್ಕಿಲ್ಲ, ಯಾವೋನೋ ಅವಸರದಿಂದ ಒಳಕ್ಕೆ ಬಂದು, ಸಿಡಿ ಆಫ್ ಮಾಡಿ ನಾಳೆ ಬನ್ನಿ ನಿಮ್ಮ ಸಂಭಾವನೆಗೇ ಅಂತ ಹೇಳಿ ಓಡಿ ಹೋಗಿಬಿಟ್ಟ. ಬಂದ ದಾರಿಗೆ ಸುಂಕವಿಲ್ಲ ಅಂತ ನಾನು ಹಿಂತಿರುಗಿದೆ" ಅಂದ.

"ಒಳ್ಳೇ ಕೆಲಸ ಮಾಡಿದ್ರಿ. ನಾಷ್ಮೇನ್ ಬಗ್ಗೆ ನಮಗೆ ಸ್ವಲ್ಪ ಮಾಹಿತಿ ಬೇಕು. ಅದಕ್ಕೆ ನಮ್ಮ ಜೊತೆ ಸ್ವಲ್ಪ ಠಾಣೆಗೆ ಬಂದ್ರೆ ತುಂಬ ಉಪಕಾರ' ಎನ್ನುತ್ತಾ ಜಿಮ್ ನಮ್ಮ ಬಿಳೀಗಡ್ಡದ ಸರ್ದಾರ್ಜಿಯನ್ನ ಕರೆದುಕೊಂಡು ಹೋದ. ನಾನು ಶರಲೇಖನನ್ನ ಕರೆದುಕೊಂಡು ಎಕ್ಸೆಟರ್ ಸುತ್ತಲು ಹೊರಟೆ. ಬಹು ಸುಂದರ ಊರು ಎಕ್ಸೆಟರ್.

ಮಿನಿ ಹನಿಗಳು

ಬಾಸ್: ನಿನಗೆ ಔಟ್ ಆಫ್ ಟರ್ನ್ ಪ್ರಮೋಷನ್ ಕೊಟ್ಟಿದ್ದೇನೆ. ನಾಳೆಯಿಂದ ಇಬ್ಬರ ಕೆಲಸ ನೀನೊಬ್ಬನೇ ಮಾಡಬೇಕು. ಸಂಬಳ ಅದೇ.

★★★

ಗಂಡ ಐ ಹ್ಯಾವ್ ಚೇಂಜಡ್ ಮೈ ಮೈಂಡ್ ಎಂದರೆ ಹೆಂಡತಿ ಹೋಗಲಿ, ಅದು ಈಗಾದರೂ ಕೆಲಸ ಮಾಡುವುದೇನೋ ನೋಡೋಣ ಎನ್ನುವುದೆ?

★★★

ಕುಚೇಲನ ಸಮಸ್ಯೆ: ತಮಿಳಗರಿಗೆ ರಜನೀಕಾಂತ್ ಒಬ್ಬ ಕನ್ನಡಿಗ; ಕನ್ನಡಿಗರಿಗೆ ಅವರು ಒಬ್ಬ ಮರಾಠಿ; ಅವರ ಮನೆ ಮಾತು ಮರಾಠಿ ಆದರೂ ಮರಾಠಿಗರಿಗೆ ಅವರು ಬೇಕಾಗಿಲ್ಲ.

ಕೊರವಂಜಿ ಅಪರಂಜಿ ಟ್ರಸ್ಟ್, ಬೆಂಗಳೂರು

ಮತ್ತು

ಭಾರತೀಯ ವಿದ್ಯಾ ಭವನ, ಬೆಂಗಳೂರು

ಅಪರಂಜಿ ಮಾಸ ಪತ್ರಿಕೆಯ ಬೆಳ್ಳಿ ಹಬ್ಬ
ಸಮಾರೋಪ ಸಮಾರಂಭ
ಅಕ್ಟೋಬರ್ 2, 2008

ಅಧ್ಯಕ್ಷತೆ : ಪ್ರೊ. ಅ. ರಾ. ಮಿತ್ರ

ಮುಖ್ಯ ಅತಿಥಿಗಳು : ಶ್ರೀ ಸಿ ಎಸ್ ಹನುಮಂತರಾಯ
ಶ್ರೀ ಎನ್ ರಾಮಾನುಜ
ಶ್ರೀ ಎಂ ಶಿವಕುಮಾರ್

ಜೊತೆಗೆ

ವಿಶೇಷ ಆಕರ್ಷಣೆ : ಶ್ರೀ ಶ್ರೀನಿವಾಸ ವೈದ್ಯ ಅವರಿಂದ ಕಥಾಕಥನ

ಅಪರಂಜಿಗೆ ಗಾಯನ ಸುಧೆ
ಶ್ರೀಮತಿ ಸಂಗೀತಾ ಕಟ್ಟಿ ಕುಲಕರ್ಣಿ ಅವರಿಂದ

ಇನ್ನೊಂದು ವಿಶೇಷ
ಹಾಸ್ಯಾವಧಾನ - ಶತಾವಧಾನಿ ಡಾ. ಗಣೇಶ್ ಅವರಿಂದ

ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ
ಖಿಂಚಾ ಸಭಾಂಗಣ, ಭಾರತೀಯ ವಿದ್ಯಾ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು- 1



ಎಲ್ಲರಿಗೂ ಹೃದಯಪೂರ್ವಕ ಸ್ವಾಗತ

ಕೊರವಂಜಿ ಅಪರಂಜಿ ಟ್ರಸ್ಟ್, ಬೆಂಗಳೂರು

ಮತ್ತು

ಭಾರತೀಯ ವಿದ್ಯಾ ಭವನ, ಬೆಂಗಳೂರು

ವಿನೂತನ ಚಿಂತನ-ಮಂಥನ ಕಾರ್ಯಕ್ರಮ

ಅಕ್ಟೋಬರ್ 1, 2008

ಹಾಸ್ಯ ಸಾಹಿತ್ಯ - ಬರಹ ಲಘು ಚಿಂತನ ಗಂಭೀರ

ಚಿಂತನೆ ನಡೆಸಿಕೊಡುವವರು : ಪ್ರೊ. ಅ ರಾ ಮಿತ್ರ

ಅಧ್ಯಕ್ಷತೆ : ಶ್ರೀ ಎನ್. ರಾಮಾನುಜ

ಚಿಂತಿಸುವವರು

- ಶ್ರೀ ಶ್ರೀನಿವಾಸ ವೈದ್ಯ ಹೇಳ್ಲಿಕ್ಕೆ ಹೊಂಟಾರ ಹಾಸ್ಯ ಸಮರಸಕ್ಕೆ ಪೂರಕ ಅಂತ.
- ಕಡಲಾಚೆಯಿಂದ ಮೂಡಿ ಬಂದಿರುವ ಸ್ಫೂರ್ತಿಯ ಚಿಲುಮೆಗಳತ್ತ ಶ್ರೀ ಎಂ. ಶಿವಕುಮಾರ್ ನಮ್ಮ ಗಮನ ಸೆಳೆಯಲಿದ್ದಾರೆ
- ಹಾಸ್ಯ ಸಾಹಿತ್ಯದ ಬಲಿಪಶುಗಳ ಬಗ್ಗೆ ಅನುಕಂಪ ಸೂಸುವ ಜೋಗಿ 'ಯಾಕೆ ಸ್ವಾಮಿ ನಾವೇ ಆಗ್ಬೇಕಾ?' ಎಂದು ಅವರ ಪರವಾಗಿ ಕೇಳುತ್ತಿದ್ದಾರೆ.
- 'ಕವಿತ - ಅಲ್ಲೂ ಹಾಸ್ಯ ಐತಾ?' ಎಂಬ ಪ್ರಶ್ನೆ ಹಾಕುವ ಶ್ರೀ ಎಚ್. ಡುಂಡಿರಾಜ್ ಕವಿತೆಯಲ್ಲಿ ಅವಿತ ಹಾಸ್ಯವನ್ನು ಹೊರಹಾಕುವ ಪ್ರಯತ್ನ ನಡೆಸಲಿದ್ದಾರೆ.
- ಹಾಸ್ಯ ಬರವಣಿಗೆಯ ಹಿಂದೆ ಇರುವ ಬವಣೆಯನ್ನು ಸ್ವತಹ ಅನುಭವಿಸುತ್ತಿರುವ ಶ್ರೀಮತಿ ಭುವನೇಶ್ವರಿ ಹೆಗಡೆ 'ತಮಾಷೆ ಬರೆಯುವುದು ತಮಾಷೆಯಲ್ಲ' ಎಂಬ ಎಚ್ಚರಿಕೆ ನೀಡಲಿದ್ದಾರೆ.
- ನಗೆಯ ಒಂದು ವೈಜ್ಞಾನಿಕ ವಿಶ್ಲೇಷಣೆಯನ್ನು ವೈದ್ಯರಾದ ಡಾ|| ಓಂ ಪ್ರಕಾಶ್ ಮಾಡಲಿದ್ದಾರೆ.

ಬೆಳಗ್ಗೆ 10 ಗಂಟೆಯಿಂದ 2 ಗಂಟೆಯವರೆಗೆ
ಭಾರತೀಯ ವಿದ್ಯಾಭವನ ಇ.ಎಸ್.ವಿ. ಸಭಾಂಗಣ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 1

ಎಲ್ಲ ಹಾಸ್ಯಾಸಕ್ತರಿಗೆ ಆದರದ ಸ್ವಾಗತ

ಹುರುಳಿ ಕಟ್ಟು.....

ಮೆಟಾಮಾರ್ಫಸಿಸ್!

- ಎಚ್. ಗೋಪಾಲಕೃಷ್ಣ

ಸುಮಾರು ವರ್ಷ ಒಂದು ಕಾರ್ಮಿಕ ಸಂಘಟನೆಯ ನಾಯಕರಾಗಿದ್ದವರು ಮತ್ತು ಈಗ ನಿವೃತ್ತ ಜೀವನ ಸಾಗಿಸುತ್ತಿರುವ ಗೆಳೆಯರೊಬ್ಬರು ಮೊನ್ನೆ ಸಿಕ್ಕಿದ್ದರು. ಅಯಾಚಿತವಾಗಿ ಅವರ ಕಾಲದಲ್ಲಿದ್ದ ಟ್ರೇಡ್ ಯೂನಿಯನ್ ಮೂವ್‌ಮೆಂಟಿಗೂ ಪ್ರಸ್ತುತ ಇರುವುದಕ್ಕೂ ಹೋಲಿಕೆ ಶುರುವಾಯಿತು. ಆಗಿನ ನಾಯಕರು ಹೇಗೆ ಮಿಲಿಟೆಂಟ್ ಆಗಿದ್ದರು, ಅದು ಈಗ ಹೇಗೆ ಡೈಲ್ಯೂಟ್ ಆಗಿಹೋಗಿದೆ, ಆಗಿನಲ್ಲಿ ನಮಗೆಲ್ಲಾ ಒಂದು ಬದ್ಧತೆ ಅಂತ ಇರ್ತಿತ್ತು, ಈಗ ಬದ್ಧತೆ ಅನ್ನೋದೇ ಇಲ್ಲ ಮೊದಲಾಗಿ ಅವರು ವಿವರಿಸುತ್ತಿದ್ದರು.

ಅನುಭವದಿಂದ ಹೇಳಬೇಕೂಂದರೆ ಕಾರ್ಮಿಕರನ್ನ ಯಾವಾಗಲೂ ಒಂದು ರೀತಿಯ ನೋವು ಹಾಗೂ ಆಕ್ರೋಶದ ಮತ್ತು ಇಡೀ ಜಗತ್ತು ನನಗೆ ಮೋಸಮಾಡಿದೆ ಎಂಬುವ ಮನೋಭಾವದಲ್ಲಿ ಮುಳುಗಿರುವಂತೆ ಮೈಂಡ್ ಸೆಟ್ ರೆಡಿಯಾಗಿರುತ್ತೆ. ಇದಕ್ಕೊಂದು ಸಂಗತಿ ನನ್ನ ನೆನಪಿಗೆ ಬರುತ್ತಿರುವುದು ಎಂದರೆ ನಮ್ಮ ಸಹೋದ್ಯೋಗಿಗಳು ನಿವೃತ್ತರಾದಾಗ ಅವರುಗಳಿಗೆ ಕೊನೇ ದಿವಸ ಒಂದು ಸಮಾರಂಭ ಏರ್ಪಡಿಸಿ ಅವರ ಕೆಲಸ ಕಾರ್ಯ ಪ್ರಾಮಾಣಿಕತೆ ಶ್ರದ್ಧೆ ಇವನ್ನೆಲ್ಲಾ ಸ್ವಲ್ಪ ಅತಿರಂಜಿತವಾಗಿ ಹೊಗಳಿ ನಂತರ ಅವರನ್ನ ಮಾತನಾಡಲು ಕೋರುತ್ತೇವೆ.

ಮೊದಮೊದಲು ಇಂಥ ಕಾರ್ಯಕ್ರಮ ನಡೆದಾಗ ನಿವೃತ್ತ ಕಾರ್ಮಿಕರು ತಮಗೆ ಆಗಿದೆ ಎಂದು ಅಂದುಕೊಂಡಿರುವ ಮೋಸವನ್ನು ಕುರಿತು ಎಷ್ಟು ಆವೇಶಭರಿತರಾಗಿ ಮಾತನಾಡುತ್ತಿದ್ದರು ಎಂದರೆ ಇವರುಗಳು ಮೂವತ್ತು ಮೂವತ್ತೈದು ವರ್ಷಗಳ ಕಾಲ ಒಂದು ಸಂಸ್ಥೆಗೆ ದುಡಿದು ಏನೂ ಪ್ರತಿಫಲ ಪಡೆದೇ ಇಲ್ಲವೇ ಅಂತ ದುಃಖ ನಮಗೇ ಆಗುತ್ತಿತ್ತು. ಜತೆಗೆ ಪಾಪ ರಿಟೈರ್ ಆಗ್ತಾ ಇದಾರೆ, ಈಗಲೂ ತಲೆ ತುಂಬಾ ಆ ಕಹಿಭಾವನೆ ತುಂಬಿಕೊಂಡು ಹೋಗಬೇಕೇ ಇವರು ಅಂತಲೂ ಅನ್ನಿಸುತ್ತಿತ್ತು. ಅದಕ್ಕಿಂತಲೂ ಹೆಚ್ಚಿನದಾಗಿ ಈ ಚಿಂತೆಯಲ್ಲಿ ಇವರು ನೆಮ್ಮದಿ ಕೆಡಿಸಿಕೊಂಡು ಮನೆಯನ್ನೂ ನರಕ ಮಾಡಿಬಿಡುತ್ತಾರೆ ಎಂಬ ಭಯ ಸಹಾ ನಮ್ಮನ್ನು ಆವರಿಸಿಕೊಂಡಿತ್ತು.

ಈ ಸಮಯದಲ್ಲಿಯೇ ಒಂದು ಯೋಚನೆ ಹೊಳೆಯಿತು. ಋಣಾತ್ಮಕ ಅಂಶಗಳನ್ನು ರಿಟೈರ್ ಆಗುತ್ತಿರುವ ನಮ್ಮ ಸಹೋದ್ಯೋಗಿಗಳ ತಲೆಯಿಂದ ಆಚೆ ಓಡಿಸಿ ಅವರಲ್ಲಿ ಸಮಾಜದಿಂದ ಇಷ್ಟು ವರ್ಷ ನಾವೇನು ಪಡೆದೆವು, ಅದರಿಂದ ನಮ್ಮ ಜೀವನ ಎಷ್ಟು ಸೊಗಸು ಅಂತ ಅನಿಸಿತು ಅನ್ನುವ ಭಾವನೆ ಮೂಡಿಸಿ ಅವರ ನೆಮ್ಮದಿಯನ್ನು ಕಾಪಾಡಿಕೊಳ್ಳುವ ಬಗ್ಗೆ ಅರಿವು ಮೂಡಿಸಬೇಕು ಅಂತ. ಈ ವಿಷಯದಲ್ಲಿ ಕಾರ್ಯೋನ್ಮುಖರಾದೆವು.

ಉದ್ಯೋಗಿಗಳಲ್ಲಿ ನೆಗಟೀವ್ ಯೋಚನೆಗಳ ಬದಲಿಗೆ ಪಾಸಿಟೀವ್ ಯೋಚನೆ ಹೇಗೆ ತುಂಬ ಬಹುದು ಅಂತ ಯೋಚಿಸಿ ಯೋಜಿಸಿದೆವು.

ನಿವೃತ್ತ ಕಾರ್ಮಿಕರಿಗೆ ಬೀಳ್ಕೊಡುಗೆ ಸಮಾರಂಭ ನಡೆದಾಗಲೆಲ್ಲಾ ಸಂಸ್ಥೆ ಮೇಲಿನ ಆಕ್ರೋಶ ಹೊರಹೊಮ್ಮುತ್ತಿರುವಾಗಲೇ ಸದ್ದಿಲ್ಲದೇ ನಮ್ಮ ಪ್ರಯತ್ನ ಮತ್ತೊಂದು ಕಡೆ ಮುಂದುವರೆದೇ ಇತ್ತು.

ಪ್ರತಿಯೊಬ್ಬರನ್ನೂ ವೈಯಕ್ತಿಕವಾಗಿ ಸಂಪರ್ಕ ಮಾಡಿದೆವು. ನಿವೃತ್ತರಾಗುವ ಸಮಯದಲ್ಲಿ ನಮ್ಮ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ಅಂತ ಪೀಠಿಕೆ ಹಾಕಿ ಆರೋಗ್ಯ ಹಾಳಾಗಲು ಮುಖ್ಯ ಕಾರಣ ನಮ್ಮ ಮನೋಸ್ಥಿತಿ, ಅದನ್ನ ಚೆನ್ನಾಗಿ ಇಟ್ಟುಕೋಬೇಕು, ಈಗ ಹೇಗಿದೀರಿ ಅದನ್ನ ಯೋಚಿಸಿ. ಮೂವತ್ತು ವರ್ಷದ ಹಿಂದೆ ಇದ್ದ ಹಾಗೆ ನಾವ್ಯಾರೂ ಈಗಿಲ್ಲ, ನಿಮಗೆ ನಿಮ್ಮ ಬೆಳವಣಿಗೆ ಹೇಗಾಗಿದೆ ಅಂತ ಅರಿವು ಬರಲಿ... ಹೀಗೆ ಮನಸ್ಸು ಬದಲಾಯಿಸಿದೆವು. ಫಲಿತಾಂಶ ಎಷ್ಟು ಬೇಗ ಕಂಡಿತು ಗೊತ್ತೇ? ಐದೇ ತಿಂಗಳು ಸಾಕಾಯಿತು ಹೊಸ ಯೋಚನೆಗಳನ್ನ ಬಿತ್ತಿ ಬೆಳೆಸಲು.

ಏಪ್ರಿಲ್ ತಿಂಗಳು ಅಂತ ತೋರುತ್ತೆ. ಎಂದಿನ ಹಾಗೆ ಫೇರ್‌ವೆಲ್ ಸಮಾರಂಭ. ನಿವೃತ್ತರಾಗುತ್ತಿರುವ ಸಹೋದ್ಯೋಗಿಗಳು ಒಂದೆಡೆ ಕೂತಿದಾರೆ.ಅವರ ಬಗ್ಗೆ ಕೆಲವು ಒಳ್ಳೆಯ ಮಾತನಾಡಿಯಾಯಿತು. ಹಾರ ಶಾಲು ನೆನಪಿನ ಕಾಣಿಕೆ ಸಿಹಿ ಪೊಟ್ಟಣ ನೀಡಿಯೂ ಆಯಿತು. ನಿವೃತ್ತರಾಗಲಿದ್ದ ಮೊದಲನೇ ಸಹೋದ್ಯೋಗಿಯನ್ನು ಮಾತನಾಡಲು ಆಹ್ವಾನಿಸಿದೆವು.

ವೇದಿಕೆ ಹತ್ತಿದರು. ಈ ವರೆಗೆ ಯಾವುದೂ ಸಭೆ ಸಮಾರಂಭದಲ್ಲಿ ಮಾತನಾಡಿದವರೇ ಅಲ್ಲ ಈತ. ಒಂದು ನಿಮಿಷ ಸುತ್ತಲೂ ನೆರೆದವರನ್ನು ವೀಕ್ಷಿಸಿದರು. ಮಾತು ಓತಪ್ರೋತವಾಗಿ ಹೇಗೆ ಹರೀತು ಅಂತೀರೀ.....

ದಾವಣಗೆರೆಯಿಂದ ಬೆಂಗಳೂರಿಗೆ ಬಂದೆ-ಈ ಫ್ಯಾಕ್ಟರೀಲಿ ಕೆಲಸ ಸಿಕ್ಕಿತ್ತು. ಕೈಯಲ್ಲಿ ಒಂದು ಚಾಪೆ, ಒಂದು ತಗಡಿನ ಟ್ರಂಕು ಹೊತ್ತುಕೊಂಡು ಬಂದಿದ್ದೆ. ಈಗ ರಿಟೈರ್ ಆಗುತ್ತಿರಬೇಕಾದರೆ ಅವತ್ತಿನ ದಿವಸ ಇವತ್ತಿನ ದಿವಸವನ್ನ ಸುಮ್ಮನೆ ಹೋಲಿಸಬೇಕು ಅಂತ ಅನಿಸಿತು. ಇಲ್ಲಿ ಬಂದಮೇಲೇನೇ ಮದುವೆ ಮಕ್ಕಳು ಎಲ್ಲವೂ ಆಗಿದ್ದು, ಮೂರು ಜನ ಮಕ್ಕಳಲ್ಲಿ ಇಬ್ಬರು ಅಮೇರಿಕಾದಲ್ಲವರೆ, ಒಬ್ಬ ನನ್ನ ಜತೆಗೆ ಅವ್ನೆ. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದ್ದು ಮುಂದೆ ತಂದಿದ್ದೂ ಎಲ್ಲಾ ಈ ಸಂಸ್ಥೆಯಿಂದಾನೇ. ಯಶವಂತಪುರದಲ್ಲಿ ಸ್ವಂತ ಮನೆ ಮಾಡಿಕೊಂಡೆ, ಐದು ಮನೇನ ಬಾಡಿಗೇಗೆ ಬಿಟ್ಟಿದೀನಿ....

ಈ ಸಂಸ್ಥೆಗೆ ಕೆಲಸಕ್ಕೆ ಸೇರಿರಲಿಲ್ಲ ಅಂದರೆ ನಾನು ಈಗ ಏನಾಗಿರ್ತಾ ಇದ್ದೆ ಅಂತ ನೆನೆಸಿಕೊಳ್ಳಲೂ ಆಗುಲ್ಲಾ......

ಸಹೋದ್ಯೋಗಿಗಳ ಮನಸ್ಸಿನಲ್ಲಿ ಈ ರೀತಿಯ ಮಾರ್ಫಾಸಿಸ್ ತರಲು ಪ್ರಯತ್ನಿಸಿದ್ದ ನಮಗೆ ನಮ್ಮ ಕಾರ್ಯದಲ್ಲಿ ಯಶಸ್ವಿಯಾದೆವು ಅನ್ನುವ ಕಿರೀಟ ಗೆದ್ದ ಸಂಭ್ರಮ ಅತಿ

ಸಹಜವಾಗಿಯೇ ಮೂಡಿತ್ತು. ನಮ್ಮ ಸಹೋದ್ಯೋಗಿಗಳಿಗೆ ಅವರು ಕೆಲಸದಿಂದ ನಿವೃತ್ತರಾಗಿ ಹೋಗುವಾಗ ಮತ್ತೆ ಮತ್ತೆ ಒಂದು ಮಾತನ್ನ ಹೇಳ್ತಾನೇ ಇರುತ್ತೇವೆ. ನೆಮ್ಮದಿಯನ್ನ ಯಾವ ಕಾರಣಕ್ಕೂ ಕೆಡಿಸಿಕೋಬೇಡಿ, ಸಂಸ್ಥೆ ನಿಮಗೆ ಮೋಸ ಮಾಡಿದೆ ಅಂತ ನಿಮಗೆ ಅನಿಸಿದ್ದರೂ ಮೋಸ ಸರಿಪಡಿಸಲು ಸಾಕಷ್ಟು ಪ್ರಯತ್ನ ಆಗುತ್ತಲೇ ಇರುತ್ತೆ. ಜಗತ್ತು ನನಗೆ ಮೋಸ ಮಾಡಿತು ಅನ್ನುವುದರ ಬದಲಿಗೆ ಜಗತ್ತು ನನಗೇನು ಕೊಟ್ಟಿದೆ ಅಂತ ಯೋಚಿಸಿ. ಖಂಡಿತ ನಿಮ್ಮ ಬಾಳು ಹಸನಾಗುತ್ತೆ....

ಸುಮಾರು ವರ್ಷ ಈ ಪ್ರಯೋಗ ನಡೆದ ನಂತರ ಈಗ ನಿವೃತ್ತರಾಗುವವರು ಬಾಳಿನಲ್ಲಿ ತಮ್ಮ ಯಶಸ್ಸನ್ನು ಕುರಿತು ಹೆಮ್ಮೆ ಪಡುತ್ತಾರೆಯೇ ಹೊರತು ಯಾರಿಂದಲೋ ಸಂಭವಿಸಿದ ತಮ್ಮ ವೈಫಲ್ಯದ ಬಗ್ಗೆ ಹೇಳಲು ಬಯಸುವುದಿಲ್ಲ. ನಮ್ಮ ಮಟ್ಟಿಗೆ ಇದೊಂದು ಬೌದ್ಧಿಕ ಮೆಟಾಮಾರ್ಫಸಿಸ್ !

ಒಳ್ಳೆಯ ಸಬೂಬು

ಒಬ್ಬ ಹೊಸ ಕಾರು ಕೊಂಡ ಉಮೇದಿನಲ್ಲಿ ಅದನ್ನು ಜೋರಾಗಿ ಓಡಿಸಿಕೊಂಡು ಒಂದು ಲಾಂಗ್ ಡ್ರೈವ್ ಹೋಗುವಾ ಎಂದು ಹೊರಟ. ಕಾರಿನಲ್ಲಿ ಅವನೊಬ್ಬನೇ. ಸಲ್ಮಾನ್ ಖಾನ್ ಅವತ್ತು ಜೋರಾಗಿ ಓಡಿಸಿಕೊಂಡು ಹೋಗಿ ಫುಟ್ ಪಾತ್ ಮೇಲೆ ಹತ್ತಿಸಿ ಅನಾಹುತಮಾಡಿ (ಕೊಂಡಿ)ದ್ದನಲ್ಲ ಅದಕ್ಕಿಂತ ವೇಗವಾಗಿ ಓಡಿಸುತ್ತಿದ್ದ. ಖುಷಿಯೋ ಖುಷಿ ಆದರೆ ಇವನಿಗೆ ರಸಭಂಗ ಮಾಡಲು ಟ್ರಾಫಿಕ್ ಪೇದೆ ಅವನನ್ನು ಅಟ್ಟಿಸಿಕೊಂಡು ಹೋದ. ತಪ್ಪಿಸಿಕೊಳ್ಳಲು ಅವನು ವೇಗ ಇನ್ನಷ್ಟು ಹೆಚ್ಚಿಸಿದ. ಆದರೆ ಪೇದೆ ಅವನನ್ನು ಕೊನೆಗೂ ತಡೆದು ನಿಲ್ಲಿಸಿದ. ಆದರೆ ಮಾಮೂಲಿನಂತೆ ಚಲನ್ ಪುಸ್ತಕ ಹೊರತೆಗೆಯದೆ "ನೋಡು. ನನಗೆ ಬೆಳಗಿನಿಂದ ಕೆಲಸ ಮಾಡಿ ಸುಸ್ತಾಗಿದೆ. ಮನೆಗೆ ಹೋಗುವ ಸಮಯ ಈಗ. ಆದುದರಿಂದ ನಾನು ನಿಲ್ಲಿಸು ಎಂದರೂ ಕೇಳದೆ ನೀನು ಏಕೆ ಸ್ಪೀಡ್ ಹೆಚ್ಚಿಸಿದೆ? ಒಂದು ಒಳ್ಳೆಯ ಜವಾಬು ಹೇಳು. ಬಿಟ್ಟುಬಿಡ್ತೀನಿ" ಎಂದ.

ತುಸು ಯೋಚಿಸಿದ ಅವನು ಉತ್ತರಿಸಿದ: ಸಾರ್, ಕಳೆದ ವಾರ ನನ್ನ ಹೆಂಡತಿ ನಿಮ್ಮಂತಹ ಪೊಲೀಸ್ ಅಧಿಕಾರಿ ಜತೆ ಓಡಿ ಹೋದಳು. ಅವಳನ್ನು ವಾಪಸ್ ಮಾಡಲು ನೀವು ನನ್ನನ್ನು ಹಿಂಬಾಲಿಸುತ್ತಿದ್ದೀರಿ ಎಂದುಕೊಂಡು ವೇಗ ಹೆಚ್ಚಿಸಿದೆ.

ಪೊಲೀಸ್ ಅಧಿಕಾರಿ ಅವನಿಗೆ ಚಲನ್ ನೀಡಲಿಲ್ಲ.

(ಇಂಟರ್‌ನೆಟ್‌ನಿಂದ)

ಲಲಿತ ಕಲೆಗಳ ತಾಣ

- ಬೇಲೂರು ರಾಮಮೂರ್ತಿ

ನನ್ನ ಜಪಾನಿನ ಯಾತ್ರೆಯ ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಾ ಈ ಸಾರಿ ನಮಗೂ ಅವರಿಗೂ ಇರುವ ಕೆಲವು ಸಾಮ್ಯಗಳ ಬಗೆಗೆ ಹೇಳುತ್ತೇನೆ. ನಮ್ಮಲ್ಲಿನಂತೆ ಜಪಾನಿನಲ್ಲಿಯೂ ಚಿತ್ರಕಲೆ, ನಾಟ್ಯ, ನಾಟಕ, ಮುಂತಾದುವುಗಳು ಪ್ರಸಿದ್ಧಿಯಲ್ಲಿವೆ. ನಾನು ಅಲ್ಲಿನ ಕಬುಕಿ ಥಿಯೇಟರಿಗೆ ಭೇಟಿ ಕೊಟ್ಟಿದ್ದೆ. ಆಗಲೇ ನಾಟಕ ಪ್ರಾರಂಭವಾಗಿತ್ತು. ನಾಟಕ ಪ್ರಾರಂಭವಾದ ಮೇಲೆ ಅಲ್ಲಿ ಪ್ರವೇಶವಿಲ್ಲ (ನಮ್ಮ ರಂಗಶಂಕರ ನೆನಪಿಗೆ ಬಂತೇ) ಅವತ್ತು ಇನ್ನೊಂದು ಪ್ರದರ್ಶನವಿರಲಿಲ್ಲ. ಪ್ರತೀದಿನ ಬೇರೆ ಬೇರೆ ಮೂರು ನಾಟಕಗಳು ಇರುತ್ತವೆ.

ಕೆಲವು ಸಾಮ್ಯಗಳನ್ನು ಗಮನಿಸೋಣ. ನಮ್ಮಲ್ಲಿ ನಾಗರತ್ನಮ್ಮನವರ ಸ್ತ್ರೀ ನಾಟಕ ಮಂಡಳಿ ಇತ್ತು ಅಂತ ನಿಮಗೆ ನೆನಪಿದೆ. ಅಲ್ಲಿ ಎಲ್ಲ ಪಾತ್ರಗಳನ್ನೂ ಸ್ತ್ರೀಯರೇ ವಹಿಸುತ್ತಿದ್ದರು. ಅದೇ ರೀತಿ ಜಪಾನಿನಲ್ಲಿಯೂ ಸುಮಾರು 17ನೇ ಶತಮಾನದಲ್ಲಿ ಎಲ್ಲ ಪಾತ್ರಗಳನ್ನೂ ಸ್ತ್ರೀಯರೇ ವಹಿಸುತ್ತಿದ್ದ ಕಬುಕಿ ಬಹಳ ಹೆಸರುವಾಸಿಯಾಗಿತ್ತು. ರಾಜಮನೆತನಕ್ಕೆ ಸಂಬಂಧಪಟ್ಟ ಅನೇಕ ನಾಟಕಗಳನ್ನು ಅಲ್ಲಿನ ಸ್ತ್ರೀ ಕಲಾವಿದರು ಅಭಿನಯಿಸುತ್ತಿದ್ದರು. ಆದರೆ ಕ್ರಮೇಣ ನಾಟಕವಾಡುವ ಕಲಾವಿದರು ರಸಿಕರ ಕೈಗೆಟುಕುವವರು ಅನ್ನುವ ಭಾವನೆ ಅಲ್ಲಿನ ಜನರಿಗೆ ಬಂದು ಕಬುಕಿ ಪ್ರಯೋಗಗಳು ಹೆಚ್ಚು ಹೆಚ್ಚು ವ್ಯಾಪಾರಿಗಳನ್ನೂ, ಶ್ರೀಮಂತರನ್ನೂ ಆಕರ್ಷಿಸ ಲಾರಂಭಿಸಿದವು. ಅವರೆಲ್ಲ ಬರುತ್ತಿದ್ದುದು ನಾಟಕ ನೋಡಲಲ್ಲ ಬದಲಿಗೆ ನಾಟಕದ ಸ್ತ್ರೀ ಕಲಾವಿದರನ್ನು ನೋಡಲು, ಅವರೊಂದಿಗೆ ಸಲಿಗೆ ಬೆಳೆಸಲು. (ನಮ್ಮ ರಂಗನಾಯಕಿ ಸಿನಿಮಾ ನೆನಪಿಗೆ ಬಂತೇ). ಇದು ಅತಿಯಾದಾಗ ಎಚ್ಚೆತ್ತುಕೊಂಡ ಅಲ್ಲಿನ ಸರ್ಕಾರ ಮಹಿಳೆಯರು ನಾಟಕದಲ್ಲಿ ಪಾತ್ರ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಿದರು. ಅಲ್ಲಿಂದ ಮುಂದೆ ಕಬುಕಿ ಬರೀ ಗಂಡಸರ ಪ್ರಯೋಗಗಳಿಗೊಳಪಟ್ಟು ಮಹಿಳೆಯರ ಪಾತ್ರಗಳನ್ನೂ ಗಂಡಸರೇ ವಹಿಸುತ್ತಿದ್ದರು. ನಮ್ಮಲ್ಲಿ ನಾಟಕ ರಂಗ ಪ್ರಾರಂಭವಾದಾಗ ಮಹಿಳೆಯರ ಪಾತ್ರಗಳನ್ನೂ ಗಂಡಸರೇ ವಹಿಸುತ್ತಿದ್ದುದನ್ನು ನೀವು ನೆನಪು ಮಾಡಿಕೊಳ್ಳಬಹುದು.

ದಿನೇ ದಿನೇ ಕಬುಕಿ ಬಹಳ ಯಶಸ್ವಿಯಾಗಲು ಕಾರಣ ಅಂದರೆ ನಾಟಕಕ್ಕೆ ಅವರು ಬಳಸುತ್ತಿದ್ದ ವಿಷಯ. ಈ ಹಿಂದೆ ಆಗಿ ಹೋದ ಧೀರ ರಾಜರ ಕಥೆಯನ್ನಾಧರಿಸಿದ ನಾಟಕಗಳು ಹೆಚ್ಚು ಹೆಚ್ಚು ಪ್ರದರ್ಶನಗೊಳ್ಳುತ್ತಿದ್ದವು. ಇಂಥಾ ನಾಟಕಗಳು ವೀರೋಚಿತವಾಗಿರುತ್ತಿದ್ದವು. ಬಹಳಷ್ಟು ಕಬುಕಿ ಪ್ರಯೋಗಗಳು ಮಾನವ ಸಂಬಂಧಗಳು, ಅವುಗಳಿಂದಾಗುವ ಪರಿಣಾಮ ಇವುಗಳೇ ಅಲ್ಲದೇ ಅಲ್ಲಿ ಹಾಸ್ಯ, ರೌದ್ರ, ಕರುಣ ಮುಂತಾದ ರಸಪೂರಿತ ವಿಷಯಗಳೂ ಇರುತ್ತಿದ್ದವು. ನಾಟಕದ ಪಾತ್ರಧಾರಿಗಳಿಗೆ ಬರೀ ಸಂಭಾಷಣೆ ಒಪ್ಪಿಸುವುದೇ ಅಲ್ಲದೇ ಹಾಡಲು, ನೃತ್ಯಮಾಡಲು ಬರಬೇಕಿತ್ತು. (ನಮ್ಮ ಹಿಂದಿನ ಕಂಪನಿ

ನಾಟಕ ಪಾತ್ರಧಾರಿಗಳಿಗೆ ಇರಬೇಕಾಗಿದ್ದ ಅರ್ಹತೆ ಅಂದರೆ ಹಾಡುಗಾರಿಕೆ ಅನ್ನೋದು ನಿಮಗೆ ಗೊತ್ತು) ಜೊತೆಗೆ ನಾಟಕಕ್ಕೆ ಆಯ್ಕೆಯಾದ ನಟರು ತಮಗೆ ಸಿಕ್ಕ ಪಾತ್ರದ ಬಗೆಗೆ ಚೆನ್ನಾಗಿ ಅಧ್ಯಯನ ಮಾಡಿ ಮೂಲ ಪಾತ್ರಕ್ಕೆ ತಕ್ಕಂತೆ ಅಭಿನಯ ನೀಡಬೇಕಾಗಿತ್ತು. ಕಬುಕಿಯಲ್ಲಿ ಪಾತ್ರವಹಿಸುವವರು ಚಿಕ್ಕಂದಿನಿಂದಲೇ ತಮ್ಮನ್ನು ನಾಟಕರಂಗಕ್ಕೆ ಅರ್ಪಿಸಿಕೊಂಡು ಬಿಡುತ್ತಿದ್ದರು (ನಮ್ಮಲ್ಲಿ ರಾಜಕುಮಾರ್, ಬಾಲಕೃಷ್ಣ ನರಸಿಂಹರಾಜು ಗುಬ್ಬಿ ವೀರಣ್ಣ ಇನ್ನೂ ಮುಂತಾದವರ ನೆನಪಾಗಿರಬೇಕು ಅಲ್ವ)

ಇನ್ನೊಂದು ಸಾಮ್ಯ ನೋಡೋಣ. ನಮ್ಮಲ್ಲಿ ಪ್ರಪ್ರಥಮವಾಗಿ ಕಾದಂಬರಿ ಬರೆದ ಮಹಿಳೆ ನಂಜನಗೂಡು ತಿರುಮಲಾಂಬ. ಹಾಗೇ ಜಪಾನಿನಲ್ಲಿ ಪ್ರಪ್ರಥಮವಾಗಿ ಕಾದಂಬರಿ ರಚಿಸಿದವರು ಮಹಿಳೆಯರೇ. ಇದಕ್ಕೆ ಕಾರಣ ಪುರುಷರು ಆಗ ಹೆಚ್ಚು ಹೆಚ್ಚು ಕಾಂಜಿ ಲಿಪಿಯಲ್ಲಿ ಬರೆಯುತ್ತಿದ್ದರು ಇದು ಚೀನಾದಿಂದ ಜಪಾನಿಗೆ ಬಂದ ಚಿತ್ರ ರೂಪದ ಲಿಪಿ. ಆದರೆ ಮಹಿಳೆಯರು ಜಪಾನೀ ಭಾಷೆಯಲ್ಲಿ ಬರೆಯುತ್ತಿದ್ದರು. ಹೀಗಾಗಿ ಜಪಾನಿನ ಅದ್ಭುತ ಸಾಹಿತ್ಯ ಸೃಷ್ಟಿಸಿದವರ ಸಾಲಿನಲ್ಲಿ ಮಹಿಳೆಯರೇ ಇದ್ದರು. ಗೆಂಜಿ ಮನೋಗತಾರಿ (ಗೆಂಜಿಯ ಕಥೆ ಅಥವಾ ದಿ ಟೇಲ್ ಆಫ್ ಗೆಂಜಿ) ಇದು ಪ್ರಪ್ರಥಮವಾಗಿ ಮುರಾಸಕಿ ಶಿಕಿಬು ಅನ್ನುವ ಮಹಿಳೆ ರಚಿಸಿದ್ದು. ಬಹುಪಾಲು ಲೇಖಕರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದುದರಿಂದ ಅಲ್ಲಿನ ಸಾಹಿತ್ಯದಲ್ಲಿ ನಾವು ಹೇಳುವ ಮಣ್ಣಿನ ವಾಸನೆ ಕಡಿಮೆ ಇತ್ತು. ಆದರೆ ಆನಂತರ ಸೊಸೆಕಿ ನಟ್ಸುಮೆ ಅನ್ನುವ ಲೇಖಕ ಬರೆದು ಕೊಕೊರೋ ಅನ್ನುವ ಕಾದಂಬರಿ ನಗರ ಹಾಗೂ ಹಳ್ಳಿಗರ ಜೀವನ ಕುರಿತಾದ ಕಾದಂಬರಿ ಆದದ್ದರಿಂದ ಅದು ಹೆಚ್ಚು ಜನಪ್ರಿಯವಾಯಿತು.

2004ರಲ್ಲಿ ಜಪಾನ್ ದೇಶದ ಅತ್ಯುನ್ನತ ಪ್ರಶಸ್ತಿಯಾದ ಅಕುತುಗವ (ನಮ್ಮ ಜ್ಞಾನಪೀಠಕ್ಕೆ ಸಮನಾದುದು) ಅಲ್ಲಿನ ಇಬ್ಬರು ಯುವತಿಯರಿಗೆ ಸಂದಿದೆ. ಇಬ್ಬರೂ ಇಂಥಾ ಅತ್ಯುನ್ನತ ಪ್ರಶಸ್ತಿ ಪಡೆದ ಪ್ರಥಮ ಮಹಿಳೆಯರು. ಆ ಇಬ್ಬರು ಚೆಲುವೆಯರ ಹೆಸರು ಓ ಕೆನೆಜ್‌ಬುರೋ ಹಾಗೂ ಇಷಿಹೆ ಶಿನ್‌ಟಾರೋ. ಇನ್ನೊಂದು ಅಚ್ಚರಿ ಅಂದರೆ ಅವರಿಬ್ಬರಿಗೂ ಕೇವಲ 23 ವರ್ಷವಾಗಿದ್ದಾಗಲೇ ಈ ಪ್ರಶಸ್ತಿ ಬಂದಿದೆ. ಆದರೆ ಈ ಪುಸ್ತಕದ ಇಂಗ್ಲಿಷ್ ಅವತರಣಿಕೆ ಮಾತ್ರ ಇಂದಿಗೂ ಲಭ್ಯವಾಗಿಲ್ಲ. ಹೀಗಾಗಿ ಈ ಪುಸ್ತಕದಲ್ಲಿ ಏನಿದೆ ಅನ್ನುವುದು ವಿಶ್ವದಾದ್ಯಂತ ಪ್ರಚಾರವಾಗುವುದು ತಪ್ಪಿದೆ.

ಇಲ್ಲಿನಂತೆ ಅಲ್ಲಿಯೂ ಲಿಂಗಭೇದ ಇತ್ತು. (ಈಗಲೂ ಇದೆ ಆದರೆ ಕಡಿಮೆ ಪ್ರಮಾಣದಲ್ಲಿ) ನಮ್ಮಲ್ಲಿನಂತೆ ಹೆಂಗಸರಿಗೆ ಎಲ್ಲ ಕ್ಷೇತ್ರಗಳಲ್ಲೂ ಸಮಾನ ಅವಕಾಶಗಳಿವೆ. ಮೊದಮೊದಲು ಹೆಂಗಸರು ಗಂಡಸರಿಗಿಂತ ಕಡಿಮೆ ವೇತನ ಪಡೆಯುತ್ತಿದ್ದರು. ಇಲ್ಲಿನಂತೆ ಅಲ್ಲಿಯೂ ಕಛೇರೀ ಕಿರುಕುಳಗಳು, ಲೈಂಗಿಕ ದೌರ್ಜನ್ಯಗಳು ಇರುತ್ತಿದ್ದವು. ಅವುಗಳನ್ನು ಸಹಿಸಿಕೊಂಡು ಅವರು ಕೆಲಸ ಮಾಡಬೇಕಾಗಿತ್ತು. ಈಗಲೂ ಇಂಥಾ ಪ್ರಕರಣಗಳು ಇವೆ. ಆದರೆ ಇತ್ತೀಚೆಗೆ ಜಪಾನ್ ಸರ್ಕಾರ ಸಮಾನ ಅವಕಾಶದ ಕಾನೂನು ತಂದಿದೆ. ನಮ್ಮಲ್ಲಿನಂತೆ ಅಲ್ಲಿಯೂ ಪಾರ್ಲಿಮೆಂಟಿನಲ್ಲಿ ಸಾಕಷ್ಟು ಮಹಿಳೆಯರಿದ್ದಾರೆ.

ಇನ್ನೊಂದು ಸಾಮ್ಯ ನೋಡಿ. ಟೋಕಿಯೋದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು ನರಿತಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ. ಅದು ಇತ್ತೀಚೆಗೆ ತನ್ನ 30ನೇ ವಾರ್ಷಿಕೋತ್ಸವವನ್ನು ಆಚರಿಸಿಕೊಂಡಿತು. ಇತ್ತೀಚೆಗೆ ಟೋಕಿಯೋದಿಂದ ಪ್ರಕಟವಾಗುತ್ತಿರುವ "ದ ಯೊಮೂರಿ" (ನಾನು ಅಲ್ಲಿರುವ ತನಕ ಬೆಳಗ್ಗೆ ಈ ಪೇಪರನ್ನೇ ಓದುತ್ತಿದ್ದುದು) ಅನ್ನುವ ಇಂಗ್ಲಿಷ್ ಪತ್ರಿಕೆಯಲ್ಲಿ ಒಂದು ಸ್ವಾರಸ್ಯ ಸುದ್ದಿ ಬಂದಿತ್ತು. ಏನೆಂದರೆ ಇಲ್ಲಿ ನಮ್ಮ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅನೇಕ ರೈತರ ಜಮೀನುಗಳನ್ನು ಕೊಂಡು ಅವರಿಗೆ ಪರಿಹಾರ ಒದಗಿಸಿದ್ದರಲ್ಲ ಹಾಗೇ ಅಲ್ಲಿ ನರಿತಾ ವಿಮಾನ ನಿಲ್ದಾಣಕ್ಕೂ ಅಲ್ಲಿನ ಅನೇಕ ರೈತರ ಜಮೀನುಗಳನ್ನು ವಶಪಡಿಸಿಕೊಂಡರು. ಆದರೆ ಅಲ್ಲಿನ ರೈತರು ಪ್ರತಿಭಟಿಸಿದರು. ಜಮೀನು ಕೊಡೋದೇ ಇಲ್ಲ ಅಂತ ಹಠ ಹಿಡಿದರು. ಆದರೆ ಏನು ಮಾಡೋದು ಕೊನೆಗೂ ಅವರು ಬಗ್ಗಬೇಕಾಯಿತು. ಆದರೆ ಅಲ್ಲಿನ ಅಧಿಕಾರಿಗಳು ಜಮೀನು ವಶಪಡಿಸಿಕೊಂಡ ಸುಮಾರು 30 ರೈತರಿಗೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಒಂದು ಅಂಗಡಿ ಇಟ್ಟುಕೊಳ್ಳಲು ಅನುಮತಿ ಕೊಟ್ಟಿದ್ದರು. ಅದರಂತೆ ಕೆಲವು ರೈತರು ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಿದ ನಂತರ ಅಂಗಡಿ ಇಟ್ಟರು. ಆದರೆ ಅವರಿಗೆ ಅನುಭವ ಇಲ್ಲದ್ದರಿಂದ ಅನೇಕ ರೈತರು ಅಂಗಡಿಗಳನ್ನು ಮುಚ್ಚಬೇಕಾಯಿತು. ಆದರೆ ಈಗ 79 ವರ್ಷದವನಾಗಿರುವ ಇವಾಸಾವಾ ಮತ್ತು ಅವನ ಹೆಂಡತಿ ಈಗಲೂ ಅಲ್ಲಿ ಅಂಗಡಿ ಇಟ್ಟಿದ್ದಾರೆ. ಅವನೂ ಅವನ ಹೆಂಡತಿಯೂ ಅದನ್ನು ಮ್ಯಾನೇಜ್ ಮಾಡುತ್ತಾರೆ. ಲಾಭ ಇಲ್ಲ ನಷ್ಟ ಇಲ್ಲ ಆದರೆ ಜಮೀನೇ ಹೋದ ಮೇಲೆ ಮಾಡಲು ಬೇರೆ ಕೆಲಸ ಇಲ್ಲ ಹೀಗಾಗಿ ಕಷ್ಟವೋ ಸುಖವೋ ಇದನ್ನೇ ನಡೆಸಿಕೊಂಡು ಬರುತ್ತಿದ್ದೇನೆ ಅನ್ನುತ್ತಾನೆ ಅವನು. ನಿನ್ನ ಜಮೀನನ್ನು ಕಳೆದುಕೊಂಡಿದ್ದಕ್ಕೆ ನಿನಗೆ ಏನನಿಸುತ್ತದೆ ಅಂತ ಕೇಳಿದರೆ ಅವನು ಹೇಳುತ್ತಾನೆ. ನಾನು ಆಡುತ್ತಾ, ಕೆಲಸ ಮಾಡುತ್ತಾ ಬೆಳೆದ ನನ್ನ ಜಮೀನನ್ನು ಮಾರಿ ತಪ್ಪುಮಾಡಿದೆ ಅಂತ ಈಗಲೂ ಅನಿಸುತ್ತಿದೆ ಆದರೆ ಏನು ಮಾಡುವುದು ಆಗ ನನಗೆ ಬೇರೆ ದಾರಿ ಇರಲಿಲ್ಲ. ಯಾವುದೇ ರೈತನು ತನ್ನ ಜಮೀನು ಮಾರಿ ಸುಖವಾಗಿರುತ್ತಾನೆ ಅನ್ನುವುದು ಸುಳ್ಳು ಅಂತ ಹೇಳುತ್ತಾನೆ ಇವಾಸಾಕ.

ಓದುಗರೇ ಈ ಸಂಚಿಕೆಯೊಂದಿಗೆ ನನ್ನ ಮೂಡಲ ಪಯಣದ ವಿವರಗಳನ್ನು ಸಾಕು ಮಾಡುತ್ತೇನೆ. ಆದರೆ ಸಧ್ಯದಲ್ಲಿಯೇ ಹೆಚ್ಚು ವಿಸ್ತೃತವಾದ ಪುಸ್ತಕ **'ಜಪಾನಿನಲ್ಲಿ ಬೇಲೂರು'** ಒಂದೆರಡು ತಿಂಗಳುಗಳಲ್ಲಿಯೇ ಹೊರಬರಲಿದೆ. ಅದರಲ್ಲಿ ಸುದೀರ್ಘವಾದ ವಿವರಗಳೊಂದಿಗೆ ಕೆಲವು ಅಪರೂಪದ ಛಾಯಾಚಿತ್ರಗಳೂ ಇರುತ್ತವೆ.

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಲೇಖನ

ಪಂಚಕನ್ಯಾ ಸ್ಮರೇನಿತ್ಯಂ

- ಆಂಡಾಳ್ ಶರ್ಮಾ

ಪಂಚಕನ್ಯೆಯರ ಸಭೆ ಸ್ವರ್ಗದಲ್ಲಿ ಸೇರಿಬಿಟ್ಟಿತ್ತು. ಐವರೂ ಮುಖ ಊದಿಸ್ಕೊಂಡು ಬಿಟ್ಟಿದ್ರು. ಪಾವೆಯಲ್ಲಿ ಹಿರಿಯಳಾದ ಅಹಲ್ಯಾದೇವಿ "ನೋಡಿ ಗೆಳತಿಯರೇ, ಪೌ.ಮ.ಸ್ವ. ಸಂಘದೋರು ಬ್ರಹ್ಮನ ಹತ್ರ ಜಾಥಾ ತೊಗೊಂಡು ಹೋದ್ರೂ ಏನೂ ಉಪಯೋಗ ಆಗ್ಲಿಲ್ಲ. ಭೂಲೋಕದ ರಾಜಕಾರಣಿಗಳ ಥರ ಬ್ರಹ್ಮ ಸುಮ್ಮನೇ ಪೊಳ್ಳು ಭರವಸೆ ಕೊಟ್ಟು ಅವರ್ನ ಸಾಗಹಾಕಿದ. ಸಂಘದವರೂ ಮುಂದೇನೂ ಕ್ರಮ ತೊಗೋಳ್ದೆ 'ಪಾರ್ಕ್‌ಲಾಂ' ಅಂತ ಕೈಕಟ್ಕೊಂಡು ಕೂತು ಬಿಟ್ಟಿದ್ದಾರೆ. ಹೀಗಾದ್ರೆ ನಮ್ಮ ಪ್ರಾಬ್ಲಮ್ ಹೇಗೆ ಪರಿಹಾರ ಆಗತ್ತೆ? ನಾವು ಇನ್ನು ಸುಮ್ಮನಿರಕೂಡದು. ಮಾನವರು 'ಪಂಚಕನ್ಯಾ ಸ್ಮರೇನಿತ್ಯಂ' ಅಂತ ಜಪಿಸಿಬಿಟ್ಟು ಆಮೇಲೆ ನಮ್ಮನ್ನ ಮರ್ತೇಬಿಡ್ತಾರೆ. ಅವರ ಪಾಪಗಳನ್ನು ಮಾತ್ರ ನಾವು ನಾಶಮಾಡಬೇಕಂತೆ, ಆದ್ರೆ ನಮ್ಮ ಗೋಳು ಕೇಳೋವ್ರು ಯಾರು? ಅದಲ್ಲದೇ, ಪಂಚಕನ್ಯೆಯರು ಯಾರು ಅನ್ನೋದೇ ಭೂಲೋಕದವ್ರಿಗೆ ಕನ್‌ಫ್ಯೂಷನ್. ಕೆಲವರು 'ಅಹಲ್ಯಾ, ದ್ರೌಪದಿ, ಸೀತಾ, ತಾರಾ, ಮಂಡೋದರಿ' ಅಂತ ಜಪಿಸಿದ್ರೆ, ಇನ್ನು ಕೆಲವರು ಸೀತೆಯ ಬದಲು ಇನ್ನೊಬ್ಬಳು ತಾರಾನ ಸೇರಿಸ್ಕೊಂಡು ಬಿಡ್ತಾರೆ. ಏನಿವೇ, ಈಗಂತೂ ನಮ್ಮ ಐವರ ಕೋರಂ ಇದೆ. ತುಂಬಾ ಯೋಚಿಸಿ ನಾನೊಂದು ನಿರ್ಧಾರಕ್ಕೆ ಬಂದಿದೀನಿ. ನೀವೆಲ್ಲಾ ಒಪ್ಪಿಕೊಂಡ್ರೆ ನನ್ನ ಪ್ಲಾನನ್ನು ಕಾರ್ಯಗತ ಮಾಡ್ಬೋದು" ಅಂತ ಪೀಠಿಕೆ ಹಾಕಿದಳು. ಉಳಿದ ಚತುರ್ಕನ್ಯೆಯರು ಉತ್ಸಾಹದಿಂದ "ಹೇಳಿ ಮೇಡಂ, ಅದು ಆಗೋ ಅಂಥ ಕೆಲಸ ಆದ್ರೆ ಮಾಡಿಯೇ ಬಿಡೋಣ" ಅಂತ ಒಕ್ಕೊರಳಿನಿಂದ ಕೂಗಿದರು. "ನೋಡಿ, ಜನರ ಕಣ್ಣಿಗೆ ಬೀಳಕ್ಕೆ ಎಲ್ಲಕ್ಕಿಂತಾ ಸುಲಭವಾದ ಉಪಾಯ ಅಂದ್ರೆ ಅದೇನೋ ಟೀ.ವಿ ಅಂತಾರಲ್ಲಾ ಅದ್ರಲ್ಲಿ ಕಾಣಿಸ್ಕೊಂಡು ನಮ್ಮ ಅಳಲನ್ನೆಲ್ಲಾ ಎಲ್ಲರಿಗೂ ತಿಳಿಸೋದು. ಭೂಲೋಕದಲ್ಲಿ ಈಗ ಹೊಸದಾಗಿ 'ಓಳು' ಅನ್ನೋ ಟೀ.ವಿ ಚಾನೆಲ್ ಶುರು ಆಗಿದ್ಯಂತೆ. ಅದ್ರಲ್ಲಿ ಮಹಿಳೆಯರಿಗೇ ಹೆಚ್ಚು ಪ್ರಾಶಸ್ತ್ಯ ಕೊಡ್ತಾರಂತೆ. ನಾವ್ಯಾಕೆ ಅವರ್ನ ಇಲ್ಲಿಗೆ ಕರೆಸಿ ಒಂದು 'ಇಂಟರ್‌ವ್ಯೂ' ಮಾಡಬಾರ್ದು? ಅವರಿಗೂ ಒಂದು ಒಳ್ಳೇ ಪ್ರೋಗ್ರಾಮ್ ಸಿಗತ್ತೆ. ನಮಗೂ ನಮ್ಮ ಕುಂದುಕೊರತೆಗಳ್ನ ಹೇಳ್ಕೊಳಕ್ಕೆ ಅವಕಾಶ ಸಿಗತ್ತೆ. ಏನಂತೀರಿ?" ಅಂತ ಅಹಲ್ಯ ತನ್ನ ಪ್ಲಾನ್ ಬಿಚ್ಚಿಟ್ಟಳು. ಪ್ಲಾನ್ ಏನೋ ಚೆನ್ನಾಗಿದೆ, ಆದ್ರೆ ಆ ಚಾನಲ್‌ನವರು ಇಲ್ಲಿಗೆ ಬರೋಕೆ ಒಪ್ಕೊಳ್ತಾರಾ? ಸ್ವರ್ಗಕ್ಕೆ ಬರೋದು ಸತ್ತಮೇಲೇನೇ, ಒಂದು ಸಲ ಇಲ್ಲಿಗೆ ಬಂದೋರು ವಾಪಸ್ ಭೂಮಿಗೆ

ಹೋಗೋಕಾಗಲ್ಲ ಅಂತ ಹೆದ್ರಿಕೊಂಡು ಬರ್ದೇ ಇದ್ರೆ? ''ಅಂತ ಸೀತೆ ಸಂಶಯಿಸಿದಳು.'' ''ಅಯ್ಯೋ ಅದಕ್ಕೇನು, ನಮ್ಮ ಸ್ವರ್ಗದ ಪೋಲೀಸ್‌ನವ್ರು, ಅದೇ ಆ ಯಮದೂತರು ಇದಾರಲ್ಲಾ, ಅವರ ಕೈಗೆ ಒಂದಷ್ಟು ಹಾಕಿದ್ರೆ ಆಯ್ತು. ಅವರು ಈ ಕಡೆ ತಿರುಗಿ ಕೂಡ ನೋಡಲ್ಲ. ನಾವೇ ಆ ಟೀ.ವಿ ಜನಗಳ್ನ ವಾಪಸ್ ಕಳಿಸೋ ವ್ಯವಸ್ಥೆ ಮಾಡಿದ್ರೆ ಮುಗೀತು'' ಅಂತ ಅಹಲ್ಯಾ ಸಮಜಾಯಿಷಿದಳು. ಸರಿ, ನಿರ್ಣಯ ಸಭೇಲಿ ಪಾಸ್ ಆಯ್ತು. ಆದ್ರೆ ಟೀ.ವಿ ಚಾನೆಲ್‌ನವರ್ನ ಒಪ್ಪಿಸಿ ಕರ್ಕೊಂಡು ಬರೋವ್ರು ಯಾರು? ಪಂಚಕನ್ಯೆಯರು– ತ್ರಿಲೋಕ ಸಂಚಾರಿ, ಕಲಹ ಪ್ರಿಯ ನಾರದರ ಹತ್ರ ಹೋಗಿ, ಅತ್ತು, ಕಾಡಿ, ಬೇಡಿ, ಗೋಗರೆದು ''ಈ ಇಂಟರ್‌ವ್ಯೂ ನಡೆದಿದ್ದು ನಾರದ ಮಹರ್ಷಿಗಳ ಕೃಪೆಯಿಂದ' ಅಂತ ನಿಮ್ಮ ಹೆಸರೂ ಟೀ.ವೀಲಿ ಹಾಕಿಸ್ತೀವಿ ಅಂತ ಪುಸಲಾಯಿಸಿ, ಅವರ್ನ ಒಪ್ಪಿಸ್ತೇಬಿಟ್ರು. ತಮಗೂ ಇನ್ನೊಂದು ಪುಗಸಟ್ಟೆ ಮನರಂಜನೆ ಸಿಗತ್ತೆ ಅಂತ ಖುಷಿಯಾದ ನಾರದರು ಭೂಲೋಕಕ್ಕೆ ಹೋಗಿ 'ಒಳು' ಟೀ.ವಿಯವ್ರ ಹತ್ರ ಮಾತಾಡಿ, ಮುಂಗಡ ಕೊಟ್ಟು ಕಾಂಟ್ರ್ಯಾಕ್ಟ್ ಸೈನ್ ಮಾಡಿ, ಅವರ್ನೆಲ್ಲಾ ವಾಪಸ್ ಭೂಲೋಕಕ್ಕೆ ಕಳಿಸೋ ಗ್ಯಾರಂಟಿ ಕೊಟ್ಟು, ಪ್ರೋಗ್ರಾಮ್ ಫಿಕ್ಸ್ ಮಾಡಿಯೇ ಬಿಟ್ಟರು!

ಸರಿ, ಇಂಟರ್‌ವ್ಯೂಗೆ ಎಲ್ಲಾ ರೆಡಿ ಆಯ್ತು. ಮೇಕಪ್ ಮಾಡಿಸ್ಕೊಂಡು ಸ್ಟೈಲಾಗಿ ಪಂಚಕನ್ಯೆಯರು ಆಸೀನರಾದರು. ಲಲನಾಮಣಿಯೊಬ್ಬಳು, ಪಡ್ಡೆ ತರ್ಲೆಯೊಬ್ಬನು ಇಬ್ಬರೂ ಕೈಲಿ ಮೈಕುಗಳ್ನ ಹಿಡ್ಕೊಂಡು ನಿಂತರು. ದೊಡ್ಡ ಸೊನ್ನೆಯ ಮಧ್ಯದಲ್ಲಿ 'ಒಳು' ಅಂತ ಬರೆದು ಒಂದು ಒನಕೆಯ ರಂಗುರಂಗಾದ ಚಿತ್ರ ಇದ್ದ ಚಾನೆಲ್‌ನ ಚಿಹ್ನೆ ಟೀ.ವಿ ಪರದೆ ಮೇಲೆ ಮೂಡಿತು. ಹಿಂದೆಯೇ ಹಿನ್ನೆಲೆ ಸಂಗೀತ ಮೂಡಿ ಬಂತು. ''ಒಳು ಐ ಲವ್ ಯು, ಓಬವ್ವನಾ ಆಣೆ'' (ಕರಿಯಾ ಐ ಲವ್ ಯು ಅನ್ನೋಧಾಟೀಲಿ) ಅಂತ, ''ನಮಸ್ಕಾರ, ಒಳು ದೂರದರ್ಶನವಾಹಿನಿಯ ವೀಕ್ಷಕರಿಗೆಲ್ಲಾ ಆದರದ ಸ್ವಾಗತ. ನಮ್ಮ ವಾಹಿನಿಯ ಪ್ರಪ್ರಥಮ ಕಾರ್ಯಕ್ರಮವನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ. ತಮ್ಮೆಲ್ಲರ ಅಭಿಮಾನ ನಮ್ಮ ಮೇಲಿರಲಿ'' ಅಂತ ಕೋಗಿಲೆ ಯಂತೆ ಉಲಿದಳು ಲಲನಾಮಣಿ (ಲ.ಮ). ಪುನಃ ''ಒಳು ಐ ಲವ್‌ಯು'' ಪ್ರಸಾರವಾಯಿತು. ''ಪ್ರಿಯ ವೀಕ್ಷಕರೆ, ಇಲ್ಲಿ ಓಬವ್ವ ಯಾಕೆ ಬಂದಳು ಅಂತ ನಿಮಗೆಲ್ಲಾ ಆಶ್ಚರ್ಯ ಆಗಬಹುದು. ನಮ್ಮ 'ಒಳು'ವಾಹಿನಿ ಮಹಿಳೆಯರಿಗಾಗಿಯೇ ಮೀಸಲಿಟ್ಟಿರುವ ವಿಶೇಷ ವಾಹಿನಿ. ಮಹಿಳೆಯರ ನೋವು, ನಲಿವು, ಸಾಧನೆ, ಯಾತನೆ, ಸೋಲು, ಗೆಲುವುಗಳನ್ನು ನಿಮ್ಮ ಮುಂದೆ ಬಿಚ್ಚಿಡುವ ಪ್ರಾಮಾಣಿಕ ಪ್ರಯತ್ನ ಮಾಡುವ ಗುರಿಯನ್ನು ಹೊಂದಿರುವ ಏಕೈಕ ವಾಹಿನಿ 'ಒಳು'. ಮಹಿಳೆಯ ಆಯುಧವಾದ ಒನಕೆ ಗಂಡಂದಿರನ್ನಷ್ಟೇ ಅಲ್ಲದೆ ಶತ್ರುಗಳನ್ನೂ ಸದೆಬಡಿಯುವ ಸಾಧನ ಅಂತ ತೋರಿಸಿದ ಕನ್ನಡದ ಕಣ್ಮಣಿ ಓಬವ್ವನೇ ನಮಗೆ ಸ್ಫೂರ್ತಿ. ಅದಕ್ಕೇ ಅವಳ ಹೆಸರಿನ ಮತ್ತು ಲಾಂಛನದ ಪ್ರಸ್ತಾಪ' ಎಂದು ವಿವರಿಸಿದಳು ಲ.ಮ. ಪುನಃ ''ಒಳು, ಐ ಲವ್‌ಯು'' ಕೇಳಿಬಂತು. ''ವೀಕ್ಷಕರೇ, ಈ ದಿನದ ಕಾರ್ಯಕ್ರಮ ಬಹಳ ವಿಶಿಷ್ಟವಾದದ್ದು. ಈಗ ಮೂಡಿ ಬರಲಿರುವ ಇಂಟರ್‌ವ್ಯೂ ಸ್ವರ್ಗದಿಂದಲೇ ನೇರ ಪ್ರಸಾರವಾಗುತ್ತಿದೆ. ನಾವುಗಳು ಯಾರನ್ನು 'ಪಂಚಕನ್ಯಾ ಸ್ಮರೇನಿತ್ಯಂ'

ಅಂತ ದಿನಾ ಪೂಜಿಸ್ತೇವೋ ಅವರುಗಳು ಈಗ ತಮ್ಮ ಅಳಲನ್ನು ನಿಮ್ಮ ಮುಂದೆ ತೋಡಿಕೊಳ್ಳಲಿದ್ದಾರೆ. ದೇವಿಯರೆ, ನಿಮಗೆಲ್ಲಾ ಸ್ವಾಗತ. ಅಹಲ್ಯಾಮೇಡಂ, ನೀವು ಶುರು ಮಾಡ್ತೀರಾ?'' ಅಂದ ಪಡ್ಡೆ ತರ್ಲೆ (ಪ.ತ). ''ಸರಿಸರಿ, ನೀವುಗಳು ನಿತ್ಯ ಸ್ಮರಿಸೋದ್ರಿಂದ ನಮಗೇನು ಉಪಯೋಗ? ಆ ಬ್ರಹ್ಮದೇವನೂ ನಮ್ಮ ದೂರುಗಳ್ನ ಒಂದು ಕಿವೀಲಿ ಕೇಳಿ ಮಿಕ್ಕಿದ ಏಳು ಕಿವಿಗಳಿಂದ ಬಿಟ್ಟುಬಿಟ್ಟಿದ್ದಾನೆ. ನೋಡಪ್ಪಾ ಆ ಇಂದ್ರ ತನ್ನ ಪಾಡಿಗೆ ತಾನು ರಂಭೆ, ಊರ್ವಶೀರ ಕುಣಿತ ನೋಡ್ಕೊಂಡು, ಸೋಮರಸ ಕುಡ್ಕೊಂಡು ಹಾಯಾಗಿರೋದು ಬಿಟ್ಟು ನನ್ನ ಗಂಡನ ವೇಷ ಹಾಕ್ಕೊಂಡು ಬಂದು ನನಗೆ ಮೋಸ ಮಾಡ್ದ. ಇದಿಷ್ಟಕ್ಕೇ ನಾನು ಅಷ್ಟು ವರ್ಷ ಸರ್ವೀಸ್ ಮಾಡಿದ್ದನ್ನೂ ಲೆಕ್ಕಕ್ಕೆ ತೊಗೋಳ್ದೇ ನನ್ನ ಗಂಡ ಗೌತಮ ನನ್ನ ಕಲ್ಲುಮಾಡಿ ಕೂರಿಸ್ಬಿಡೋದೇ? ಅದೂ, ಒಂದೆರಡು ದಿನ ಅಲ್ಲ, ವರ್ಷಾನುಗಟ್ಲೆ, ಇದು ಸರೀನಾ?''

ಲ.ಮ:- ''ಅನ್ಯಾಯ ಮೇಡಂ. ನಿಮ್ಮ ಕಾಲದಲ್ಲಿ ಮಹಿಳಾ ಕಮೀಷನ್ ಇರಲಿಲ್ಲವಲ್ಲ, ಅದು ಆಗ ಇದ್ದಿದ್ರೆ ಅವ್ರೆಲ್ಲಾ ನಿಮ್ಮ ಆಶ್ರಮದ ಮುಂದೆ ಧರಣಿ ಕೂತ್ಕೊಂಡು ''ಗೌತಮ ಋಷಿಗೆ ಧಿಕ್ಕಾರ'', ''ಅಹಲ್ಯಾದೇವಿಗೆ ನ್ಯಾಯ ಒದಗಲಿ'' ಅಂತ ಗುಲ್ಲೆಬ್ಬಿಸೋರು. ''ಹೋಗ್ಲಿ ಬಿಡಿ, ನಿಮಗೆ ಈಗಲಾದ್ರೂ ನ್ಯಾಯವಾಗಿ ಪರಿಹಾರ ಕೊಡ್ಬೇಕು ಅಂತ ನಾವು ಮಹಿಳೆಯರೆಲ್ಲಾ ಹೋರಾಡ್ತೀವಿ.''

ಪ.ತ:- ''ಅಲ್ಲಾ ಮೇಡಂ, ಋಷಿಮುನಿಗಳಿಗೆಲ್ಲಾ 'ಸಿಕ್ಸ್ತ್ ಸೆನ್ಸ್' ಅಂದ್ರೆ 'ಅತೀಂದ್ರಿಯ ಜ್ಞಾನ' ಇರ್ತಿತ್ತು ಅಂತ ಓದಿದ್ದೀವಿ. ಇಂದ್ರ ನಿಮ್ಮಗಂಡ ಅಲ್ಲ ಅಂತ ನಿಮಗೆ ಗೊತ್ತೇ ಆಗಲಿಲ್ವಾ? ಅಥವಾ.....''

ಅಹಲ್ಯ:- ''ಏನಪ್ಪ ಹೀಗೆ ಕೇಳ್ತೀಯ. ಎಷ್ಟಾದ್ರೂ ನೀನೂ ಗಂಡಸೇ ಅಲ್ವಾ? ಅಥರಾ ಜ್ಞಾನ ಎಲ್ಲಾ ತುಂಬಾ ತಪಸ್ಸು ಮಾಡಿದೋರಿಗೆ ಮಾತ್ರ ಸಿದ್ದಿಸ್ತಾ ಇತ್ತು. ನಾನಿನ್ನೂ ಆ ಗ್ರೇಡ್‌ಗೆ ಏರಿರಲಿಲ್ಲ.''

ಪ.ತ:- ''ಅದ್ಸರಿ ಮೇಡಂ, ನೀವು ಯಾವ ಥರದ ಕಲ್ಲಾಗಿದ್ರಿ? ಗ್ರ್ಯಾನೈಟಾ, ಮಾರ್ಬಲ್ಲಾ, ಕರಿಗಲ್ಲಾ, ಯಾವುದು?''

ಅಹಲ್ಯ:- ''ಅಯ್ಯೋ ತರ್ಲೆ, ಯಾವ್ದಾದ್ರೆ ಏನು? ಕಲ್ಲು ಕಲ್ಲೇ ತಾನೆ?''

ಪ.ತ:- ''ನಿಮಗ್ಗೊತ್ತಿಲ್ಲ ಮೇಡಂ. ಭೂಲೋಕದಲ್ಲಿ ರಸ್ತೆ ಮಧ್ಯದಲ್ಲಿ ಒಳ್ಳೇ ಕಲ್ಲುಚಪ್ಪಡಿ ಸಿಕ್ಕಿದ್ರೆ ಚರಂಡಿ ಮುಚ್ಕೋಕೋ, ಮ್ಯಾನ್ ಹೋಲ್‌ಗೆ ಕವರ್ ಆಗೋದಕ್ಕೋ ಎಳೆದು ಬಿಡ್ತಾರೆ. ಸದ್ಯ ನಿಮ್ಮ ಪುಣ್ಯ. ಕಾಡಿನ ಮಧ್ಯದಲ್ಲಿ ಇದ್ದಿರಿ. ಅಲ್ಲಿ ಬೀದಿನಾಯಿಗಳು ಇರಲಿಲ್ಲವಲ್ಲ. ವೀಕ್ಷಕರೆ, ಈಗೊಂದು ಜಾಹೀರಾತು. ಆಮೇಲೆ ನಮ್ಮ ಕಾರ್ಯಕ್ರಮ ಮುಂದುವರಿಯತ್ತೆ.''

ಹಿನ್ನೆಲೆ ಸಂಗೀತ:- ''ಕಲ್ಲಣ್ಣನವರೇ, ಈ ನಿಮ್ಮ ಸ್ಟೋನ್‌ಗಳಲಿ'' ('ಮುಂಗಾರು ಮಳೆಯೇ, ಈ ನಿನ್ನ ಹನಿಗಳಲಿ' ಅನ್ನೋ ಧಾಟೀಲಿ) ''ಕಲ್ಲಣ್ಣ ಸ್ಟೋನ್ಸ್ ಕಂಪನಿಯಲ್ಲಿ ನಿಮ್ಮ

ಮನೆಗೆ ಬೇಕಾದ ಎಲ್ಲ ಥರದ ಅಂದ, ಚೆಂದದ ಕಲ್ಲುಗಳೂ ಲಭ್ಯ. ಸಂಪೂರ್ಣ ಮನೆಗೆ ಬೇಕಾಗುವ ಸ್ಟೋನ್ಸ್‌ಗಳನ್ನು ನಮ್ಮಲ್ಲೇ ಖರೀದಿಸಿದರೆ, ಅಹಲ್ಯಾದೇವಿಯ ಮೂರ್ತಿಯನ್ನು ಕೆತ್ತಿರುವ ಒಂದು ಕಲ್ಲು ಫ್ರೀ. ವೀಕ್ಷಕರೇ, ತ್ವರೆ ಮಾಡಿ. ನಿಮ್ಮ ಮನೆಯ ಶೋಭೆಗೆ 'ಕಲ್ಲಣ್ಣ ಸ್ಟೋನ್ಸ್'''.

ಲ.ಮ:– ''ವೀಕ್ಷಕರೆ, 'ಓಳು'ವಾಹಿನಿಯ ಈ ಕಾರ್ಯಕ್ರಮಕ್ಕೆ ತಮಗೆಲ್ಲಾ ಮತ್ತೊಮ್ಮೆ ಸ್ವಾಗತ. (''ಓಳು, ಐ ಲವ್‌ಯು'') ದ್ರೌಪದಿ ದೇವಿಯವರೆ, ನಾವೆಲ್ಲಾ ಒಬ್ಬ ಗಂಡನ ಜೊತೆ ಏಗೋದಕ್ಕೇ ಒದ್ದಾಡ್ತೀವಿ, ಅಂಥಾದ್ದರಲ್ಲಿ ನೀವು ಐವರು ಪತಿಗಳನ್ನು ಹ್ಯಾಗೆ ಮ್ಯಾನೇಜ್ ಮಾಡಿದ್ರಿ? ನಿಮ್ಮ ಕಾಲದಲ್ಲಿ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳೇ ಇರಲಿಲ್ಲವಲ್ಲ?''

ದ್ರೌಪದಿ:– ''ಅದೇ ಅಲ್ವಾ ನನ್ನ ಗೋಳು. ನಮ್ಮತ್ತೆ ಕುಂತಿಯೇನೋ 'ಸಾಸ್ ಭೀ ಕಭೀ ಬಹೂಥೀ' ಅನ್ನೋದನ್ನ ಮರೆತು ನನ್ನ ಅವಳ ಐದು ಮಕ್ಕಳಿಗೂ ಹಂಚಿಬಿಟ್ಟಳು. ನಾನೇನು ಉಪ್ಪಿಟ್ಟಾ ಹಂಚ್ಕೊಂಡು ತಿನ್ನೋಕೆ? ಅಬ್ಬಬ್ಬಾ, ಒಬ್ಬೊಬ್ಬರು ಒಂದೊಂದು ಥರ. ಅವರ ಜೊತೇಲಿ ಏಗೋವಷ್ಟರಲ್ಲಿ ನನಗೆ ಸಾಕು ಸಾಕಾಗ್ತಿತ್ತು.''

ಪ.ತ:– ''ಆದ್ರೂ ಕರ್ಣನ್ನ ಕಂಡ್ರೂ ನಿಮಗಿಷ್ಟ ಇತ್ತು ಅಂತ ಒಂದು ವದಂತಿ ಇದೆಯಲ್ಲಾ?''

ದ್ರೌಪದಿ:– ''ಏಯ್ ತರ್ಲೆ, ಹಾಕ್ತೀನಿ ನೋಡು. ಅದೆಲ್ಲಾ ಕಪೋಲ ಕಲ್ಪಿತ. ಸದ್ಯ, ಇವರಿಷ್ಟು ಜನ ಸಾಲದಾಗಿತ್ತಾ ನನ್ನ ಗೋಳು ಹುಯ್ಕೊಳ್ಳೋಕೆ. ಆದ್ರೂ ನೋಡಿ, ತುಂಬಿದ ಸಭೇಲಿ ಆ ದುಷ್ಟ ದುಶ್ಶಾಸನ ನನ್ನ ವಸ್ತ್ರಾಪಹರಣ ಮಾಡಿದಾಗ ಅವರ್‍ಯಾರೂ ನನ್ನ ಸಹಾಯಕ್ಕೆ ಬರಲಿಲ್ಲ, ಹೆಸರಿಗೆ ಮಾತ್ರ ಶೂರ, ಧೀರರು, ಆದ್ರೆ ನಿಜವಾಗಿ ಹೇಡಿಗಳು. ಸದ್ಯ, ಕೃಷ್ಣಪರಮಾತ್ಮ ಇದ್ದಿದ್ದರಿಂದ ಬಚಾವಾದೆ. ಹೇಗಿದ್ರೂ ಗೋಪಿಕಾ ಸ್ತ್ರೀಯರ ವಸ್ತ್ರಗಳನ್ನೆಲ್ಲಾ ಕದೀತಿದ್ದ ಅವನಿಗೆ ತುಂಬಾನೇ ಎಕ್ಸ್‌ಪೀರಿಯನ್ಸ್ ಇತ್ತಲ್ಲಾ.''

ಪ.ತ:– ''ಮೇಡಂ, ಕೃಷ್ಣ ನಿಮಗೆ ಕರುಣಿಸಿದ ಸೀರೆಗಳೆಲ್ಲಾ ಯಾವ ಬ್ರ್ಯಾಂಡ್‌ನವು? ಧರ್ಮಾವರಂ, ಕಾಂಜೀವರಂ, ಅಥ್ವಾ ಕ್ರೇಪು, ಜಾರ್ಜೆಟ್, ನೈಲಾನ್ ಇಂಥ ಫ್ಯಾನ್ಸಿ ಸೀರೆಗಳಾ?''

ದ್ರೌಪದಿ:– ''ಅಯ್ಯೋ ತರ್ಲೆ 'ಗಂಡಸಿಗ್ಯಾಕೆ ಗೌರಿ ದುಃಖ' ಅನ್ನೋ ಹಾಗೆ, ನಿನಗ್ಯಾಕಪ್ಪಾ ಸೀರೆ ಯೋಚನೆ? ಗರ್ಲ್‌ಫ್ರೆಂಡ್‌ಗಾ?''

ಪ.ತ:– ''ಅಯ್ಯಯ್ಯೋ, ನನಗಲ್ಲ ಮೇಡಂ, ನನ್ನ ಹೆಂಡತಿ ''ಯಾಕೆ ಕೇಳ್ಕೊಂಡು ಬರ್ಲಿಲ್ಲ'' ಅಂತ ಪೊರಕೆ ಸೇವೆ ಮಾಡ್ತಾಳೆ.'' ಅದಕ್ಕೇ.

ದ್ರೌಪದಿ:– ''ವೀಕ್ಷಕರೆ, ಈಗ ಪ್ರಸಾರವಾಗುವ ಜಾಹೀರಾತು ನೋಡಿದಾಗ ನಿಮಗೆ ಎಲ್ಲಾ ವಿವರಗಳೂ ಸಿಗುತ್ತದೆ.''

ಹಿನ್ನೆಲೆ ಸಂಗೀತ:– ''ಅನಿಸುತಿದೆ ಯಾಕೋ ಇಂದು, ಶ್ರೀ ಕೃಷ್ಣ ಸ್ಯಾರೀಸ್‌ಗೆ ಹೋಗಲೆ ಎಂದು, ಆಹಾ ಎಂಥಾ ಮಧುರ ಯೋಚನೆ'' (ಮುಂಗಾರು ಮಳೆ ಸಿನಿಮಾದ ಹಾಡಿನ

ಧಾಟೀಲಿ). ಶ್ರೀ ಕೃಷ್ಣ ಪರಮಾತ್ಮ ದ್ರೌಪದಿ ದೇವಿಗೆ ಕರುಣಿಸಿದಂಥಾ ವಿಧವಿಧವಾದ ಸೀರೆಗಳು ನಮ್ಮಲ್ಲಿ ಲಭ್ಯ. ಅಂಗ, ವಂಗ, ಕಳಿಂಗ, ಕಾಂಭೋಜ, ಕಾಮರೂಪಗಳಿಂದ ವಿಶಿಷ್ಟವಾದಂಥ ಸೀರೆಗಳನ್ನು ನಿಮಗಾಗಿಯೇ ತರಿಸಲಾಗಿದೆ. ಸ್ವಯಂ ದ್ರೌಪದೀ ದೇವಿಯರೇ ಶಿಫಾರಸ್ಸು ಮಾಡಿರುವಂತಹ 'ಆ್ಯಂಟೀಕ್ ಲುಕ್' ಇರುವ ಮಹಾಭಾರತದ ಕಾಲದ ಸೀರೆಗಳಿಗಾಗಿ ಇಂದೇ ಶ್ರೀ ಕೃಷ್ಣ ಸ್ಯಾರೀಸ್‌ಗೆ ಭೇಟಿ ಕೊಡಿ. ನಮ್ಮ ಡಿಸೈನರ್ ಸೀರೆಗಳನ್ನು ಧರಿಸಿ ನಿಮ್ಮ ಪಕ್ಕದ ಮನೆಯವರ ಕಣ್ಣು ಕೆಂಪಗಾಗಿಸಿ. ಪಂಚಕನ್ಯೆಯರ ಸ್ಮರಣಾರ್ಥ ಐದು ಸೀರೆಗಳನ್ನು ಖರೀದಿಸಿದವರಿಗೆ ಇನ್ನೊಂದು ಸೀರೆ ಫ್ರೀ. ಬೇಗ ಬನ್ನಿ, ಈ ಸದವಕಾಶವನ್ನು ಬಿಡಬೇಡಿ."

ಲ.ಮ:- "ಬ್ರೇಕ್ ಕೇ ಬಾದ್" ನಾವೀಗ ಪುನಃ ಹಾಜರಾಗಿದ್ದೇವೆ. ಈಗ ಸೀತಾದೇವಿಯವರ ಅಳಲನ್ನು ಕೇಳೋಣ.

ಸೀತಾ:- "ಅಳಲೇನು, ಬರೀ ಅಳೋನೇ ನಂದು. ಯಾವುದೋ ಒಂದು ಹಳೇ ಬಿಲ್ಲನ್ನು ಮುರಿದು ಹಾಕ್ಬಿಟ್ಟ ಅಂತ ನಮ್ಮ ತಂದೆ ನನ್ನ ರಾಮನಿಗೆ ಮದುವೆ ಮಾಡಿಬಿಟ್ರು. ಅದೇನೋ ನಿಮ್ಮ ಭೂಲೋಕದಲ್ಲಿ 'ಸಾಸ್-ಬಹು' ಅಂತ ಧಾರಾವಾಹಿ ತೋರಿಸ್ತಾರಲ್ಲಾ, ಹಾಗೇ ಮೂವರು ಅತ್ತೆಯಂದಿರು, ಮೂವರು ಓರಗಿತ್ತಿಯರು ನನಗೆ ಕಾಟ ಕೊಡೋಕೆ ತಯಾರಾಗಿದ್ರು. ಅವರಿಂದ ತಪ್ಪಿಸ್ಕೊಂಡು ಕಾಡ್ನಲ್ಲಿ ಹಾಯಾಗಿರೋಣ ಅಂತ ರಾಮನ ಜೊತೇಲಿ ಹೊರಟ್ರೆ, ಹಿಂದೇನೇ ಲಕ್ಷ್ಮಣನೂ ಬರಬೇಕಾ? ನಮಗೆ ಪ್ರೈವೆಸಿನೇ ಬೇಡವಾ? ಅಲ್ಲಿಂದ ಆ ರಾವಣ ನನ್ನ ಹೊತ್ಕೊಂಡು ಹೋದ. ಆಮೇಲೆ ಅಗ್ನಿಪರೀಕ್ಷೆ, ಆಮೇಲೆ ಪರ್ಮನೆಂಟಾಗಿ ಕಾಡಿನ ವಾಸ. ರಾಮಾಯಣ ಹಾಗಿರಲಿ, ಇದು ಸೀತಾಯಣವಾಗೋಯ್ತು."

ಪ.ತ:- "ಮೇಡಂ, ಚಿನ್ನದ ಜಿಂಕೆ ಇರಲ್ಲ ಅಂತ ಗೊತ್ತಿದ್ದೂ ನೀವ್ಯಾಕೆ ಅದಕ್ಕೆ ಆಸೆಪಟ್ರಿ? ಅದನ್ನ ತರೋಕೆ ರಾಮನ್ನ ಕಳಿಸ್ದೇ ಇದ್ದರೆ ರಾವಣ ಬರ್ತಾನೇ ಇರ್ಲಿಲ್ಲ, ವನವಾಸ ಮುಗಿಸ್ಕೊಂಡು ನೀವುಗಳು ಹಾಯಾಗಿ ಅಯೋಧ್ಯೆಗೆ ವಾಪಸ್ ಬರಬೋದಿತ್ತು."

ಸೀತಾ:- "ತರ್ಲೆಮರೀ, ಆಗ ರಾಮಾಯಣಾನೇ ಇರ್ತಿರಲಿಲ್ಲ. ಅದಿರಲಿ, ನಿನ್ನ ಹೆಂಡತಿ ಒಡವೆ ಮಾಡಿಸ್ಕೊಡು ಅಂತ ಯಾವತ್ತೂ ನಿನ್ನ ಪೀಡಿಸಿಲ್ವಾ? ಚಿನ್ನ ಅಂದ್ರೆ ಯಾವ ಭಾರತೀಯ ನಾರಿ ತಾನೇ ಆಸೆಪಡಲ್ಲ, ಅದು ನಮ್ಮ ಜನ್ಮಸಿದ್ಧ ಹಕ್ಕು ಅಂತ ಗೊತ್ತಾ ಹುಡುಗ?"

ಲ.ಮ:- "ಮೇಡಂ, ನೀವು ಬೇಜಾರು ಮಾಡ್ಕೋಬೇಡಿ. ಭೂಲೋಕದ ಮಹಿಳಾ ಮಣಿಗಳೆಲ್ಲಾ ಖಂಡಿತ ನಿಮ್ಮ ಪಕ್ಷಾನೇ ವಹಿಸ್ತಾರೆ. ಆದ್ರೆ ನನಗೊಂದು ಚಿಕ್ಕ ಸಂದೇಹ. ಸುಕುಮಾರಿಯಾದ ನೀವು ಕಾಡಿನಲ್ಲಿ ಗೆಡ್ಡೆ ಗೆಣಸು ಹ್ಯಾಗೆ ತಿಂತಾ ಇದ್ರಿ?"

ಸೀತಾ:- "ಹಾಂ, ನೀವು ಈ ಪ್ರಶ್ನೆ ಕೇಳ್ತೀರ ಅಂತ ನನಗೆ ಗೊತ್ತಿತ್ತು. ಈಗ ಬರೋ ಜಾಹೀರಾತು ನೋಡಿದ್ರೆ ನಿಮ್ಮ ಸಂದೇಹಾನೆಲ್ಲಾ ಪರಿಹಾರ ಆಗತ್ತೆ."

ಹಿನ್ನೆಲೆ ಸಂಗೀತ:- "ಅನ್ನ ಸಾರು ತಿನ್ನೋಕೆ ಬೋರೋ ಬೋರು, ನಿತ್ಯ ಬೋರೋ ಬೋರು" ("ಒಂಟಿಯಾಗಿರೋಕೆ ಬೋರೋಬೋರು." ಅನ್ನೋ ಸಿನಿಮಾ ಹಾಡಿನ ಧಾಟೀಲಿ) ಮಹಿಳೆಯರೇ, ದಿನಾ ಒಂದೇ ಥರದ ಅನ್ನ ಸಾರು, ಹುಳಿ, ಪಲ್ಯ ತಿಂದು ಬೋರಾಗಿದ್ದರೆ, ನಮ್ಮ 'ಸೀತಾಸ್ ಕಿಚನ್'ಗೆ ಇಂದೇ ಭೇಟಿಕೊಡಿ. ಸೀತಾಮಾತೆ ಕಾಡಿನಲ್ಲಿ ಉಪಯೋಗಿಸುತ್ತಿದ್ದ ಅಡುಗೆ ಉಪಕರಣಗಳು, ಗೆಡ್ಡೆ, ಗೆಣಸುಗಳು ಇಲ್ಲಿ ದೊರೆಯುತ್ತದೆ. ಅವುಗಳಿಂದ ತಯಾರಿಸಬಹುದಾದಂಥ ಅಡುಗೆಗಳ 'ರೆಸಿಪಿ' ಪುಸ್ತಕವೂ ಲಭ್ಯ. ಐದುನೂರು ರೂ.ಗಳ ಪದಾರ್ಥಗಳನ್ನು ಖರೀದಿಸಿದವರಿಗೆ ಒಂದು ಬಾಟಲ್ 'ಜೀರ್ಣ ರಸಾಯನ'ದ ಮಾತ್ರೆಗಳು ಉಚಿತ. ನಾವು 'ಓಳು' ಟೀ.ವಿ ವಾಹಿನಿಯಲ್ಲಿ ಗೆಡ್ಡೆ ಗೆಣಸುಗಳನ್ನು ಉಪಯೋಗಿಸಿ ಮಾಡುವ ಅಡುಗೆಗಳ ಸ್ಪರ್ಧೆಯನ್ನು ಏರ್ಪಡಿಸಿದ್ದೇವೆ. ಪ್ರತಿವಾರವೂ ಇದರಲ್ಲಿ ಭಾಗವಹಿಸಿ ಗೆದ್ದ ಮಹಿಳೆಗೆ ಒಂದು ನಾರುಮಡಿ ಸೀರೆ ಫ್ರೀ. ಇಂದೇ ತಯಾರಿ ನಡೆಸಿ, ನಳಪಾಕ ಉಣಿಸಿ."

("ಓಳು, ಐ ಲವ್‌ಯು")ಪ್ರಸಾರ.

ಲ.ಮ:- "ತಾರಾದೇವಿ, ಈಗ ನಿಮ್ಮ ಸರದಿ. ಕಿಷ್ಕಿಂಧೇಲಿ ಏನು ನಡೀತು ಅಂತ ಹೇಳಿ."

ತಾರಾ:- "ನನ್ನ ಪಾಡು ಏನೂಂತ ಹೇಳಲಿ? ಹಾಯಾಗಿ ನನ್ನ ಗಂಡ ಸುಗ್ರೀವನ ಜೊತೇಲಿ ಕಾಡಿನಲ್ಲಿ ಹಾರಾಡ್ಕೊಂಡು ಇದ್ದ ನನ್ನ ಆ ವಾಲಿ ಹಿಡ್ಕೊಂಡು ಹೋಗಿಬಿಟ್ಟ. ಅವನ ಹೆಂಡತಿ ರುಮಾ ನನಗೆ ಕೊಟ್ಟ ಹಿಂಸೆ ಅಷ್ಟಿಷ್ಟಲ್ಲ. ನಾನು ಅವಳ ಸವತಿ ಆಗಿಬಿಟ್ಟೆ ಅಂತ ಅವಳಿಗೆ ಹೊಟ್ಟೆಕಿಚ್ಚು. ಆಮೇಲೆ ಸುಗ್ರೀವ ವಾಲೀನ ಕೊಲ್ಲಿಸಿ ತಿರುಗಿ ನನ್ನ ಕರ್ಕೊಂಡು ಹೋದ. ನಾನೇನು ಒಳ್ಳೇ ಪಿಂಗ್‌ಪಾಂಗ್ ಬಾಲಾ, ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಸಾಗಿಸಕ್ಕೆ? ಕಪಿಗಳಾದ್ರೇನು, ನಮಗೇನು ಭಾವನೆಗಳೇ ಇಲ್ಲವಾ?"

ಲ.ಮ:- "ಹಾಗಾದ್ರೆ ಈಗ ಏನು ಮಾಡ್ಬೇಕು ಅನ್ಕೊಂಡಿದೀರಾ ಮೇಡಂ?"

ತಾರಾ:- "ಈಗ ಕಿಷ್ಕಿಂಧೇನೂ ಇಲ್ಲ, ಕಾಡು ಮೇಡೂ ಇಲ್ಲ. ಮಾಡೋದೇನು ಮಣ್ಣು? ನೋಡಿ ಈಗ ಬರೋ ಜಾಹೀರಾತನ್ನು."

ಹಿನ್ನೆಲೆ ಸಂಗೀತ:- ("ಇದು ಯಾರು ಬರೆದ ಕಥೆಯೋ, ನನಗಾಗಿ ಬಂದ ವ್ಯಥೆಯೋ") "50 ದಿನಗಳ ಪ್ರದರ್ಶನವನ್ನು ಮುಗಿಸಿ ಶತದಿನೋತ್ಸವದ ಕಡೆ ದಾಪುಗಾಲಿಡುತ್ತಿರುವ 'ಸವತಿಯ ಅಳಲು' ಚಿತ್ರವನ್ನು ಇಂದೇ ವೀಕ್ಷಿಸಿ. ಶ್ರೀಮತಿ, ತಾರಾ ಸುಗ್ರೀವ್ ಅವರದೇ ಮುಖ್ಯ ಪಾತ್ರ. ಎರಡು ಟಿಕೆಟ್‌ಗಳ ಜೊತೆ ಒಂದು ಪ್ಯಾಕೆಟ್ ಕರವಸ್ತ್ರ ಮತ್ತು ಒಂದು ಪ್ಲಾಸ್ಟಿಕ್ ಮಗ್ ಉಚಿತ. ಚಿತ್ರವನ್ನು ನೋಡಿ ನೀವು ಹರಿಸುವ ಕಣ್ಣೀರಿನಿಂದ ಚಿತ್ರಮಂದಿರ ಮುಳುಗಿದರೆ ನಾವದಕ್ಕೆ ಜವಾಬ್ದಾರರಲ್ಲ."

ಲ.ಮ:- "ನೋಡಿದಿರಾ ವೀಕ್ಷಕರೆ, ನಮ್ಮ ವಾಹಿನಿಯ ಕಾರ್ಯಕ್ರಮ ಎಷ್ಟು ವಿಶಿಷ್ಟವಾಗಿದೆ ಅಂತ. ಮುಂದೆಯೂ ಇಂತಹ ಅನೇಕ ಕಾರ್ಯಕ್ರಮಗಳನ್ನು ನಿಮಗೆ ಕೊಡುವ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ದಯವಿಟ್ಟು ನಿರೀಕ್ಷಿಸಿ. ("ಓಳು ಐ ಲವ್‌ಯು") ಪ್ರಸಾರ.

ಲ.ಮ:- "ಈಗ ಕೊನೆಯ ಪಂಚಕನ್ಯೆ ಶ್ರೀಮತಿ. ಮಂಡೋದರಿಯವರನ್ನು ಪರಿಚಯಿಸಲಿದ್ದೇವೆ. ಅವರು ಫಾರಿನರ್, ಅಂದ್ರೆ ಲಂಕೆಯವರು. ಲಂಕೇಶ ರಾವಣನ ಪಟ್ಟಮಹಿಷಿಯಾಗಿ ಮೆರೆದವರು. ಮೇಡಂ, ನಿಮ್ಮದೂ ಕಂಪ್ಲೇಂಟ್ ಇದೆಯಾ? ಯಾಕೆ?"

ಮಂಡೋದರಿ:- "ಹೌದೌದು. ಎಷ್ಟೋವರ್ಷ ಧಿಂರಂಗ ಅಂತ ಹಾಯಾಗಿ ಜೀವನ ಮಾಡ್ಕೊಂಡಿದ್ದೆ. ಆ ನನ್ನ ನಾದಿನಿ ಶೂರ್ಪನಖಿ ಬಂದು ರಾವಣನ ತಲೆ ಕೆಡಿಸಿದಳು. ಆಮೇಲೆ ಅವನಿಗೆ ಸೀತೇದೇ ಧ್ಯಾನ ಆಗೋಯ್ತು. ಅವನಿಗೆ ಬೇಕಾಗೋ ಅಂಥ ವೇಷ ಧರಿಸೋ ಶಕ್ತಿ ಇರೋ ನನ್ನಂಥಾ ಸುರಸುಂದರಿ ಹೆಂಡ್ತಿ ಮನೇಲಿರೋವಾಗ ಆ ಜುಜುಬಿ ಮಾನವ ಹೆಂಗಸಿನ ಮೇಲೆ ಯಾಕೆ ಅವನಿಗೆ ಅಷ್ಟೊಂದು ವ್ಯಾಮೋಹ ಬಂತೋ ಗೊತ್ತಿಲ್ಲ. ಅದಕ್ಕೇ ಅಲ್ವಾ 'ವಿನಾಶಕಾಲೇ ವಿಪರೀತ ಬುದ್ಧಿ' ಅಂತ ಹೇಳೋದು. ಅವಳ್ನ ಎಗರಿಸಿಕೊಂಡು ಬಂದು ಅಶೋಕವನದಲ್ಲಿಟ್ಟಾಗಲಂತೂ ನನ್ನ ಮಾತು ಕೇಳದೆ ಅವಳ್ನ ಒಲಿಸಿಕೊಳ್ಳೋದ್ರಲ್ಲೇ ಕಾಲ ಕಳೆದು ನನ್ನ ಪೂರಾ 'ನೆಗ್‌ಲೆಕ್ಟ್' ಮಾಡಿಬಿಟ್ಟ. ಅವನ ಪೆದ್ದುತನದಿಂದ ಲಂಕೆ ನಾಶ ಆಯ್ತು. ನನ್ನ ಮಕ್ಕಳೆಲ್ಲಾ ಸತ್ತರು, ಕೊನೆಗೆ ಅವನೂ ನಾಶ ಆದ. ಆಮೇಲೆ ಆ ವಿಭೀಷಣನ ಹೆಂಡ್ತಿ ರಾಣಿ ಆಗ್ಬಿಟ್ಟಳು. ನನ್ನ ಕೇಳೋರು ಯಾರು?"

ಪ.ತ:- "ಮೇಡಂ, ನಿಮ್ಮ ಲಂಕೆ ಹೇಗಿತ್ತು ಅಂತ ಸ್ವಲ್ಪ ಹೇಳ್ತೀರಾ?"

ಮಂಡೋದರಿ:- "ಅಯ್ಯಾ ತರ್ಲೆ ಮಹರಾಯಾ, ಆ ಸ್ವರ್ಣನಗರಿಯ ವೈಭವ ಏನೆಂದು ವರ್ಣಿಸಲಿ? ಸುಮ್ಮನೇ ಹೇಳಿದರೆ ಏನೂ ಪ್ರಯೋಜನ ಇಲ್ಲ. ಅದಕ್ಕೇ 'ವರ್ಲ್ಡ್ ಬ್ಯಾಂಕ್' ನಿಂದ ಸಾಲ ತೊಗೊಂಡು ನಾನೊಂದು ಪ್ರಾಜೆಕ್ಟ್ ಪ್ಲಾನ್ ಮಾಡ್ತಿದೀನಿ. ಅದಕ್ಕೆ ನಿಮ್ಮೆಲ್ಲರ 'ಸಪೋರ್ಟ್' ಬೇಕು".

ಪ.ತ:- "ಅದೇನದು ಹೇಳಿ ಮೇಡಂ, ನಾವು ನಿಮಗೆ ಸಹಾಯ ಮಾಡಕ್ಕೆ ರೆಡಿ."

ಹಿನ್ನೆಲೆ ಸಂಗೀತ:- ("ಏನೋ ಒಂಥರಾ, ಖುಷಿ ಏನೋ ಒಂಥರಾ" – ಸಿನಿಮಾ ಹಾಡು "ಏನೋ ಒಂಥರಾ"ದ ಧಾಟೀಲಿ) "ರಜೆಯಲ್ಲಿ ಬರೀ ಊಟಿ, ಕೊಡೈಕೆನಾಲ್‌ಗಳಿಗೆ ಪ್ರವಾಸ ಮಾಡಿ ಬೇಜಾರಾಗಿದೆಯೇ? ನಿಮಗಾಗಿ ಈಗ ಹೊಸ ಆಕರ್ಷಣೆಯೊಂದು ಕಾದಿದೆ. ಶೀಘ್ರವೇ ತೆರೆಯಲಿರುವ 'ಶ್ರೀಲಂಕಾ ರಿಸಾರ್ಟ್ಸ್ ಅಂಡ್ ಅಡ್‌ವೆಂಚರ್ ಪಾರ್ಕ್'ಗೆ ಇಂದೇ ಮುಂಗಡವಾಗಿ ಕಾದಿರಿಸಿ. ರಾಮಾಯಣದ ಕಾಲದಲ್ಲಿದ್ದ ಸ್ವರ್ಣನಗರಿ ಲಂಕೆಯ ಪ್ರತಿರೂಪವನ್ನು ಶ್ರೀಮತಿ. ಮಂಡೋದರಿ ಲಂಕೇಶ್ ಅವರ ನೇತೃತ್ವದಲ್ಲಿ ಸೃಷ್ಟಿಮಾಡಲಾಗಿದೆ. ರಾಕ್ಷಸ ಸ್ತ್ರೀಯರಂತೆ ವೇಷ, ಭೂಷಣ ಧರಿಸಿದವರಿಂದ 'ಆಯುರ್ವೇದಿಕ್ ಮಸಾಜ್', ಅವರ ವಿಶಿಷ್ಟವಾದ ಉಡುಗೆ, ಆಭರಣಗಳ ಮಳಿಗೆಗಳು, ವಿಶೇಷ ಪಕ್ವಾನ್ನಗಳು, ಬಿಲ್ಲು ಬಾಣದ ಸ್ಪರ್ಧೆಯಾಟಗಳು, ಕಪಿಸೈನ್ಯ ರಾಕ್ಷಸರನ್ನು ಕೊಲ್ಲುವ ಕಂಪ್ಯೂಟರ್ ಗೇಮ್‌ಗಳು, ಕೃತಕ ಬಾಲವನ್ನು ಲಗತ್ತಿಸಿಕೊಂಡು ಲಂಕೆಯ ಮಿನಿಯೇಚರ್ ಪ್ರತಿರೂಪವನ್ನು ಕೃತಕ ಬೆಂಕಿಯಿಂದ ಸುಡುವ ಸದವಕಾಶ ಇವನ್ನೆಲ್ಲಾ ಒಳಗೊಂಡ ರಿಸಾರ್ಟ್‌ಗೆ ಒಮ್ಮೆ ಭೇಟಿಯಿತ್ತರೆ ಮತ್ತೆಮತ್ತೆ ಬರಬೇಕೆನ್ನಿಸುತ್ತದೆ. ಮಕ್ಕಳಿಗೆ ಫ್ರೀ ಎಂಟ್ರಿ. ತ್ವರೆಮಾಡಿ ಇಂದೇ ನಿಮ್ಮ ಹೆಸರುಗಳನ್ನು ನೋಂದಾಯಿಸಿ."

ಲ.ಮ:- "ಪ್ರಿಯ ವೀಕ್ಷಕರೇ, ಇದುವರೆಗೂ ಪಂಚಕನ್ಯೆಯರ ಅಳಲು ಕೇಳಿದಿರಿ, ಅವರಿಗಾದ ಅನ್ಯಾಯಕ್ಕೆ ಪರಿಹಾರ ಸಿಗಲು ಅವರು ಸೂಚಿಸಿರುವ ಮಾರ್ಗಗಳ ಬಗ್ಗೆ ತಿಳಿದುಕೊಂಡಿರಿ. ಅವರನ್ನೆಲ್ಲಾ ಬೆಂಬಲಿಸಿ, ಅವರಿಗೆ ಧೈರ್ಯ ತುಂಬಿ, ಅವರ ಪರವಾಗಿ ಬ್ರಹ್ಮದೇವನ ಮೇಲೆ ಒತ್ತಡ ಹೇರುವುದು ಭೂಲೋಕದ ನಮ್ಮೆಲ್ಲರ ಕರ್ತವ್ಯ. ಈ ಕಾರ್ಯಕ್ರಮ ಮುಗಿದ ಕೂಡಲೇ ಪಂಚಕನ್ಯೆಯರ ಪರವಾಗಿ ಓಟು ಹಾಕುವುದಾದರೆ 'ಪಿಕೆ-ವೈ' ಎಂದೂ, ಇಲ್ಲವಾದರೆ 'ಪಿಕೆ-ಎನ್' ಎಂದೂ ನಂಬರ್ 420ಗೆ ನಿಮ್ಮ ಎಸ್.ಎಮ್.ಎಸ್‌ಗಳನ್ನು ತಪ್ಪದೇ ಕಳುಹಿಸಿ. ನಮ್ಮ 'ಓಳು' ವಾಹಿನಿಯ ಈ ಕಾರ್ಯಕ್ರಮ ನಿಮಗೆ ಹೇಗೆನಿಸಿತು ಎನ್ನುವುದನ್ನು ನಮಗೆ ಬರೆದು ತಿಳಿಸಿ. ವಿಳಾಸ...." ಅಂತ ಹೇಳ್ತಾ ಇರೋ ಅಷ್ಟ್ರಲ್ಲಿ ಗಲಾಟೆಯೋ ಗಲಾಟೆ. ಸ್ವರ್ಗಲೋಕದ ರಂಭೆ, ಊರ್ವಶಿ ಮುಂತಾದ ಅಪ್ಸರೆಯರೂ, ದೇವ ದೇವತೆಗಳ ಹೆಂಡಂದಿರೂ ಎಲ್ರೂ ಒಳಗೆ ನುಗ್ಗಿದರು. "ಅದೇನು ಆ ಪಂಚಕನ್ಯೆಯರು ಮಾತ್ರ ಸ್ಪೆಷಲ್, ನಮ್ಮನ್ನೂ ಇಂಟರ್‌ವ್ಯೂ ಮಾಡಿ, ನಾವೂ ಟೀ.ವೀಲಿ ಬರಬೇಕು" ಅಂತ ಕಿರುಚೋಕೆ ಶುರುಮಾಡಿದರು. ಜಟಾಪಟಿ ಆಯ್ತು. ಈ ಗಲಾಟೇಲಿ ಕ್ಯಾಮರಾ, ಸೌಂಡು, ಲೈಟು ಎಲ್ಲಾ ಪುಡಿಪುಡಿ. ಟೀ.ವೀನವರೆಲ್ಲಾ ನಾರದರನ್ನು ಹುಡುಕ್ಕೊಂಡು ಚೆಲ್ಲಾಪಿಲ್ಲಿ ಆದರು. 'ಅಡಚಣೆಗಾಗಿ ಕ್ಷಮಿಸಿ' ಅಂತ ಪರದೆ ಮೇಲೆ ಮೊದಲು ಕಾಣಿಸ್ಕೊಂಡಿದ್ದು ಆಮೇಲೆ "ಓಳು ಓಳು, ಚಾನಲ್ ಓಳು ಓಳು; ಹಾಳು ಹಾಳು, ಎಲ್ಲಾ ಗೋಳು ಗೋಳು" ("ಪಟಪಟ, ಹಾರೋಗಾಳಿಪಟ" ಅನ್ನೋ ಹಾಡಿನ ಧಾಟೀಲಿ) ಅಂತ ಹಿನ್ನೆಲೆ ಸಂಗೀತ ಕೇಳಿಸ್ಕೊಂಡು, ಕೊನೆಗೆ ಪರದೆ ಮೇಲೆ 'ನೋ ಆಡಿಯೋ ವಿಡಿಯೋ ಸಿಗ್ನಲ್' ಅಂತ ಬಂದುಬಿಡ್ತು!

ಹೀಗೂ ಆಯ್ತು

ನನ್ನ ಸ್ನೇಹಿತರ ಮನೆಗೆ ಹೋಗಿದ್ದೆ. ಬೂಟು ಹಾಕಿಕೊಂಡಿದ್ದೆ. ಬಿಚ್ಚಲು ಸೋಮಾರಿತನ. ಮನೆಯ ಮಾಲೀಕರು ನನ್ನ ಹಿತೈಷಿಗಳೂ ಜೊತೆಗೆ ಹಾಸ್ಯ ಪ್ರವೃತ್ತಿಯವರೂ ಆಗಿದ್ದರು. ಬೂಟು ಹಾಕಿಕೊಂಡು ಒಳಗೆ ಬರಬಹುದೇ ಅಂತ ಅವರನ್ನು ನೇರವಾಗಿ ಕೇಳಿಯೇಬಿಟ್ಟೆ. ಅದಕ್ಕೆ ಅವರು ನೀವೇ ಬಂದ ಮೇಲೆ ಅದು ಏನು ಮಾಡುತ್ತೆ ಬನ್ನಿ ಪರವಾಗಿಲ್ಲ ಅಂದರು.

- ಅ.ನಾ ವಿಜಯೇಂದ್ರರಾವ್ ಶಿವಮೊಗ್ಗ

ತುಂತುರು

- ನಿರೀಕ್ಷೆ ಹೆಚ್ಚಾದಷ್ಟೂ ನಿರಾಶೆ ಹೆಚ್ಚಾಗುವ ಸಂಭವ ಇದೆ.
- Ghosts are so synonymous with Shakespeare that even his plays are said to be ghost written!
- ಲೋಕಾಯುಕ್ತ ದಾಳಿಗೆ ಸಿಕ್ಕ ಒಬ್ಬ ಭ್ರಷ್ಟ ಅಧಿಕಾರಿಯನ್ನು ಕುರಿತು ಇನ್ನೂ ಸಿಕ್ಕಿ ಬೀಳದ ಭ್ರಷ್ಟ ಆಧಿಕಾರಿಯೊಬ್ಬನ ಸ್ವಗತ: ಇಂದವನ್, ನಾಳೆ ನಾನ್?
- The wheel is useless as a stand-in alone invention.
- ಸಂತೋಷದ ಗುಟ್ಟು: ಒಳ್ಳೆಯ ಆರೋಗ್ಯ ಮತ್ತು ಒಂದಿಷ್ಟು ಮರೆವು.
- Melody needs music. Sound needs phonetics
- ಮೊಬೈಲ್ ಫೋನ್ ಹೆಂಡತಿ ಇದ್ದಂತೆ. ಕಿರಿಕಿರಿಯಾದರೂ ಇಟ್ಟುಕೊಳ್ಳಬೇಕು.
- Are you sick? Be patient.
- ಸಿನಿಮಾ ಪ್ರಪಂಚದಲ್ಲೂ ಸಾಕಷ್ಟು ಪಾಲಿಟಿಕ್ಸ್ ಇದೆ, ದೇವೇಗೌಡರು ಇಲ್ಲ ಎಂಬುದನ್ನು ಹೊರತುಪಡಿಸಿಯೂ.
- I am more or less specific.
- ನೀವು ಶಾಶ್ವತವಾಗಿ ಕಳೆದುಕೊಳ್ಳಬಹುದಾದ ಮೊತ್ತಕ್ಕಿಂತಲೂ ಹೆಚ್ಚು ಹಣವನ್ನು ಸಾಲವಾಗಿ ನೀಡಬೇಡಿ.
- New airport…a nice place to be exploded, sorry explored.
- ಐ ಟಿ ಸಿಟಿ ಎಂದರೆ ಇನ್‌ಕ್ರೆಡಿಬಲ್ ಟ್ರಾಫಿಕ್ ಸಿಟಿ ಎಂದೂ ಹೇಳಬಹುದೆ?
- You can never be lonely in the kitchen. The food is so friendly.
- ಪ್ರತಿ ಯಶಸ್ವಿ ಪುರುಷನ ಹಿಂದೆಯೂ ಚಕಿತಗೊಂಡ ಮಹಿಳೆಯೊಬ್ಬಳು ಇರುತ್ತಾಳೆ.
- ಕೊಡುಕೊಳ್ಳು (ಎಕ್ಸ್‌ಚೇಂಜ್) ಮಾರಾಟ ಐಡಿಯಾ ವಿದೇಶದಿಂದ ಬಂದಿದ್ದಲ್ಲ. ನಮ್ಮ ಅಜ್ಜಿಯರು ಹಳೆ ಬಟ್ಟೆ ಕೊಟ್ಟು ಹೊಸ ಪಾತ್ರೆ ಪಡೆಯುತ್ತಿರಲಿಲ್ಲವೆ?

- ದಂನಅ

ಆಸ್ಪತ್ರೆಯಲ್ಲಿ

- ಪ್ರಕಾಶ್

ಚಳಿಗಾಲದ ನಡುರಾತ್ರಿ. ಜಗವೆಲ್ಲ ಮಲಗಿರುವಾಗ I.C.U.ನಲ್ಲಿ ಮಾತ್ರ ಎಲ್ಲ ಎಚ್ಚರವಾಗಿದ್ದರು. ಸುಮಾರು 70 ವರ್ಷದವರೊಬ್ಬರು ಅಡ್ಮಿಟ್ ಆದರು. ಅವರಿಗೆ ಪಾಪ ಬಿ.ಪಿ. ಜಾಸ್ತಿಯಾಗಿ mild stroke ಆಗಿತ್ತು. ಅವರ ಪರಿವಾರದವರಿಗೆಲ್ಲ ಆತಂಕ. ಡ್ಯೂಟಿ ಡಾಕ್ಟರೊಬ್ಬರು ಚಿಕಿತ್ಸೆ ಶುರು ಮಾಡಿದರು. C.T. Scan ಆಯಿತು. ಈ ವೈದ್ಯ ಇದೆಲ್ಲ ಆದ ಮೇಲೆ I.C.U. ನಿಂದ ಹೊರಬಂದು stroke ಆಗಿದೆ, ಆದರೆ ಪರಿಸ್ಥಿತಿ ಸುಧಾರಿಸುತ್ತಿದೆ, ದೇವರ ದಯದಿಂದ ಏನಾಗುತ್ತೋ ನೋಡೋಣ ಅಂತ ರೋಗಿಯ ಪರಿವಾರದವರಿಗೆ ಸಾಂತ್ವನ ನೀಡಿದ. Waiting area ದಲ್ಲಿ ಬೆದರಿದ ತರುಣಿಯೊಬ್ಬಳು ಕೂತೇ ಇದ್ದಳು. ಅವಳು ರೋಗಿಯ ಮೊಮ್ಮಗಳು. ಈ ವೈದ್ಯನ ಚಾಕಚಕ್ಯತೆ, ಅನುಕಂಪ ಎಲ್ಲವನ್ನೂ ಗಮನಿಸುತ್ತಾ ಇದ್ದಳು.

ಎರಡು ದಿನಗಳಾದ ಮೇಲೆ ರೋಗಿಯನ್ನು private room ಗೆ ವರ್ಗಾಯಿಸಿದರು. ಆತನ ಪರಿವಾರವೆಲ್ಲ ಸಮಾಧಾನದ ಉಸಿರು ಬಿಟ್ಟರು. ನಾಲ್ಕನೇ ದಿನ ಆ ವೈದ್ಯನ ಮೊಬೈಲ್‌ಗೆ SMS ಬಂತು I.C.U. ಅಂತ. ಅದಾದ ಮೇಲೆ ಏನಾಯಿತೋ ನನಗಂತೂ ಗೊತ್ತಿಲ್ಲ, ಎರಡೇ ವಾರದಲ್ಲಿ ಆ ವೈದ್ಯನ ವಿವಾಹದ ಪತ್ರಿಕೆ ನನ್ನ ಕೈ ಸೇರಿದಾಗಲೇ ನನ್ನ ಮಂದ ಮನಸ್ಸಿಗೆ Cupid's Arrow ಅನ್ನೋದು I.C.U.ನ ವಾತಾವರಣದಲ್ಲೂ ಶಕ್ತಿಶಾಲಿ ಅಂತ ಅರಿವಾಗಿದ್ದು.

ಸಲಹೆ

ನನ್ನ ಹೆಂಡತಿ ಆರು ತಿಂಗಳಿಂದ ನನ್ನ ಜತೆ ಮಾತಾಡ್ತಿಲ್ಲ. ನನಗೆ ಡೈವೋರ್ಸ್ ಕೊಡಿಸಿ.

ಲಾಯರ್: ಇನ್ನೊಮ್ಮೆ ಯೋಚಿಸಿ. ದುಡುಕಬೇಡಿ.

ಏಕೆ?

ಅಂತಹ ಹೆಂಡತಿ ಸಿಗುವುದು ತುಂಬಾ ಅಪರೂಪ.

ಅಗತ್ಯ

ಸರ್ಕಾರಿ ಆಸ್ಪತ್ರೆಗಳಲ್ಲಿ ಬಡ ರೋಗಿಗಳಿಗೆ ಯಾವುದೇ ಚಿಕಿತ್ಸೆ ಸಿಗುವುದಿಲ್ಲ, ಪೋಸ್ಟ್‌ಮಾರ್ಟಂ ನಂತರ ಅದು ಅಗತ್ಯ ಎಂದು ಗೊತ್ತಾಗುವವರಿಗೂ.

- ಚಿತ್ತರಂಜನ್ ಆಂಡ್ರಾಡೆ

ಕಾಫಿ ಹೌಸ್

ನಿನ್ನನ್ನ ದೇವರು ನೋಡ್ಕೊತಾನೆ ಬಿಡು, ನಾವು ಮಾಡೋದನ್ನೆಲ್ಲ ದೇವರು ನೋಡ್ತಿರ್ತಾನೆ, ಯಾರಿಗೆ ಬೇಕಾದರೂ ಮೋಸ ಮಾಡಬಹುದು ಆದರೆ ದೇವರಿಗೆ ಮಾತ್ರ ಮೋಸ ಮಾಡೋಕಾಗಲ್ಲ, ಹೀಗೆ ನೂರೆಂಟು ಮಾತುಗಳನ್ನು ನೀವು ಕೇಳಿರಬಹುದು. ಆದರೆ ಇನ್ನು ಮೇಲೆ ಇಂಥಾ ಮಾತುಗಳನ್ನು ಯಾರೂ ಆಡೋಲ್ಲ ಅಂತ ಕಾಣುತ್ತೆ. ಯಾಕೆಂದರೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರೇ ಈ ದೇಶವನ್ನು ದೇವರೂ ಕಾಪಾಡಲಾರ ಅಂತ ತೀರ್ಪು ಕೊಟ್ಟಿದ್ದಾರೆ. ಅದು ನಿಜವೇ. ಸೃಷ್ಟಿಸಿದವನಿಗೇ ಸವಾಲ್ ಅನ್ನುವ ಹಾಗೆ ನಮ್ಮ ಜನರ ಸ್ವಭಾವ ಬೆಳೆದಿದೆ. ಹದಗೆಟ್ಟ ಪರಿಸ್ಥಿತಿ ಅಂದರೆ ಇದೇ ಇರಬೇಕೇನೋ. ನಾವು ದಿನನಿತ್ಯ ಕಾಣುವ ಸಂಗತಿಗಳನ್ನು ಗಮನಿಸಿದಾಗ ನಮಗೂ ಹೀಗೇ ಅನಿಸಬಹುದು. ಆದರೆ ಲಂಚ ತಗೊಂಡೋನು ಮಜಾ ಮಾಡ್ತಿರುವಾಗ, ರಿಗ್ ಮಾಡಿ ಚುನಾವಣೆ ಗೆದ್ದು ಮಂತ್ರಿಯಾದವರನ್ನು ಕಂಡಾಗ, ಲೋಕಾಯುಕ್ತರು ರೈಡ್ ಮಾಡಿದ ಮೇಲೂ ಜನ ರಾಜಾರೋಷವಾಗಿ ತಿರುಗಾಡುತ್ತಿರುವಾಗ, ಅಂಥವರಿಗೆ ಶಿಕ್ಷೆಯಾಗುತ್ತಿರುವಾಗ, ಹಗಲು ಹೊತ್ತಿನಲ್ಲೇ ರಾಜಾರೋಷವಾಗಿ ಪೋಲೀಸ್ ಎದುರಿನಲ್ಲೇ ಕೊಲೆ ಮಾಡಿ ಕೊಲೆಗಾರ ಓಡಿಹೋಗುವಾಗ, ನನಗೂ ಹೀಗೇ ಅನಿಸುತ್ತಿದೆ ಏನಂತ – ಅನಿಸುತಿದೆ ಯಾಕೋ ಇಂದು ಈ ದೇಶವನ್ನು ದೇವರೂ ಕಾಪಾಡಲಾರನೆಂದೂ

– ಬೇಲೂರು ರಾಮಮೂರ್ತಿ

ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಧೀಶರು ದೇವರೇ ಬಂದರೂ ಈ ಸರ್ಕಾರವನ್ನು ಸರಿಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದು ಪತ್ರಿಕೆಗಳ ಮೂಲಕ ನಮಗೆ ತಿಳಿದಿದೆ. ಈ ಸುದ್ದಿ ಓದುತ್ತಿದ್ದ ಹಾಗೇ ನನಗೆ ಒಂದು ಘಟನೆ ನೆನಪಿಗೆ ಬಂದಿತು. ಬಿಇಎಲ್ ಕಾರ್ಖಾನೆ ಶುರುವಾದಾಗ ಇಲ್ಲಿನ ಕಾಮಗಾರಿ ಕೆಲಸಗಳಿಗೆ ಏಣಿಗಳು ಬೇಕಿದ್ದುವಂತೆ. ಸರ್ಕಾರೀ ಕಾನೂನಿನ ಪ್ರಕಾರ ಹಲವಾರು ಟೆಂಡರುಗಳು ಹೋದವು, ಕೊನೆಗೆ ಸಿಟಿ ಮಾರುಕಟ್ಟೆಯ ಒಬ್ಬ ವ್ಯಾಪಾರಿಗೆ ಸರಬರಾಜಿನ ಆದೇಶವೂ ಹೋಯಿತು. ಆಗ – 54 ವರ್ಷಗಳ ಹಿಂದೆ ಸಾರಿಗೆ ವ್ಯವಸ್ಥೆ ಹೀಗಿರಲಿಲ್ಲ. ಬಡಕಲು ಕುದುರೆಯ ಜಟಕಾದಲ್ಲಿ ನಾಲ್ಕು ಏಣಿ – 30 ಅಡಿ ಉದ್ದದವನ್ನು ಹಾಕೊಂಡು ಸರಬರಾಜುದಾರರು ಬಂದರು. ಆಗ ಇಲ್ಲಿ ಫ್ರೆಂಚ್ ಸಿವಿಲ್ ಎಂಜಿನಿಯರ್ ಇದ್ದರು. ಏಣಿಯ ಉದ್ದ ಅಗಲ ಎತ್ತರ ಎಲ್ಲವನ್ನೂ ಕೂಲಂಕುಷವಾಗಿ ಅಳೆದರು. ಏಣಿ ತಿರಸ್ಕೃತವಾಯಿತು! ಕಾರಣ: ಅಂಚಿನಲ್ಲಿ ಏಣಿ ಬಾಗಿದೆ, ನೇರವಿಲ್ಲ ಎಂಬ ಕಾರಣ. ಏಣಿ ಸರಬರಾಜು ಮಾಡಿದ್ದು ಮುಸ್ಲಿಂ ಪಂಗಡಕ್ಕೆ ಸೇರಿದವರು. ಏಣಿ ರಿಜೆಕ್ಟ್ ಆಗಿದ್ದು ಕೇಳಿ ಹೀಗಂದರಂತೆ ಉರ್ದುವಿನಲ್ಲಿ – ಈ ದೇಶದಲ್ಲಿ ನಾಯಿ ಬಾಲ ಮತ್ತು ಏಣಿ ಯಾವತ್ತೂ ನೆಟ್ಟಗಿರೋಲ್ಲ, ಖುದಾನೇ ಬಂದರೂ ಇದನ್ನ ಸರಿಮಾಡುಕ್ಕೆ ಆಗುಲ್ಲ!

ದೇವರೇ ಬಂದರೂ ಸರಿ ಮಾಡಲು ಆಗದಿರುವ ಹಲವಾರು ಸುಖವನ್ನು ನಾವು ಅನುಭವಿಸುತ್ತಿದ್ದೇವೆ ಅವುಗಳಲ್ಲಿ ಕೆಲವು:

- ಬೆಂಗಳೂರಿನ ಟ್ರಾಫಿಕ್ ಜಾಮು
- ಮಳೆ ಸುರಿದಾಗ ಬೆಂಗಳೂರಿಗರ ಬವಣೆ
- ರೈತರ ಆತ್ಮಹತ್ಯೆಯಂಥಹ ಸರ್ಕಾರೀ ನಿರ್ಮಿತ ಸಮಸ್ಯೆ
- ದೇಶದಲ್ಲಿ ಬೆಳೆದು ನಿಂತಿರೋ ಭ್ರಷ್ಟಾಚಾರ
- ಮರಕೋತಿ ಆಡುವ ಶಾಸಕರ ನಿಯಂತ್ರಣ
- ಕಾವೇರಿ ನದಿ ನೀರಿನ ಸಮಸ್ಯೆ....

ಪಟ್ಟಿ ಮಾಡುತ್ತಾ ಹೋದರೆ ಹನುಮಂತನ ಬಾಲ ಆಗುತ್ತೇ ಹೊರತು ಪರಿಹಾರವಿಲ್ಲ. ಇದಕ್ಕೆ ಒಂದೇ ಒಂದು ಉಪಾಯ ಇದೆ – ನಮಗೇ ಅಥವಾ ಯಾರಿಗೂ ಇದು ಬೇಡ ಅನಿಸಿದರೂ, ದೇಶದಲ್ಲಿ ಪ್ರಳಯವಾಗಿ ಸಂಪೂರ್ಣ ನಿರ್ನಾಮವಾಗಿ ಮತ್ತೆ ಹೊಸದಾಗಿ ದೇಶ ಕಟ್ಟಿದರೆ ಈ ಸಮಸ್ಯೆಗಳು ಪರಿಹಾರ ಕಂಡುಕೊಳ್ಳುತ್ತವೆಯೋ?

ದೇವರಿಗೇ – ದೇವರು ಅಂತ ಒಬ್ಬನೋ ಹಲವರೋ ಇದ್ದರೆ – ಅದಕ್ಕೆ ಗೊತ್ತಿರಬೇಕು!

– ಎಚ್. ಗೋಪಾಲಕೃಷ್ಣ

ದೇವರಿಗೂ ಸಹ ಈ ದೇಶವನ್ನು ಕಾಪಾಡಲು ಸಾಧ್ಯವಿಲ್ಲ – ಹೀಗೆಂದು ನಮ್ಮ ಸರ್ವೋಚ್ಚ ನ್ಯಾಯಾಲವೇ ತನ್ನ ಹತಾಶೆಯನ್ನು ವ್ಯಕ್ತಪಡಿಸಿದೆ. ನಮಗೂ ಹಲವಾರು ಬಾರಿ ಹೀಗೇ ಅನಿಸುತ್ತಿತ್ತು; ಹೇಳಲು ಒಂದು ಬಗೆಯ ಸಂಕೋಚವಾಗುತ್ತಿದ್ದರೂ ದೇವರೇ ದಿಕ್ಕು ಎಂದು ಯಾಂತ್ರಿಕವಾಗಿ ನಮ್ಮ ಹತಾಶೆಯನ್ನು ತೋಡಿಕೊಳ್ಳುತ್ತಿದ್ದೆವು. ಆದರೆ ನಮ್ಮಂಹವರಿಗೆ ಈಗ ಸುಪ್ರೀಂ ಕೋರ್ಟ್ ದನಿ ನೀಡಿದೆ. ಇನ್ನು ಮುಂದೆ ದೇವೇಗೌಡರಂತಹ ರಾಜಕಾರಣಿಗಳು ದೀನದಲಿತರ ಬಗ್ಗೆ ಕಳವಳ ವ್ಯಕ್ತಪಡಿಸಿದಾಗ ದೇವರೇ ಈ ದೇಶವನ್ನು ಕಾಪಾಡು ಎಂದು ಕೇಳಿಕೊಳ್ಳಬೇಕಾದ ಅಗತ್ಯ ಕಂಡು ಬರದು. ಏಕೆಂದರೆ ದೇವನಿಗೂ ಆ ಕಾರ್ಯ ಸಾಧ್ಯವಿಲ್ಲ ಎಂದು ಮನವರಿಕೆ ಮಾಡಿಕೊಟ್ಟಿದ್ದಾರಲ್ಲ! ಎಲ್ಲವನ್ನೂ ಮಾಡಲು ಸರ್ವಶಕ್ತನಾದ ದೇವನಿಗೆ ತಾನೇ ಎತ್ತಲಾಗದಂತಹದಷ್ಟು ದೊಡ್ಡ ಕಲ್ಲನ್ನು ಸೃಷ್ಟಿಸಲು ಸಾಧ್ವವೆ? ಎಂಬ ಹಳೆಯ ಫಿಲಸಾಫಿಕಲ್ ಪ್ರಶ್ನೆಯ ಜತೆಗೆ ಅಂತಹದೇ ಇಂಪಾಸಿಬಲ್ ಪ್ರಶ್ನೆ ಎಂದರೆ ಈ ಮೇರಾ ಭಾರತ್ ಮಹಾನ್ ಕಾಪಾಡಲು ಅವನಿಗೆ ಸಾಧ್ವವೆ? ಎಂಬುದು. ಇದಕ್ಕೆ ಅವನ ಉತ್ತರ ಏನಿರಬಹದು? ಇದಕ್ಕೂ ಅವನು ಈಗಾಗಲೇ ಉತ್ತರ ಕೊಟ್ಟಂತಿದೆ. ಏಕೆಂದರೆ ಬುಷ್ ಒಮ್ಮೆ ದೇವರನ್ನು ಅಮೆರಿಕ ಎಂದು ಉದ್ಧಾರವಾಗುತ್ತದೆ? ಎಂದು ಕೇಳಿದಾಗ ನಿನ್ನ ಅವಧಿಯಲ್ಲಿ ಸಾಧ್ಯವಿಲ್ಲ ಎಂದು ನೇರವಾಗಿ ಉತ್ತರಿಸಿದರೆ ಭಾರತ ಎಂದು ಉದ್ದಾರವಾಗುತ್ತದೆ ಎಂದು ಮನಮೋಹನ ಸಿಂಗ್ ಕೇಳಿದಾಗ ನನ್ನ ಜೀವಿತಾವಧಿಯಲ್ಲಿ ಸಾಧ್ಯವಿಲ್ಲ ಎಂದು ನೇರ ದಿಟ್ಟ ಉತ್ತರ ನೀಡಿ ಕೈ ತೊಳೆದುಕೊಂಡಿದ್ದ ಎಂದು ಓದಿದ ನೆನಪು. ಸರ್ವಶಕ್ತನಾದ ದೇವನಿಗೆ ತನ್ನ ಇತಿಮಿತಿ ಏನು ಎಂಬುದು ಆಗಲೇ ಅರಿವಾಗಿತ್ತು ಎಂದು ಇದರಿಂದ ಸಾಬೀತಾಗುತ್ತದೆ. ಆದರೆ 330 ಮಿಲಿಯನ್ ದೇವಾನುದೇವತೆಗಳೆಲ್ಲರ ಹೋಂ ಟೌನ್ ಆದ ಭಾರತಕ್ಕೆ ಈ ಗತಿ ಬರಬಾರದಿತ್ತು. ಆದರೆ ಇದೂ ದೇವರ ಇಚ್ಛೆಯೇ ಆಗಿರಬಹುದೆ?

– ಆನಂದ

ಈ ಕೋರ್ಟಿನ್ನಂದಿ ಹಳೇ ಕಥೆಗಳ್ನೇ ಹೇಳ್ತಾರೆ. ನಮ್ದೇಶಾನ ಸರಿಮಾಡಕ್ಕಾಗಲ್ಲಾಂತ ಇವ್ರ್ಗೆ ಈಗೊತ್ತಾಗ್ತಿದೆ; ಆದ್ರೆ ಆ ದೇವರ್ಗೆ ಯಾವತ್ತೋ ಗೊತ್ತಾಗ್ಹೋಯ್ತು. ಒಂಭತ್ತು ಸ್ವಾಮೀ.... ಎಷ್ಟ್ಹೇಳೀ... ಒಂಭತ್ತು ಅವ್ತಾರ ಎತ್ತಿದ ಅವ್ನೂನೂ, ಇಂದಲ್ಲಾ ನಾಳೆ ಇವ್ರು ದಾರೀಗ್ ಬರ್ತ್ತಾರೇನೋಂತ ಬರೀ ಕಾದದ್ದೇ ಭಾಗ್ಯ. ಕಡೆಗೆ ಹತ್ನೇ ಅವ್ತಾರಾನ್ಬೇಡಾಂತ್ನಿರ್ಧರ್ಸ್ಲಿ ಅವನ್ಪಾಡ್ಗವ್ನು ಕ್ಷೀರ್ ಸಾಗರ್‌ಗ್ಹೋಗಿ ವಿಧಾನಸೌಧದಲ್ಮಂತ್ರಿಗಳ್ಮಲ್ಗೋಹಾಗೆ ಮಲಗ್ಬಿಟ್ಟ.

ಪಾಪ ಬಡ್ಪಾಯಿ ದೇವ್ರು. ಅವ್ನ್ ಕಷ್ಟಗ್ಳೇ ಅವ್ನನ್ನ ಕಿತ್ಕೊಂಡ್ತಿಂತಿರತ್ತೆ. ಅವ್ನ್ ಭಯ ಅವ್ನ್ಗೆ. ಯಾವ್ಕಾಯ್ದಲ್ಲಿ ಯಾವ್ಕ್ಷಣ್ದಲ್ಲಿ ಹಾವು ಹಾಲಿಗ್ವಿಷ ಉಗ್ಯತ್ತೋಂತ ವಿಷ್ಣು ಬ್ರಹ್ಮನ್ ಫ್ಯಾಕ್ಟ್ರೀಗೆ ಬಿಡ್ವೇ ಇಲ್ದೆ ಹುಚ್ಚುಚ್ಚಾಗಿ ಜನ್ಸಂಖ್ಯೆ ಬೆಳೆದ್ರೆ ಕಂಟ್ರೋಲ್ಮಾಡೋದ್ಹೇಗೇಂತ ಈಶ್ವರ ತಮ್ತಮ್ ದುಃಖದ್ಲುಳ್ಳಿಗ್ರೋವಾಗ ನಮ್ದೇಶಾನ ನಾವೇ ಒಂದಿಷ್ಟು ಮುತುವರ್ಜಿ ವಹಿಸಿ ನೋಡ್ಕೊಳ್ಳೋದ್ಪಾಸಿ. ಮುಖ್ಯವಾಗಿ ನಾವು ಜನಗಳ್ಬದ್ಲಾಗ್ಬೇಕು. ಪೊಲೀಸ್ ಕಾಣ್ದೇಯಿದ್ರೆ ಸಿಗ್ನಲ್ಹಾರೋದು, ಮನೆಯವ್ರ್ಯಾರ್ಕಣ್ದೇ ಇದ್ರೆ ಹೂ ಕದ್ಯೋದು, ಸಿಕ್ಕಿಕ್ಕಿದ್ದಾಗ್ದಲ್ಲಿ ಹೇಸ್ಗೆಮಾಡೋದು, ಲೈಸೆನ್ಸ್ ಸೆನ್ಸು ಇಲ್ದೆ ವೆಹಿಕಲ್ ಓಡ್ಸೋದು ಮಾಡೋ ನಾವು ಮಂತ್ರಿ ಹಾಗೆ, ಮಂತ್ರಿ ಹೀಗೇಂತ ಮಾತಾಡ್ತೀವಿ. ಸಣ್ ಜನದ್ದಣ್ ತಪ್ಪು ದೊಡ್ಡೋರ್ದು ದೊಡ್ಡು. ನಮ್ಮಮ್ಮನೆ ನಾವ್ನಾವ್ ಸರ್ರ್ಯಾಗಿಟ್ಕೊಂಡ್ರೆ ನಮ್ಮನ್ ಮಾದ್ರಿಯಾಗ್ಮಾಡ್ಕೊಂಡು ಮತ್ತೊಬ್ರು ಬದ್ಲಾಗ್ಬಹುದು. ಬದ್ಲಾವ್ಣೇನೂ ನದೀ ಹಾಗೇನೇವೇಯ. ಸಣ್ಣದಾಗಿ ಎಲ್ಲೋ ಷುರುವಾಗಿ ಮುಂದೆ ಅಗಾಧ್ವಾಗತ್ತೆ.

ಅಂದ್ಹಾಗೇ ಈ ಕೋರ್ಟಿನ್ನಂದಿ ಕಾನೂನಿನ್ ಪುಟ ತೆಗೀರೀಂದ್ರೆ ಕಾಣದವ್ನ್ ಪಟ ಹಿಡಿಯೋದ್ಯಾಕಂತೆ?

- ಎನ್. ರಾಮನಾಥ್

ನಿಮ್ಮ ಮಾತು

ಅಪರಂಜಿ ತಪ್ಪದೇ ಕೈ ಸೇರುತ್ತಿದೆ. ಪತ್ರಿಕೆ ದಿನೇ ದಿನೇ ಆಕರ್ಷಣೀಯವಾಗಿ ಹೊರಬರುತ್ತಿದೆ. ನಿಮ್ಮ ಶ್ರಮಕ್ಕೆ ಅಭಿವಂದನೆ ಹಾಗೂ ಅಭಿನಂದನೆಗಳು

- ಸಿ. ಹೇಮಲತ, ಮೈಸೂರು

1984ರಲ್ಲಿ ನಿಮ್ಮ ಮನೆಯಲ್ಲಿ ಭೇಟಿಯಾದಾಗಿನಿಂದ ನಾನು ಅಪರಂಜಿಯ ತಿಳಿನಗೆಯನ್ನು ಪ್ರತಿ ತಿಂಗಳೂ ಸವಿಯುತ್ತಿದ್ದೀನಿ. ಜುಲೈ ಸಂಚಿಕೆಯ ನಿಮ್ಮ ಮಾತು ತುಂಬಾ ಹಿಡಿಸಿತು.

- ಕೆ.ವಿ. ಕೃಷ್ಣಪ್ಪ, ಬೆಂಗಳೂರು

ಪ್ರತಿ ತಿಂಗಳೂ ನಮಗೆ ಒಂದು ಸುಮಧುರವಾದ, ಖುಷಿಕೊಡುವಂತಹ ಕ್ಷಣಗಳನ್ನು ಅಪರಂಜಿಯ ಮೂಲಕ ಒದಗಿಸುತ್ತಿರುವ ನಿಮಗೆ ಧನ್ಯವಾದಗಳು.

- ಕೆ.ಎ. ಟಿನಾಯ್, ಬೆಂಗಳೂರು

ವಿದ್ಯಮಾನಗಳು

- ಕು.ಕ

ಹುಲಿಯ ಮೇಲೆ ಸವಾರಿ ಮಾಡಲು ಹೊರಟವರು ಕೊನೆಗೆ ಅದೇ ಹುಲಿಯ ಹೊಟ್ಟೆ ಸೇರುತ್ತಾರೆ ಎನ್ನುವುದು ಅನುಭವವಾಣಿ. ನಮ್ಮ ಪಕ್ಕದ ಪಾಕಿಸ್ತಾನದಲ್ಲಿಯೇ ಈ ಮಾತು ನಿಜವೆಂದು ತೋರಿಸಿದ ಅನೇಕ ಸರ್ವಾಧಿಕಾರಿಗಳಿದ್ದಾರೆ. ಆದರೆ ಇತ್ತೀಚಿಗೆ ಮಿಯಾ ಮುಷರಫ್ ಹುಲಿ ಬೆನ್ನಿನಿಂದ ಇಳಿದ ಮೇಲೂ ಇನ್ನೂ ಬದುಕಿ ಉಳಿದಿದ್ದಾರೆ. ಒಂದು ಕಾಲದಲ್ಲಿ ರಾಷ್ಟ್ರದ ಮಹಾನಾಯಕ, ವಿಶ್ವದ ಅತಿ ಶಕ್ತಿಶಾಲಿ ನಾಯಕನ ಖಾಸ್ ದೋಸ್ತ್ ಎನ್ನಿಸಿಕೊಂಡಿದ್ದ ಈ ಜನರಲ್ ಈಗ ಮದುವೆ ಮನೆಯಲ್ಲಿ ಇನ್ನಷ್ಟು ಲಾಡು ಕೇಳಿದ ಮಗುವಿನಂತೆ ಚಿಲ್ಲರೆ ಜನರ ಕೈ ಕಟ್ ಬಾಯ್ ಮುಚ್ ಎನ್ನುವಂತಹ ಆಜ್ಞೆಗಳನ್ನು ಪಾಲಿಸಬೇಕು. ಇಂತಹ ಜೀವನವೂ ಒಂದು ಬಾಳೇ ಎಂದು ಕೆಲವರು ಕೇಳಬಹುದೇನೋ. ಈ ಮಾಜಿ ಜನರಲ್ಲಿಗೆ ಇನ್ನೂ ಪಾಕಿಸ್ತಾನವನ್ನು ಉಳಿಸಿದವನೇ ನಾನು ಎನ್ನುವ ನಂಬಿಕೆ. ಆದರೆ ಆ ದೇಶದ ಸಾಮಾನ್ಯ ಜನರೇ ಜನರಲ್ ಪತನವನ್ನು ಒಂದು ಪ್ರಮಾದದ ಅಂತ್ಯ end of an error (end of an era ಅಲ್ಲ) ಎಂದು ಗೇಲಿ ಮಾಡುತ್ತಿದ್ದಾರಂತೆ.

★★★

ಮುಷರಫ್ ಸುದ್ದಿಯಲ್ಲಿದ್ದ ಒಂಬತ್ತು ವರ್ಷಗಳ ಅವಧಿಯಲ್ಲಿ ನಡೆದ ಘಟನೆಗಳು ಎಷ್ಟೊಂದು! ಪ್ರಧಾನಿ ನವಾಜ್ ಷರೀಫ್‌ನಿಂದ ಜನರಲ್ ಪದವಿಗೆ ಭಡ್ತಿ; ಸೈನ್ಯದ ಮುಖ್ಯನಾಗಿ ಪ್ರಧಾನಿ ಷರೀಫ್‌ಗೆ ತಿಳಿಸದೆ ಕಾರ್ಗಿಲ್ ದುಸ್ಸಾಹಸ; ಅದರಲ್ಲಿ ಯಶಸ್ವಿಯಾಗಿದ್ದರೆ ಮಹಾಸಾಹಸಿಯೆಂಬ ಕೀರ್ತಿಯ ನಿರೀಕ್ಷೆ; ಆದರೆ ಸೋಲು; ಸೋತರು ಮೀಸೆ ಮಣ್ಣು ಮಾಡಿಕೊಳ್ಳದ ಜಾಣ್ಮೆ; ಮುಂದೆ ಸೈನ್ಯದ ಸಹಾಯದಿಂದ ಷರೀಫ್ ಪದಚ್ಯುತಿ, ದೇಶದಿಂದ ಗಡೀಪಾರು; ಮುಂದೆ ರಾಷ್ಟ್ರನಾಯಕನಾಗಿ ಅಧಿಕಾರ; ವಾಜಪೇಯಿ ಜೊತೆ ಕ್ಷಣ ಬಿಸಿಬಿಸಿ ಕ್ಷಣ ತಣ್ಣತಣ್ಣ ಸಂಬಂಧ; ಒಳಗೊಳಗೆ ಐಎಸ್ಐ ಮೂಲಕ ಕಾಶ್ಮೀರದಲ್ಲಿ ಭಯೋತ್ಪಾದಕರಿಗೆ ಬೆಂಬಲ; ಹೊರಗಡೆ ಎಲ್ಲಾತರಹದ ಭಯೋತ್ಪಾದನೆಯನ್ನು ಖಂಡಿಸುವ ಹೇಳಿಕೆಗಳು; ಮುಂದೆ ಪಾಕಿಸ್ತಾನದ ಅಸ್ತಿತ್ವಕ್ಕೇ ಸವಾಲಾದ ಏಳು ಒಂಬತ್ತರ ಆ ನಿರ್ಣಾಯಕ ದಿನ; ಟೆರರಿಸ್ಟ್ ನೇಷನ್ ಎನ್ನುವ ಹಣೆಪಟ್ಟಿ ಅಂಟುವುದನ್ನು ತಪ್ಪಿಸಿಕೊಳ್ಳಲೇಬೇಕಾದ ಅನಿವಾರ್ಯತೆ; ರೈಟ್ ಎಬೌಟ್ ಟರ್ನ್- ಟೆರರಿಷ್ಟರು ಟೆರರಿಷ್ಟರೇ ಸ್ವಾತಂತ್ರ್ಯ ಹೊರಾಟಗಾರರಲ್ಲ ಎಂದು ಒಪ್ಪಿಕೊಳ್ಳುವ ಸಮಯಪ್ರಜ್ಞೆ; ಬೀಸುವ ಕತ್ತಿಯಿಂದ ಪಾರು; ತಾವೇ ಪೋಷಿಸಿ ಬೆಳೆಸಿದ ತಮ್ಮ ದೇಶದ ಭಯೋತ್ಪಾದಕರೊಡನೆ ಕೆಂಪು ಮಸೀದಿಯಲ್ಲಿ ಎನ್‌ಕೌಂಟರ್; ಜನಪ್ರಿಯತೆ ಪ್ರಪಾತಕ್ಕೆ; ಅಮೆರಿಕಾ ಒತ್ತಡದಿಂದ ಚುನಾವಣೆ ಘೋಷಣೆ; ಬೆನಜೀರ್ ಷರೀಫ್ ಪುನರಾಗಮನ; ಬೆನಜೀರ್‌ಳ ಭೀಕರ ಮರಣ; ತಮ್ಮ ವಿರುದ್ಧ ತೀರ್ಪು ಕೊಟ್ಟ ಸುಪ್ರೀಂ ಕೋರ್ಟಿನ ನ್ಯಾಯಾಧೀಶರುಗಳ ಬರಖಾಸ್ತು; ಚುನಾವಣೆಯಲ್ಲಿ ತಾನು ಬೆಂಬಲಿಸದ ಪಕ್ಷಕ್ಕೆ ಹೀನಾಯ ಸೋಲು; ಇಂಪೀಚ್‌ಮೆಂಟ್ ಭಯ; ಕೊನೆಗೂ

ನಿರ್ಗಮಿಸುವ ನಿರ್ಧಾರ. ಒಟ್ಟಾರೆ ಮುಷರಫ್ ಸಾಧನೆ ಏನು? ಪಾಕಿಸ್ತಾನ ಇನ್ನೊಂದು ಅಫ್ಘಾನಿಸ್ತಾನ ಇನ್ನೊಂದು ಇರಾಕ್ ಆಗಲಿಲ್ಲ ಎನ್ನುವುದೇ? ಇದು ಸಹ ಏನು ಕಡಿಮೆ ಸಾಧನೆಯಲ್ಲ ನಿಜ. ಮುಷರಫ್ ನಂತರ? ಒಂದು ಆಯ್ಕೆ - ನೂರಾರು (ಅ)ವ್ಯವಹಾರಗಳಲ್ಲಿ ಸಿಕ್ಕಿಕೊಂಡಿದ್ದ ಆ ಅಪ್ಪನ ಮಗಳ ಗಂಡ ಎನ್ನುವ ಒಂದೇ ಒಂದು ಅರ್ಹತೆಯ ಒಬ್ಬ; ಮತ್ತೊಂದು ಪರ್ಯಾಯ ನೂರಾರು ಭ್ರಷ್ಟಾರೋಪಗಳಿರುವ ಮತ್ತೊಬ್ಬ. ನಾವು ಬೇಕಾದ ಸ್ನೇಹಿತರನ್ನು ಆರಿಸಿಕೊಳ್ಳಬಹುದು. ಆದರೆ ಅಕ್ಕಪಕ್ಕದಲ್ಲಿ ಇರುವವರ ಬಗ್ಗೆ ಇಂಥ ಆಯ್ಕೆಗೆ ಅವಕಾಶವಿಲ್ಲ. ಇರುವವರನ್ನು ಸಹಿಸಿಕೊಳ್ಳಲೇಬೇಕು.

★★★

ಕಳೆದ ಕೆಲವು ಒಲಂಪಿಕ್ ಆಟಗಳ ಸಂದರ್ಭದಲ್ಲಿ ಬಹಳ ಜನ ಕೇಳುತ್ತಿದ್ದ ಪ್ರಶ್ನೆ - ನೂರು ಕೋಟಿ ಜನರ ದೇಶಕ್ಕೆ ಪುಟಗೋಸಿ ಒಂದೇ ಒಂದು ಪದಕವೇ? ಈ ಬಾರಿ ನಮ್ಮ ಅಥ್ಲೀಟುಗಳ ಒಂದು ಚಿನ್ನ ಸೇರಿ ಒಟ್ಟು ಮೂರು ಪದಕಗಳನ್ನು ಗೆದ್ದು ಇಂತಹ ಪ್ರಶ್ನೆಗಳನ್ನು ಕೇಳುತ್ತಿದ್ದವರ ಬಾಯಿ ಮುಚ್ಚಿಸಿದ್ದಾರೆ. ಅಭಿನವ್ ಬಿಂದ್ರ, ಸುಶೀಲ್ ಕುಮಾರ್ ಮತ್ತು ವಿಜೇಂದರ್ ಕುಮಾರ್ ಸಾಧನಗೆ ಫಲ ಸಿಕ್ಕಿದೆ. ಜೊತೆಗೆ ಬಾಕ್ಸಿಂಗ್‌ನಲ್ಲಿ ಹರ್ಯಾಣಾದ ಪಂಚ ಕುಮಾರರು ಬ್ಯಾಡ್ಮಿಂಟನಲ್ಲಿ ಪುಟ್ಟ ಹುಡುಗಿ ಸೈನಾ ಉತ್ತಮ ಪ್ರದರ್ಶನ ನೀಡಿದ್ದಾರೆ. ನಮ್ಮ ಈ ಎಲ್ಲಾ ಕ್ರೀಡಾ ಪಟುಗಳನ್ನೂ ನಾವು ಅಭಿನಂದಿಸಲೇಬೇಕು. ಆದರೆ ಈ ವಿಜಯಕ್ಕೆ ನಾವೇ ಕಾರಣ ಎಂದು ರೈಫಲ್ ಷೂಟಿಂಗ್, ಬಾಕ್ಸಿಂಗ್, ರೆಸ್ಲಿಂಗ್ ಫೆಡರೇಷನ್ನುಗಳ ಆಡಳಿತಾ ಧಿಕಾರಿಗಳು, ಐಓಎ ಅಧ್ಯಕ್ಷರು, ಕ್ರೀಡಾ ಮಂತ್ರಾಲಯದ ಸಿಬ್ಬಂದಿಗಳು ನಮಗೆ ಹಾರಹಾಕಿ ಎಂದು ಕತ್ತು ಮುಂದು ಮಾಡುತ್ತಿದ್ದಾರೆ. ವಂದಿಮಾಗದರು ಈ ಯಶಸ್ಸಿಗೆ ಕಾರಣ ನಮ್ಮ ಹೊಸ ಕ್ರೀಡಾ ಮಂತ್ರಿಗಳು, ನಮ್ಮ ಪ್ರಧಾನಿಗಳು ನಮ್ಮ ಅಧ್ಯಕ್ಷಿಣಿ ಸೋನಿಯಾ ಎಂದು ರಾಗರಾಗವಗಿ ಹಾಡುತ್ತಿದ್ದಾರೆ. ಇದನ್ನೇ ತಾನೇ ನಮ್ಮ ಹಿರಿಯರು - ಯಶಸ್ಸಿಗೆ ನೂರು ಅಪ್ಪಂದಿರು ಆದರೆ ಸೋಲು ಮತ್ರ ಅನಾಥ ಎಂದು ಹೇಳಿದ್ದು?

★★★

ನಮ್ಮಮ್ಮ ಹೇಳುತ್ತಿದ್ದ ಒಂದು ಗಾದೆ: ಪಟ್ಟಣಶೆಟ್ಟಿ ಕೊಡವಿ ಕೊಡವಿ ಹಾಸ್ಕೋಳೋ ಹೊತ್ತಿಗೆ ಬೆಳಕು ಹರಿದಿತ್ತು. ನಮ್ಮಮ್ಮನ ಗಾದೆಯ ಆ ಪಟ್ಟಣಶೆಟ್ಟಿ ಎಲ್ಲವೂ ಶಿಸ್ತಾಗಿ ಟಾಕ್‌ಟೀಕಾಗಿರಬೇಕೆಂದು ಬಯಸುವವನು. ಅವನು ಹಾಸಿಗೆ ಮೇಲೆ ಮಲಗಿಕೊಳ್ಳಲು ಹೋದಾಗ ಅಲ್ಲೊಂದು ಸುಕ್ಕೋ ಅಥವ ಇಲ್ಲೊಂದು ಗಂಟೋ ಕಾಣುವುದು. ಅದನ್ನು ಸರಿಮಾಡುವ ಹೊತ್ತಿಗೆ ಮತ್ತೆಲ್ಲೋ ಇನ್ನೊಂದು ಮತ್ತೊಂದು ಗಂಟು. ಎಲ್ಲಾ ಸರಿಮಾಡಿಕೊಳ್ಳುವ ಹೊತ್ತಿಗೆ ವೇಕ್-ಅಪ್ ಟೈಂ- ಹಾಸಿಗೆ ಸುತ್ತಿಡುವ ಸಮಯ. ನಮ್ಮ ಬಿಎಸ್‌ವೈ ಎಂಎಲ್‌ಎಗಳನ್ನು ಮಂತ್ರಿಗಳನ್ನೂ ನೂರು ದಿನಗಳಿಂದಲೂ ಅಡ್ಜಸ್ಟ್ ಮಾಡಿಕೊಳ್ಳುತ್ತಿರುವುದನ್ನು ನೋಡಿದಾಗ ನಮ್ಮಮ್ಮ ಹೇಳುತ್ತಿದ್ದ ಈ ಪಟ್ಟಣಶೆಟ್ಟಿ ಜ್ಞಾಪಕಕ್ಕೆ ಬಂದ.

ನಿದ್ರೆಯ ಅವಾಂತರಗಳು

- ಕೆ.ಜಿ. ಭದ್ರಣ್ಣವರ

ನಿದ್ರೆ, ಹಸಿವು ಮತ್ತು ಕಾಮ ಇವು ಮನುಷ್ಯನ ಆರೋಗ್ಯಕರ ಜೀವನಕ್ಕೆ ಅವಶ್ಯಕ ಪೂರಕಗಳು ಎಂದು ಆಚಾರ್ಯರೊಬ್ಬರ ಉಕ್ತಿ. ಇವುಗಳಲ್ಲಿ ಕಾಮವನ್ನು ಸೇರಿಸಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳಲಾರೆ. ಯಾಕೆಂದರೆ, ಕಾಮವನ್ನು ಸಂಪೂರ್ಣವಾಗಿ ನಿಯಂತ್ರಿಸಿ, ಬ್ರಹ್ಮಚರ್ಯವನ್ನು ಜೀವನದ ಕೊನೆಯ ತನಕ ಪರಿಶುದ್ಧವಾಗಿ ಪಾಲಿಸಿಕೊಂಡು ಬಾಳಿವವರ ಅನೇಕ ನಿದರ್ಶನಗಳು ನಮ್ಮ ಮುಂದಿವೆ. ಇನ್ನು ಹಸಿವೆಯ ಕುರಿತು ಚರ್ಚಿಸುವುದು ಇಲ್ಲಿ ಅಪ್ರಸ್ತುತ. ಹಸಿವೆಯಾದಾಗ ಗಡ್ಡೆ, ಗೆಣಸು, ಹಸಿತರಕಾರಿ ಹೀಗೆ ಏನನ್ನಾದರೂ ತಿಂದು ನಿಯಂತ್ರಿಸಿಕೊಳ್ಳಬಹುದು. ಮುಖ್ಯವಾಗಿ ಇಲ್ಲಿ ನಾನು ನಿಮ್ಮೊಂದಿಗೆ ಚರ್ಚಿಸುವುದು ನಿದ್ದೆಯ ಬಗ್ಗೆ ಪ್ರಸ್ತುತ ಲೇಖನದ ಘನ ಉದ್ದೇಶವೂ ಅದೇ ಆಗಿದೆ. ನಿದ್ರೆ ಒತ್ತರಿಸಿ ಬಂದಾಗ ನಿದ್ರೆ ಮಾಡುವುದೊಂದೇ ಪರಿಹಾರ. ಬೇರೆ ವ್ಯವಸ್ಥೆಗಳಿಲ್ಲವೆಂದು ನೀವು ನನ್ನ ಈ ಲೇಖನವನ್ನು ಓದಿದ ಬಳಿಕ ಒಪ್ಪಿಕೊಳ್ಳುತ್ತೀರೆಂದು ನಾನು ಭಾವಿಸುತ್ತೇನೆ. ಬನ್ನಿ ನಿದ್ದೆ ಯಾವ ಯಾವ ತೆರನಾಗಿ ಮನುಷ್ಯರನ್ನು ಅವಾಂತರಗಳಿಗೀಡು ಮಾಡುತ್ತದೆಯೆಂಬುದನ್ನು ನೋಡೋಣ.

ಹಗಲಿನಲ್ಲೆಲ್ಲಾ ದುಡಿದು, ನಡೆದಾಡಿ, ಹೈರಾಣಾದ ದೇಹಗಳು, ಇರುಳಿನಲ್ಲಿ ನಿದ್ರೆಯ ಮೊರೆ ಹೋಗುವುದು, ವಿಶ್ರಾಂತಿ ಪಡೆಯುವುದು ಸಹಜ, ಭಗವಂತ ರಾತ್ರಿಯನ್ನು ನಿದ್ರೆಗಾಗಿಯೇ ಸೃಷ್ಟಿಸಿದ್ದಾನೆ. ಇರುಳಿನಲ್ಲಿ ನಿದ್ದೆಗೆಟ್ಟವರ ಪಾಡು ಅವಾಂತರಕ್ಕೆ ಈಡಾಗುತ್ತದೆ. ನಮ್ಮ ರಾಜಕಾರಣಿಗಳು ರಾತ್ರಿ ಸರಿಯಾಗಿ ನಿದ್ದೆ ಮಾಡದೇ, ಹಗಲು ಹೊತ್ತು ನಡೆಯುವ ಅನೇಕ ಸಭೆ ಸಮಾರಂಭಗಳಲ್ಲಿ ವೇದಿಕೆಯ ಮೇಲೆ, ವಿಧಾನ ಸಭೆ ಕಲಾಪಗಳಲ್ಲೂ ನಿದ್ದೆ ಮಾಡುವುದನ್ನು, ಪತ್ರಿಕೆಗಳು ಹಾಗೂ ದೂರ ದರ್ಶನಗಳು, ಸಚಿತ್ರವಾಗಿ ಪ್ರದರ್ಶಿಸಿ ಪುಕ್ಕಟೆ ಮನರಂಜನೆ ನೀಡುತ್ತವೆ. ನಿದ್ರೆ ಸಕಲ ಜೀವಿಗಳಿಗೂ ಅವಶ್ಯಕ. ಪಶು, ಪಕ್ಷಿಗಳೂ ಸಹ ರಾತ್ರಿ ಹೊತ್ತು ಮಲಗುತ್ತವೆ. ನಿದ್ರೆಯಲ್ಲಿ ಅನೇಕ ಪ್ರಕಾರಗಳಿವೆ. ಕಾಗೆ ನಿದ್ದೆ, ಗೂಗಿ ನಿದ್ದೆ, ಶವ ನಿದ್ದೆ, ನಾಯಿ ನಿದ್ದೆ, ಕುಂಭಕರ್ಣ ನಿದ್ದೆ. ಇನ್ನು ನಿದ್ರೆಯ ಝುಲಕುಗಳಾದ ತೂಕಡಿಕೆ, ಆಕಳಿಕೆ, ಜೊಂಪು ಹತ್ತುವದು, ತೇಲುಗಣ್ಣು ಹಾಕುವುದು ಇತ್ಯಾದಿ. ಈ ಝುಲಕುಗಳು ನಿದ್ರೆ ಬರುವ ಸೂಚನೆಗಳು. ಈ ನಿದ್ರೆ ಕರೆಯದೇ ಬರುವ ಅತಿಥಿ. ಸಮಯ, ಸಂದರ್ಭ ನೋಡುವುದೇ ಇಲ್ಲ, ಪರೀಕ್ಷೆ ಹತ್ತಿರ ಬಂದಾಗ ವಿದ್ಯಾರ್ಥಿಗಳಿಗೆ, ಶನಿಯ ಹಾಗೆ ಕಾಡುತ್ತದೆ. ಆ ಸಮಯದಲ್ಲಿ ಅವರು ನಿದ್ದೆಗೆ ಹಿಡಿ ಶಾಪ ಹಾಕುತ್ತಾರೆ. ಪುಸ್ತಕ ತೆರೆಯುತ್ತಲೇ, ಅನಿರೀಕ್ಷಿತವಾಗಿ ನಿದ್ದೆ ಆವರಿಸಿ, ಪುಸ್ತಕ ಪಕ್ಕಕ್ಕೆ ಜಾರಿರುತ್ತದೆ. ಲೈಟು ಉರಿಯುತ್ತಿರುತ್ತದೆ. ಪ್ರಾಥಮಿಕ ಶಾಲೆಯಲ್ಲಿ ಓದುವಾಗ, ನನ್ನ ಸಹಪಾಠಿಯೊಬ್ಬ ಗುರುಗಳು ಪಾಠ ಹೇಳುವಾಗ ತೂಕಡಿಸುತ್ತಿದ್ದ. ಇದನ್ನು ಕಂಡು ಸಹಿಸದ ಗುರುಗಳು ಅವನನ್ನು ಎದ್ದು ನಿಲ್ಲಿಸುತ್ತಿದ್ದರು. ಸ್ವಲ್ಪ ಸಮಯದಲ್ಲಿಯೇ ನಿಂತಲ್ಲಿಯೇ ತೂಕಡಿಸುವುದನ್ನು ಗಮನಿಸಿದ ಗುರುಗಳು ಅವನನ್ನು

ಹೊರಗೆ ಕಳಿಸುತ್ತಿದ್ದರು. ಹೊರಗೆ ಹೋದವನಿಗೆ ಇನ್ನೆಲ್ಲಿಯ ನಿದ್ದೆ?!. ಹತ್ತಿರದ ಗಿಡಗಳನ್ನೇರಿ ಹುಣಸೆ ಹಣ್ಣು ಹರಿಯುತ್ತಿದ್ದ. ಶಾಲೆ ಬಿಟ್ಟ ಬಳಿಕ ನಮ್ಮ ಜೊತೆ ಮನೆಗೆ ಬರುತ್ತಿದ್ದ. ಪಾಠ ಹೇಳುವಾಗ, ತೂಕಡಿಸುವವರಿಗೆ ಹಸಿ ಜಬರಿಯ ಏಟುಗಳು ಬೀಳುತ್ತಿದ್ದವು. ನಿದ್ದೆ ಎಷ್ಟೊಂದು ಹಠಮಾರಿಯೆಂದರೆ, ಏಟುಗಳ ನೋವು ಮರೆಯಿಸಿ ಮತ್ತೆ ನಿದ್ದೆ ಆವರಿಸುತ್ತಿತ್ತು.! ಇಂಥಹ ಪ್ರಸಂಗಗಳನ್ನು ನೆನೆದಾಗ, ನಿದ್ದೆ ಬಲು ಭಂಢತನದ್ದೆಂದು ನಮಗನಿಸುತ್ತಿತ್ತು. ರಾತ್ರಿ ಸಮಯದಲ್ಲಿ ರೈಲುಗಳಲ್ಲಿ ಪ್ರಯಾಣ ಮಾಡುವವರ ಫಜೀತಿ ಹೇಳತೀರದು. ತಾವು ಇಳಿಯಬೇಕಾದ ನಿಲ್ದಾಣ ಬಂದಾಗ ನಿದ್ದೆ ಹತ್ತಿರುತ್ತದೆ. ನಿಲ್ದಾಣದಿಂದ ಸ್ವಲ್ಪ ದೂರ ಹೋದ ಬಳಿಕ ಎಚ್ಚರವಾಗುತ್ತದೆ. ಬಳಿಕ ಪೇಚಾಟ, ಆತಂಕ ಶುರುವಾಗುತ್ತದೆ. ಇಲ್ಲಿಗೆ ನಿದ್ದೆಯ ಕೆಲಸ ಮುಗಿಯಿತು. ಆದು ಪರಾರಿಯಾಗಿರುತ್ತದೆ. ಮುಂದಿನ ನಿಲ್ದಾಣ ಬರುವ ತನಕ ನಿದ್ದೆ ಬಂದರೆ ಕೇಳಿ!. ಇಂಥಹ ಪ್ರಸಂಗಕ್ಕೆ ನಾನು ಈವರೆಗೆ ಜೀವನದಲ್ಲಿ ಎರಡು ಬಾರಿ ಈಡಾಗಿದ್ದೇನೆ. ಸತ್ಯವನ್ನು ಹೇಳಲು ನಿಮ್ಮೊಂದಿಗೆ ಮುಚ್ಚುಮರೆಯೇಕೆ?. ಹೀಗೆ ಎಲ್ಲಿ ಬೇಕಾದಲ್ಲಿ, ಹೊತ್ತು ಗೊತ್ತಿಲ್ಲದೇ ಕಾಡುವ ನಿದ್ದೆಯ ವಿರುದ್ಧ ಚಳುವಳಿ ಹೂಡುವ ಗುಂಪುಗಳು ನಮ್ಮಲ್ಲಿ ಇನ್ನೂ ಹುಟ್ಟಿಕೊಂಡಿಲ್ಲ! ಯಾಕೆಂದರೆ, ಇದು ಕಣ್ಣಿಗೆ ಕಾಣುವುದಲ್ಲ ಹಾಗೂ ಕೈಗೆ ಸಿಗುವುದಲ್ಲ. ಕೈಗೆ ಸಿಗುವಂತಿದ್ದರೆ ಖಂಡಿತ ನಿದ್ದೆ ಅನೇಕರಿಂದ ಒದೆ ತಿನ್ನುತ್ತಿತ್ತು!. ಒಟ್ಟಾರೆ ಅದರ ನಶೀಬು ಗಟ್ಟಿಯಿದೆ.

ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ನಾನು ಕಂಡ ಕೆಲವು ಅವಾಂತರಗಳನ್ನು ಹೇಳುತ್ತೇನೆ. ಪಕ್ಕದ ಆಸನದಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬ ನಿದ್ದೆಯಲ್ಲಿ ಮುಳುಗಿದ್ದ. ರಸ್ತೆ ಡೊಂಕಾಗಿದ್ದುದರಿಂದ, ಚಾಲಕ ಬಸ್ ಜೋರಾಗಿ ತಿರುಗಿಸಿದ್ದರಿಂದ, ನಿದ್ದೆ ಮಾಡುತ್ತಿದ್ದವನು ಆಯ ತಪ್ಪಿ ಸೀಟಿನಿಂದ ಜಾರಿ ಕೆಳಗೆ ಬಿದ್ದ. ಕೆಲವರು ಅವನ ಅವಸ್ಥೆಗೆ ನಕ್ಕರು. ಆದ ಅವಮಾನದಿಂದಾಗಿಯೋ ಅಥವಾ ನೋವಿನಿಂದಾಗಿಯೋ ಅವನು ಮತ್ತೆ ನಿದ್ದೆ ಮಾಡಲೇ ಇಲ್ಲ. ಅಂದು ನಾನು ಬೆಂಗಳೂರಿಗೆ ಹೊರಟಿದ್ದೆ. ಬಸ್ಸು ಜನರಿಂದ ತುಂಬಿತ್ತು. ನನ್ನ ಪಕ್ಕದ ಆಸಾಮಿ ನಿದ್ದೆ ಮಾಡುತ್ತಾ, ತನ್ನ ಗೋಣನ್ನು ನನ್ನ ಭುಜದ ಮೇಲೆ ಹೇರಲಾರಂಭಿಸಿದ. ನನಗೆ ಹಿಂಸೆಯಾಗತೊಡಗಿತು. ಆಗಾಗ ಅವನ ತಲೆಯನ್ನು ತಳ್ಳಿ, ನೇರ ಮಾಡಿ, ಮಾಡಿ ನನಗೆ ಸಾಕಾಯ್ತು. ಬೆಂಗಳೂರು ತಲುಪಲು ಇನ್ನೂ ಎಂಟು ಗಂಟೆ ಬೇಕು. ಹೀಗಾದರೆ ನನ್ನ ಗತಿಯೇನು! ಎಂದು ವಿಚಾರ ಮಾಡಿದೆ. ಬೇರೆ ಕಡೆಗೆ ಹೋಗಿ ಕುಳಿತುಕೊಳ್ಳಬೇಕೆಂದರೆ ಒಂದೂ ಸೀಟು ಖಾಲಿಯಿಲ್ಲ. ಅವನು ಪಟ್ಟುಬಿಡದ ತ್ರಿವಿಕ್ರಮನ ಹಾಗೆ ನನ್ನ ಭುಜದ ಮೇಲೆ ತಲೆ ಆನಿಸತೊಡಗಿದ. ಅವನು ತಲೆ ಆನಿಸಿದ ಸಮಯದಲ್ಲಿ, ಹಠಾತ್ತನೇ ಎದ್ದು ನಿಂತೆ. ಆಸಾಮಿ ಆಯ ತಪ್ಪಿ ಸೀಟಿನ ಮೇಲೆ ಬಿದ್ದ. ನಾನು ಸುಮಾರು ಹದಿನೈದು ನಿಮಿಷ ಹಾಗೆಯೇ ನಿಂತೆ! ನಾನು ಕುಳಿತುಕೊಳ್ಳದೇ ಇರುವ ಕಾರಣ ಅವನಿಗೆ ಗೊತ್ತಾಯ್ತು. ಬಿದ್ದುದರಿಂದಾಗಿ ಅವನಿಗೆ ಅವಮಾನವೆನಿಸಿತ್ತು. ನಾನು ಕುಳಿತೆ. ಬೆಂಗಳೂರು ತಲುಪುವ ತನಕ ಅವನು ಎಚ್ಚರವಾಗಿಯೇ ಇದ್ದ. ನನ್ನ ಮಿತ್ರನೊಬ್ಬ ಇತ್ತೀಚೆಗೆ ತನಗೆ ನಿದ್ದೆಯೇ ಬರುತ್ತಿಲ್ಲವೆಂದು ನನ್ನ ಮುಂದೆ ಗೊಣಗಲಾರಂಭಿಸಿದ. ನನಗೆ ಸಾಹಿತ್ಯದ ಹುಚ್ಚು

ಇದ್ದುದರಿಂದಾಗಿ, ಅವನನ್ನು ಕವಿಗೋಷ್ಠಿಗೆ ಕರೆದೊಯ್ದೆ. ಕವಿಗೋಷ್ಠಿ ಆರಂಭವಾದದ್ದಷ್ಟೆ ಅವನಿಗೆ ಗೊತ್ತು. ಮುಗಿದದ್ದು ಯಾವಾಗ ಎಂಬುದು ಅವನಿಗೆ ಗೊತ್ತಾಗಲಿಲ್ಲ. ಕಣ್ಣು ತುಂಬಾ ನಿದ್ದೆ ಮಾಡಿದ. ನನಗೆ ಧನ್ಯವಾದ ಹೇಳಿದ. ನಾನು ಕೆಲಸದ ನಿಮಿತ್ತವಾಗಿ ಕೆಲವು ಸರಕಾರಿ ಕಚೇರಿಗಳಿಗೆ ಹೋದಾಗ, ಅಲ್ಲಿಯ ಕೇಸ್ ವರ್ಕರ್‌ಗಳು ನಿಶ್ಚಿಂತೆಯಿಂದ, ಮೇಜಿಗೆ ತಲೆಯಾಡಿಸಿ ನಿದ್ದೆ ಮಾಡುತ್ತಿದ್ದುದನ್ನು ಕಂಡಿದ್ದೇನೆ. ಕಚೇರಿಗಳಲ್ಲಿ ನಿದ್ದೆ ಮಾಡುವವರನ್ನು ನೋಡಿದಾಗ, ಈ ಹನಿಗವನ ನೆನಪಾಗುತ್ತದೆ.

ಹೊಟ್ಟೆ ತುಂಬಾ ತಿನ್ನಿ
ರಾಗಿ ಮುದ್ದೆ
ಕಚೇರಿಯಲ್ಲಿ ಮಾಡಬಹುದು
ಕಣ್ತುಂಬಾ ನಿದ್ದೆ!

ಏಳು ಗಂಟೆಯಾದರೂ ಏಳದ ಗಂಡನನ್ನು ಎಬ್ಬಿಸುತ್ತಾ, ಒಬ್ಬ ಮಡದಿ ಅಂದಳಂತೆ, ಏಳ್ರೀ ಗಂಟೆ ಏಳಾಯ್ತು. ಎಲ್ಲಾ ನಿದ್ದೆನೂ ಮನೇಲೇ ಮಾಡಿದ್ರೆ, ಕಚೇರಿಲಿ ಕತ್ತೆ ಕಾಯ್ತೀರಾ? ಬಹುಶಃ ಗಂಡನ ಸ್ವಭಾವವನ್ನು ಆಕೆ ಚೆನ್ನಾಗಿ ಬಲ್ಲವಳಾಗಿರಬಹುದು. ರಾತ್ರಿ ಮಲಗಿದ ಬಳಿಕ ಏಳು ನಿಮಿಷಗಳಲ್ಲಿ ನಿದ್ದೆ ಬರಬೇಕೆಂದು ಬಲ್ಲವರ ಅಭಿಪ್ರಾಯ. ಆದರೆ, ಅನೇಕ ಬಾರಿ, ರಾತ್ರಿ ಹನ್ನೆರಡಾದರೂ ನಿದ್ದೆ ಬರುವುದಿಲ್ಲ. ದೂರದರ್ಶನದಲ್ಲಿ ಧಾರಾವಾಹಿ ನೋಡುತ್ತಾ ಕುಳಿತಾಗ, ಸದ್ದಿಲ್ಲದೇ ನಿದ್ದೆಗೆ ಜಾರಿರುತ್ತೇನೆ. ಧಾರಾವಾಹಿ ಮುಗಿದ ಬಳಿಕ ನನ್ನವಳು ಎಬ್ಬಿಸಿ ಮಲಗಲು ಹೇಳಿದಾಗಲೇ ಎಚ್ಚರವಾಗುತ್ತದೆ. ಹರೆಯದ ಕಾಲದಲ್ಲಿ ನನ್ನವಳು ಅನೇಕ ಸಲ ನನಗೆ ನಿರಾಶೆವುಂಟುಮಾಡಿದ್ದುಂಟು. ಕಚೇರಿಯಿಂದ ಮನೆಗೆ ತಂದ ಅರ್ಜೆಂಟ್ ಕೆಲಸವನ್ನು ಮುಗಿಸಿ, ಮಲಗಿದ ನನ್ನವಳ ಬಳಿ ಉತ್ಸಾಹ, ಉದ್ರೇಕದಿಂದ ಅಪ್ಪಲು ಹೋದಾಗ, ಇವತ್ತು ಬೇಡಾರೀ, ನನಗೆ ತುಂಬಾ ನಿದ್ದೆ ಬರ್ತಿದೆ ಎಂದು ಸಹಕರಿಸದಾಗ, ನಿರಾಶೆಯಿಂದ ಮಲಗಿದ್ದೇನೆ. ಅಂದಿನಿಂದ ಕಚೇರಿಯ ಕೆಲಸವನ್ನು ಮನೆಗೆ ತರುವುದನ್ನು ನಿಲ್ಲಿಸಿದೆ. ಮದುವೆಯಾದ ಹೊಸತರಲ್ಲಿ, ಇರುಳೇ ಹಗಲಾಗಿರುತ್ತದೆ. ಹಗಲು ಬೇಗನೇ ಕಳೆದು ರಾತ್ರಿಯಾಗಬೇಕೆನಿಸುತ್ತದೆ.

ಇಬ್ಬರು ಕಳ್ಳರು ಒಂದು ಮನೆಗೆ ಕಳ್ಳತನ ಮಾಡಲು ಬಂದಾಗ ರಾತ್ರಿ ಮೂರು ಗಂಟೆ ಸಮಯವಂತೆ, ಇಡೀ ನಗರವೇ ಘಾಢವಾದ ನಿದ್ದೆಯಲ್ಲಿ ಮುಳುಗಿರುವ ಸಮಯವದು. ಮನೆಯೊಳಗೆ ನುಸುಳಬೇಕೆಂದಾಗ, ಕಳ್ಳರ ಸಪ್ಪಳು ಗುರ್ತಿಸಿದ ಮನೆಯವರು, ಎಚ್ಚರವಾಗಿಯೇ ಇದ್ದು, ಯಾರವರು? ಅಂದರಂತೆ. ಕಳ್ಳರು ಅಲ್ಲಿಂದ ಓಡಿದರಂತೆ. ಮರು ದಿವಸ ಕಳ್ಳರಿಗೆ, ಆ ಮನೆಯ ದಂಪತಿಗಳು ಹೊಸದಾಗಿ ಮದುವೆಯಾದವರೆಂದು ಗೊತ್ತಾಯ್ತಂತೆ. ಹರೆಯದ ಸಂಭ್ರಮ ಹಾಗೆ!. ನನ್ನವಳೂ ಸಹ ನನ್ನ ಹಾಗೆ ಕವಿಯಿತ್ರಿ. ಮದುವೆಯಾದ ಹೊಸತರಲ್ಲಿ ಅವಳು ಬರೆದ ಈ ಹನಿಗವಿತೆ ನೋಡಿ.

ನಲ್ಲಾ,
ಪಕ್ಕದಲ್ಲಿ ನೀನಿದ್ರೆ

ಮಾಡಲು ಬಿಡುವುದಿಲ್ಲ ನಿದ್ರೆ.

ಪಕ್ಕದಲ್ಲಿ ನೀನಿರದಿದ್ರೆ

ಬಯಕೆ ಮಾಡಿಸಿಕೊಡುವುದಿಲ್ಲ ನಿದ್ರೆ!

ಕೆಲವರು ನಿದ್ದೆಯಲ್ಲಿ ವಿಚಿತ್ರವಾಗಿ ಗೊರಕೆ ಹೊಡೆಯುತ್ತಾರೆ. ಒಂದು ರಾತ್ರಿ ಅತಿಥಿಯೊಬ್ಬರು ನಮ್ಮ ಮನೆಯಲ್ಲಿ ವಸತಿ ಮಾಡಿದರು. ಅನಿವಾರ್ಯವಾಗಿ ನಾನು ಅವನ ಪಕ್ಕದಲ್ಲಿಯೇ ಮಲಗುವ ಪ್ರಸಂಗ ಬಂತು. ಮಲಗಿದ ಕೆಲ ನಿಮಿಷಗಳಲ್ಲಿಯೇ ಅವರ ಗೊರಕೆ ಹುಲಿಯ ಘರ್ಜನೆಯ ಹಾಗೆ ಆರಂಭವಾಯಿತು. ಬೇರೆ ಕಡೆಗೆ ಹೋಗಿ ಮಲಗಬೇಕೆಂದರೆ ಜಾಗವಿಲ್ಲ, ಹೊರಗೆ ಮಲಗಬೇಕೆಂದರೆ, ಜಿಟಿ ಜಿಟಿ ಮಳೆ! ಬೆಳಗಿನ ನಾಲ್ಕು ಗಂಟೆಯವರೆಗೆ ನನಗೆ ನಿದ್ರೆಯಿಲ್ಲ, ಹೊಟ್ಟೆ ಸರಿಯಿಲ್ಲವೆಂದು, ತಂಬಿಗೆ ಹಿಡಿದು ಊರಾಚೆ ಹೋದವನು. ವಾಪಸ್ಸು ಬಂದದ್ದು ಬೆಳಕಾದ ಮೇಲೆಯೇ. ಅವನ ದಯೆಯಿಂದ ಎರಡು ಗಂಟೆ ನಿದ್ದೆ ಮಾಡಿದೆ. ಮರುದಿವಸ ಆ ಪುಣ್ಯಾತ್ಮ ಸತಿ ಸಮೇತ ಊರಿಗೆ ಹೊರಟು ನಿಂತಾಗ, ಅವನ ಹೆಂಡತಿಗೆ ಒಗಟಾಗಿ ಅಂದೆ. ತಾಯೀ! ಇಂಥಹ ಗಂಡನನ್ನು ಪಡೆದ ನೀವು ಪುಣ್ಯ ಜೀವಿ! ಆ ತಾಯಿಗೆ ನನ್ನ ಮಾತಿನ ಅರ್ಥ ಎಷ್ಟರ ಮಟ್ಟಿಗಾಯ್ತೋ ಅರಿಯೆ. ಮುಗುಳ್ನಗುತ್ತಾ ಹೊರಟಳು. ಇಂಥಹ ಆತಂಕಕಾರಿ ಗೊರಕೆಗಳ ನಿವಾರಣೆಗಾಗಿ ಸೂಕ್ತ ಔಷಧಿಗಳಿರಬಹುದೇ? ಎಂದು ಚಿಂತೆಗೀಡಾಗಿದ್ದೇನೆ. ನಾನು ಬಲು ಅದೃಷ್ಟವಂತ. ಯಾಕೆಂದರೆ, ನನ್ನ ಹೆಂಡತಿ ಗೊರಕೆ ಹೊಡೆಯುವುದಿಲ್ಲ. ನಿದ್ರೆ ಬಾರದೇ ಇರುವುದಕ್ಕೆ ಚಿಂತೆ, ಮಾನಸಿಕ ಒತ್ತಡಗಳು ಕಾರಣವೆಂದು ಹೇಳುತ್ತಾರೆ. ನಿದ್ದೆ ಬಾರದೇ ಇರುವುದಕ್ಕೆ ಕೆಲವರು ನಿದ್ರೆ ಮಾತ್ರೆಗಳನ್ನು ಸೇವಿಸುತ್ತಾರೆ. ಮಾತ್ರೆಗಳನ್ನು ಸೇವಿಸುವುದು ಅಪಾಯಕಾರಿ. ಯಾಕೆಂದರೆ ಇದರ ಅಭ್ಯಾಸವಾದರೆ ಕಷ್ಟ ಮುಂದೆ ಅಂಥವರಿಗೆ ಮಾತ್ರೆ ಸೇವಿಸದೇ ನಿದ್ದೆ ಬರುವುದಿಲ್ಲವೆಂದು ಹೇಳುತ್ತಾರೆ. ಯಾವುದೇ ಒಂದು ಕೆಲಸದ ಮೇಲೆ ಮನಸ್ಸು ಕೇಂದ್ರೀಕೃತವಾಗಿದ್ದರೆ ಹಾಗೂ ಜಾಗೃತವಾಗಿದ್ದರೆ, ನಿದ್ರೆ ಬರಲಾರದೆಂದು ಅಭಿಪ್ರಾಯ. ಇದು ನಿಜ. ಇರುಳೆಲ್ಲಾ ವಾಹನ ಓಡಿಸುವ ಚಾಲಕರನ್ನು ಗಮನಿಸಿ. ಅವರಿಗೆ ನಿದ್ರೆ ಬಾರದು. ಅಕಸ್ಮಾತ್ ಬಂದರೆ, ವಾಹನದೊಳಗೆ ಕುಳಿತವರೆಲ್ಲಾ ಚಿರ ನಿದ್ರೆಗೆ ಹೋಗಬೇಕಾಗುತ್ತದೆ. ಒಟ್ಟಾರೆ, ಈ ನಿದ್ರೆಯೆಂಬುದು ಮಾಯಾಂಗನೆಯೇ ಸರಿ. ಸರ್ವಜನಾಡಿದ ಮಾತು, ವಿದ್ಯೆಯುಳ್ಳನ ಮುಖದ ಮುದ್ದು ಬರುವಂತಿಕ್ಕು, ನನ್ನ ಅನುಭವಕ್ಕೆ ತಕ್ಕಂತೆ ಹೀಗೆ ಬದಲಾಯಿಸಬೇಕೆಂದು ಮಾಡಿದ್ದೇನೆ. ನಿದ್ದೆಯುಳ್ಳವನ ಮುಖವು ಮುದ್ದು ಬರುವಂತಿಕ್ಕು. ಮಲಗಿದ ತಕ್ಷಣ ನಿದ್ದೆ ಹೋಗುವ ಅದೃಷ್ಟವಂತರನ್ನು, ಸಂತೋಷದಿಂದ ನಿದ್ದೆಗಣ್ಣಿನಲ್ಲಾದರೂ ಸರಿಯೇ, ತಲೆಯ ಮೇಲೆ ಹೊತ್ತು ಕುಣಿದಾಡಬೇಕೆನಿಸುತ್ತದೆ. ಓದುಗರೇ! ನೀವು ದಿನಾಲೂ ಕಣ್ತುಂಬಾ ನಿದ್ದೆ ಮಾಡುತ್ತೀರಾ? ಹಾಗಾದರೆ ನೀವು ತುಂಬಾ ಅದೃಷ್ಟವಂತರು.

ಭೂಸುರಾಸುರ ಪಾನ ಕಾಫಿ

- ಅಹಲ್ಯಾ ಚಿಂತಾಮಣಿ

ಕಾಫಿಯ ಇತಿಹಾಸದ ಬಗ್ಗೆ ತಿಳಿಯಬೇಕಾದರೆ ಯಾವ ಖಂಡದ ಪೌರಾಣಿಕ ಕಾವ್ಯಗಳನ್ನು ಓದಬೇಕೋ, ಯಾರಿಂದ ವಿಷಯ ಸಂಗ್ರಹಿಸಬೇಕೋ ಎಲ್ಲಿ ಯಾವ www.com, log on ಮಾಡಬೇಕೋ internet on ಮಾಡಿ computer ಮುಂದ ಮೇಲೆ ಕೆಳಗೆ ಇಲಿಯ ಓಡಾಟದ ಪರಿಣಾಮದಿಂದ ಕತ್ತು ನೋಯಿಸಿಕೊಳ್ಳಬೇಕೋ ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಇಷ್ಟು ಕಷ್ಟ ಪಡಲು ಸಹ ಮೊದಲು ಒಂದು ಲೋಟ ಕಾಫಿ ಬಿಸಿ Busy ಯಾಗಿ ಕುಡಿದರೆ ಬುದ್ಧಿ ಖಿಲಾಯಿಸಬಹುದು, ಸ್ಫೂರ್ತಿ ಬರಬಹುದು, ಹುರುಪುಂಟಾಗಬಹುದು, ನಮ್ಮ ಭರತಖಂಡದಲ್ಲಿ ಕಾಫಿ ದಕ್ಷಿಣೀಯರ ಸ್ವತ್ತು: ಅದು ಅವರ ಆಜನ್ಮ ಹಕ್ಕು: ಕಾಫಿಯ ಬಗ್ಗೆ ಅವರಿಗಿರುವಷ್ಟು ಜ್ಞಾನ ಯಾವ ವಿಜ್ಞಾನಿಗೂ ಗೊತ್ತಿಲ್ಲವೇನೋ ಅನ್ನಿಸುತ್ತೆ. ಅದರಲ್ಲೂ ಕಾಫಿ ಬೀಜದ ಗುಣಮಟ್ಟ ಹುರಿದು ಪುಡಿಮಾಡುವ ವಿಧಾನ, ಕಷಾಯ ಇಳಿಸುವುದು, ಅದರ ಸಾಂದ್ರತೆ ಭಟ್ಟಿ ಇಳಿಸುವುದು, ಹಾಲು, ಸಕ್ಕರೆ ಹದ ಇತ್ಯಾದಿ ಇತ್ಯಾದಿ ಎನ್ನುವ ಚರ್ಚೆ ಬಗ್ಗೆ ಕರ್ನಾಟಕ ತಮಿಳುನಾಡಿನವರಲ್ಲಿ ಒಂದು ತರಹ ಪೈಪೋಟಿ ಎನ್ನಿಸುತ್ತೆ. ಒಂದು ಬಾರಿ ನಮ್ಮ ಮನೆಯಲ್ಲಿ ಒಂದು ಶುಭಕಾರ್ಯ ನಡೆದಾಗ ಡೆಲ್ಲಿಯ ತಮಿಳರಲ್ಲಿ ಪ್ರಸಿದ್ಧರಾಗಿದ್ದ T.T.K. ಅಯ್ಯರು (T.T. ಕೃಷ್ಣಮಾಚಾರಿಯವರಲ್ಲ) ಅಡಿಗೆ ಭಟ್ಟರು ಆ ಸಮಾರಂಭದ ದಿನ ಕಾಫಿ, ತಿಂಡಿ, ಟಿಫನ್ ವಿಶೇಷ ಭಕ್ಷಣಗಳ ಊಟ ಅಡಿಗೆಯ ಜವಾಬ್ದಾರಿ ವಹಿಸಿಕೊಂಡು ಚೆನ್ನಾಗಿ ನಿರ್ವಹಿಸಿದರು ಕೂಡ. ಅವರು ವಿಧಿವತ್ತಾಗಿ ಆದಿನ ಬೆಳಗ್ಗೆ 6:30 ಘಂಟೆಗೆ ಸರಿಯಾಗಿ ಸುಮಾರು 15-20 ಜನಕ್ಕೆ ದೊಡ್ಡ ಹಳೇಕಾಲದ ಕಾಫಿ ಫಿಲ್ಟರ್‌ಗೆ 500ಗ್ರಾಂ ಕಾಫಿ ಪುಡಿ ಸುರಿದು ಮೇಲಿನಿಂದ ಕುದಿಯುವ ನೀರು ಹುಯ್ದು ಫಿಲ್ಟರ್ ಮುಚ್ಚಳದಿಂದ ಅದರ ತಲೆ ಮೇಲೆ ಕುಟ್ಟಿ ಕಷಾಯ ಇಳಿಯಲು ಪಕ್ಕಕ್ಕೆ ಇಟ್ಟು ಇನ್ನೊಂದು ಕಡೆ ಎರಡು ಲೀಟರ್ ಎಮ್ಮೆ ಹಾಲು ಗಟ್ಟಿಯಾಗಿ ಕಾಯಿಸಿ, ಒಂದೇ ಸಮನಾದ 15 ಸ್ಟೀಲ್ ಟಂಬ್ಲರ್ ತೆಗೆದುಕೊಂಡು, ಒಂದು ಲೋಟ ಕಾಫಿಗೆ 1/4 ಭಾಗ ಕಾಫಿ ಡಿಕಾಕ್ಷನ್, 3/4 ಭಾಗ ಹಾಲು, 1½ ಟೀ ಚಮಚ ಸಕ್ಕರೆಯಂತೆ ಕಾಫಿ ಬೆರಸಿ ಎಲ್ಲಾ ಲೋಟಕ್ಕೂ 2½ ಅಡಿ ಎತ್ತರದಿಂದ ನೊರೆ ಬರುವಂತೆ ಸುರಿದು, ಎಲ್ಲರ ಮುಂದೂ ಕುಟ್ಟಿ ಇಟ್ಟು ಇಪ್ಪೋ ಕೂಡುಕೂಡು ಕಾಫಿ ಸಾಪಾಡೋಂಗೋ, 9.30 ಮಣಿಕ್ಕೆ ಕರೆಕ್ಟ್ Tiffen ತೆರೆ ಎಂದು ಒಳಗೆ ಹೋದರು. ಬೆಳಗ್ಗಿನ ಖಾಲಿ ಹೊಟ್ಟೆಗೆ ಭರ್ಜರಿ ತಳಪಾಯ!! ಆದರೆ ಕರ್ನಾಟಕದ ಬೆಂಗಳೂರು ಮೈಸೂರಿನವರು ನಾಜೂಕಾದವರು. 150 ಮಿ.ಲೀ. ಕಾಫಿ ಒಬ್ಬರು ಒಂದೇ ಸಾರಿಗೆ ಕುಡಿಯಲು ಸಾಧ್ಯವೇ ಇಲ್ಲ ಅವರಿಗೆ. ಅವರು ಅಷ್ಟು ಕಾಫಿಯನ್ನು ಬೆಳಗ್ಗೆ 5.30ರಿಂದ 9.30ರವರೆಗೆ ಇಷ್ಟಿಷ್ಟೇ ಕುಡಿತಾರೆ. ನನಗಾದರೋ 50 ವರ್ಷದಿಂದ ಉತ್ತರ ಭಾರತದಲ್ಲೇ ಇದ್ದರೂ ಪುಟ್ಟ ಕಾಫಿ ಫಿಲ್ಟರ್‌ಗೆ 2 ಚಮಚ ಕಾಫಿ ಪುಡಿ ಹಾಕಿ ಕುದಿಯುವ ನೀರು ಸುರಿದು ಭಟ್ಟಿ ಇಳಿಯುವ ಹೊತ್ತಿಗೆ ಹಾಲು ಕಾಸಿ ಡಿಕಾಕ್ಷನ್ ಮತ್ತು ಹಾಲು ಸಮನಾಗಿ ಬೆರಸಿ (90°c ಬಿಸಿ ಇರಬೇಕು) ಘಮಘಮ ಆವಿಯನ್ನು ಎಳೆದುಕೊಳ್ಳುತ್ತಾ ಕಾಫಿ ಕುಡಿಯಲು ಶುರುಮಾಡಿ, ದಿನಪತ್ರಿಕೆ ಓದಿ ಮುಗಿಸುವ ಹೊತ್ತಿಗೆ ಕೊನೆ ಹನಿ, ತಣ್ಣಗೆ ನಾಲಿಗೆ ಮೇಲೆ

ನಿಂತು ಅದರ ಸವಿಯನ್ನು ಮೆಲಕು ಹಾಕುವ ರುಚಿ ಭಗವಂತನಿಗೇ ಗೊತ್ತು! ಕಾಫಿ ಮಹಿಮೆ ಇಷ್ಟಕ್ಕೇ ಸೀಮಿತವಾಗಿಲ್ಲ.

ಒಂದು ಬಾರಿ ಕಾಫಿ ಪ್ಲಾಂಟರ್ ತನ್ನ ಮಗನಿಗೆ ಪ್ರಸಿದ್ಧ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಸ್ಯಶಾಸ್ತ್ರ Honsಗೆ ಸೀಟಿನ ಸಲುವಾಗಿ ಮಗನೊಡನೆ ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿದ್ದ ಡಾ.ಬಿ.ಜಿ.ಎಲ್. ಸ್ವಾಮಿಯವರನ್ನು ಕಂಡು ಸೀಟ್ ಕೇಳಿದಾಗ, ಆ ಹುಡುಗನಿಗೆ ಕೇವಲ 35% ಅಂಕಗಳು ಬಂದಿದ್ದ ಕಾರಣ B.G.L. ಸ್ವಾಮಿಯವರು "ನಾನು ನಿಮ್ಮ ಮಗನನ್ನು ಒಂದು ಸರಳ ಇಂಗ್ಲೀಷ್ ಪದದ ಕಾಗುಣಿತ ಕೇಳುತ್ತೇನೆ. ಅವನು ಸರಿಯಾಗಿ ಬರೆದರೆ ಒಳ್ಳೇದು; ಕಡೇ ಪಕ್ಷ ಆ ಪದದಲ್ಲಿ ಒಂದೇ ಒಂದು ಸರಿಯಾದ ಅಕ್ಷರವಿದ್ದರೂ ಸೀಟ್ ಕೊಡುತ್ತೇನೆ" ಎಂದರಂತೆ. ಆ ಹುಡುಗ ಕೂಡಲೇ ಬಿಳಿಹಾಳೆಯ ಮೇಲೆ ಕರಿ ಇಂಕಿನ ಪೆನ್ನಿನಲ್ಲಿ Kaphy ಎಂದು ಬರೆದನಂತೆ. (ಸಧ್ಯ ಸಸ್ಯಶಾಸ್ತ್ರದ ಹೆಸರು ಕೇಳಿದ್ದರೆ ಇನ್ನೇನು ಅನಾಹುತವಾಗುತ್ತಿತ್ತೋ) B.G.L. ಸ್ವಾಮಿಗಳು ಧರ್ಮಸಂಕಟದಿಂದ ಪಾರಾದರು. ಇತ್ತೀಚೆಗೆ ಕಾಫಿಪುಡಿ ಮಾರುವ ಅಂಗಡಿಗಳು ಬಹಳವಾಗಿವೆ. ನಮ್ಮ ಕಾಲದಲ್ಲಿ ಕಬ್ಬಿಣದ ರೋಸ್ಟರ್‌ನ್ನು ಅಳವಡಿಸಿರುವ ಅಗ್ಗಿಷ್ಟಿಕೆಗಳು ಸಾಮಾನ್ಯವಾಗಿ ಇರುತ್ತಿತ್ತು. ಅದರಲ್ಲಿ ಹದವಾಗಿ ಕಾಫಿ ಬೀಜ ಹುರಿದಿಟ್ಟು ಕೊಂಡು, ದಿನಾ ಬೆಳಿಗ್ಗೆ ಕೈಲಿ ತಿರುಗಿಸುವ ಕಾಫೀ ಗ್ರೈಂಡರ್‌ಗೆ ಮನೆಗೆ ಎಷ್ಟು ಬೇಕೋ ಅಷ್ಟು ಬೀಜಹಾಕಿ ಪುಡಿಮಾಡಿಕೊಂಡು, ಬಿಸಿನೀರಿಗೆ ಪುಡಿಹಾಕಿ, ಅದರ ಮೇಲೆ ಕೈಲಿ ತಣ್ಣೀರು ಚಿಮುಕಿಸಿ ತಟ್ಟೆ ಮುಚ್ಚಿ ಐದು ನಿಮಿಷ ಬಟ್ಟೆ ಇಳಿಯಲು ಇಟ್ಟು ನಂತರ ಕಾಫಿ ಬಟ್ಟೆಯಲ್ಲಿ (ಅದನ್ನು ಮನೆಯಲ್ಲೇ ತಯಾರಿಸುತ್ತಿದ್ದರು) ಸೋಸಿ ಹಿಂಡಿ ಅದಕ್ಕೆ ಬಿಸಿಬಿಸಿ ಹಾಲು ಹಾಕಿಕೊಂಡು ಕುಡಿಯುತ್ತಿದ್ದರು. ಈಗಂತೂ Indian Coffee Board, Coorg Coffee, Narsu's Coffee ಇತ್ತೀಚಿನ Cothas Coffee with or without ಚಿಕೋರಿ ಎಂಬ Brandಗಳ ಅನೇಕ ಕಾಫಿ ಪುಡಿಗಳು ಸಿಗುತ್ತವೆ. ಆಧುನಿಕ ದಿಡೀರ್ ಕಾಫಿಗಳ ಕಂಪೆನಿಗಳಂತೂ ಬಹಳಷ್ಟು Nestle, Bru, Espresso, Georgia, Barista, Starbucks ಇತ್ಯಾದಿ. ಈಗಿನ ಚಿಕ್ಕ ಪುಟ್ಟ ಮಕ್ಕಳಬಾಯಲ್ಲೂ Barista Cold ಕ್ರೀಮ್/hot ಕಾಫಿ ಬಹಳವಾಗಿ ಕೇಳಿಬರುತ್ತಿರುತ್ತೆ. ಎಲ್ಲಾ ತರಹದ ದಿನಗಳನ್ನು ಆಚರಿಸುವಂತೆ Coffee Day ಸಹ ಒಂದು ಬ್ರಾಂಡ್. ಅದರೊಡನೆ ಅವರು ಒಂದು Schemeನ್ನೂ ಇಟ್ಟಿದ್ದಾರೆ. ಯಾರು ಎಷ್ಟು K.g. ಕಾಫಿಪುಡಿ ಕೊಂಡು ಕೊಂಡರೆ ಅಷ್ಟು ಅಂಕಗಳನ್ನು ಜೋಡಿಸಿಕೊಳ್ಳುತ್ತಾ ಅದು 1000 Point ಆದ ಕೂಡಲೆ ಪಾತ್ರೆ ಪರಟಿ ಉಚಿತ ಉಡುಗೊರೆ ಕೊಡುತ್ತಾರೆ. ಅಂತೂ ಕಾಫಿ ಮಹಿಮೆ ಏನೆಲ್ಲಾ ಅದ್ಭುತ. ನಮ್ಮ ಕಡೆ ಅತ್ತೆಯನ್ನು ಮೆಚ್ಚಿಸಲು ಸರ್ವಪ್ರಯತ್ನದಿಂದ ಸೊಸೆ ಒಳ್ಳೇ ಕಾಫಿ ಮಾಡಿಕೊಟ್ಟರೂ, ಕುಡಿದ ನಂತರ ಅತ್ತೆ ಎನಿಸಿಕೊಂಡವಳು "ಇಷ್ಟು ಗಟ್ಟಿ ಕಾಫಿ ಮಾಡಿದರೆ ಪೂರೈಸಿದಂತಾಯಿತು. ನಿಮ್ಮಪ್ಪನ ಮನೆಯಿಂದ ಬರುತ್ತೇನೇ" ಎಂದು ಜೋರುಮಾಡುತ್ತಿದ್ದಳು. ಈಗ ಅದೆಲ್ಲಾ ನಡೆಯೋಲ್ಲ ಬಿಡಿ. ಸೊಸೆಯೂ ಅತ್ತೆ ಆಗುವವಳಲ್ಲವೇ!

ಎರಡನೇ ಮಹಾಯುದ್ಧದ ನಂತರ ದೇಶದಲ್ಲಿ ಪ್ರತಿ ಪದಾರ್ಥವನ್ನು ಮನೆಗೆ, ಸದಸ್ಯರಿಗೆ ಇಷ್ಟು ಎಂದು ನಿಗದಿಮಾಡಿ ರೇಷನ್ ಅಂಗಡಿಗಳಲ್ಲಿ ಕಂಟ್ರೋಲ್ ರೇಟ್‌ನಲ್ಲಿ ಕೊಡುತ್ತಿದ್ದರು.

ಕಾಫಿ ಪುಡಿ ಇದ್ದರೆ ಸಕ್ಕರೆ ಇಲ್ಲ ಸಕ್ಕರೆ ಇದ್ದರೆ ಹಾಲಿಲ್ಲ, ಈ ತರಹದ ತೊಂದರೆಗಳು ದಿನನಿತ್ಯ ಸಮಸ್ಯೆಗಳಾಗಿದ್ದವು. ಬೆಳಗ್ಗೆ ಎದ್ದಕೂಡಲೆ ಹೊಗೆ ವಾಸನೆ ಕಾಫಿ ಬಾಯಿಗೆ ಬೀಳದಿದ್ದರೆ ಪ್ರಾಣವೇ ಹೋದಂತಾಗುತ್ತಿತ್ತು.

ಒಂದು ದಿನವಂತೂ ನಮ್ಮಮ್ಮ ಮನೇಲಿ ಸಕ್ಕರೆ ಬೆಲ್ಲ ಎರಡೂ ಇಲ್ಲದಿದ್ದ ಕಾರಣ ಕರೀಕಾಫಿಗೆ ಮಕ್ಕಳ ಕಿತ್ತಳೆ ತೊಳೆ ಪೆಪ್ಪರಮಿಂಟನ್ನೇ ಪುಡಿ ಮಾಡಿ ಹಾಕಿಕೊಂಡು ಕುಡಿದಿದ್ದರಂತೆ (Drug Addict ನಂತೆ ಹಿಂದೆ ಕಾಫಿಚಟ). ಇನ್ನೊಂದು ದಿವಸ ನಮ್ಮಮ್ಮನಿಗೆ ಕಾಫಿಗೆ ಯಾವ ತರಹದ ವ್ಯವಸ್ಥೆ ಆಗದೆ, ಸಾಯಂಕಾಲದ ಹೊತ್ತಿಗೆ, ಅವರಿಗೆ ತೀವ್ರ ತಲೆ ನೋವು ಬಂದು, ತಲೆಗೆ ಬಟ್ಟೆಕಟ್ಟಿಕೊಂಡು ನರಳುತ್ತಾ ನಮ್ಮ ತಂದೆಗೆ "ಬೇಗ ಹೋಗಿ ಅಹಲ್ಯಳನ್ನು (ನಾನು ಆಟಕ್ಕೆ ಹೋಗಿದ್ದ ಕಾರಣ) ಕರೆಯಿರಿ. ಅವಳು ಹಿರೀ ಮಗಳು. ನಾನು ಸಾಯುವುದಕ್ಕೆ ಮುಂಚೆ ಒಂದು ಸಾರಿ ಅವಳನ್ನು ನೋಡಬೇಕು. ಪಾಪ ಈ ವಯಸ್ಸಿಗೇ ಅವಳಿಗೆ ಜವಾಬ್ದಾರಿ ವಹಿಸಬೇಕಾಗಿದೆ" ಎಂದು ಗೊಳೋ ಅಂತ ಅತ್ತರಂತೆ. ಆಗ ನಮ್ಮ ತಂದೆ ನಾನು ಆಡುತ್ತಿದ್ದ ಜಾಗಕ್ಕೆ ಧಾವಿಸಿ ಬಂದು "ಪುಟ್ಟಿ, ಬೇಗ ಬಾ ನಿಮ್ಮಮ್ಮ ಸಾಯುತ್ತಿದ್ದಾಳೆ" ಎಂದು ಕರೆದುಕೊಂಡು ಹೋದರು. ಅಷ್ಟು ಹೊತ್ತಿಗೆ ಪಕ್ಕದ ಮನೆ ಜಯಮ್ಮ ಒಂದು ಬಟ್ಟಲು ಕಾಫಿ ತಗೊಂಡು ಬಂದು "ನಂಜಮ್ಮನವರೇ ಬಿಸಿಬಿಸಿಯಾಗಿ ಈ ಕಾಫಿ ಕುಡೀರಿ ಎಲ್ಲಾ ಸರಿಹೋಗುತ್ತೆ" ಎಂದು ಹೇಳಿ ಕಾಫಿಕೊಟ್ಟರು. ಅದೇ ಸಮಯಕ್ಕೆ ಬಂದ ನನ್ನನ್ನು ನೋಡಿ ನಮ್ಮ ತಾಯಿಗೆ ಒಂದು ತರಹ ಸಂಕೋಚ ನಾಚಿಕೆ ಸಂಕಟ ಆಯ್ತಂತೆ, ಇದು ಕಾಫಿ ಪ್ರಭಾವ!

ನಮ್ಮಜ್ಜಿ (ನಮ್ಮ ತಂದೆಯ ತಾಯಿಯವರು) ಮಡಿ ಹೆಂಗಸರು. ಅವರನ್ನು ಕೆಂಪುಸೀರೆ ಅಜ್ಜಿ ಎಂದು ನಾವೆಲ್ಲಾ ಕರೆಯುತ್ತಿದ್ದೆವು. ಅವರು ಚಿಕ್ಕಮಗಳೂರಿನವರು. ಸ್ನಾನ ಪೂಜೆ ಆಗದ ಹೊರತು ಕಾಫಿ ಕುಡಿಯುತ್ತಿರಲಿಲ್ಲ, ಆದ್ದರಿಂದ ಬೆಳಗಿನ ಜಾವಕ್ಕೇ ಎದ್ದು ಸ್ನಾನ ಮಾಡಿ, ಬಾಯಲ್ಲಿ ಮಂತ್ರ, ಹಾಡು ಹೇಳಿಕೊಳ್ಳುತ್ತಾ ಸೌದೆ ಒಲೆ ಹಚ್ಚಿ ಕೆಂಪು ಕೆಂಡವಾದ ಕೂಡಲೆ ಅವರ ಕಾಫಿ ಕಂಚು ಊರಿಬಿಟ್ಟರೆಂದರೆ ಮಧ್ಯಾಹ್ನ ಊಟ (ಅವರಿಗೆ ಒಪ್ಪತ್ತೇ ಊಟ) ಮಾಡುವವರೆಗೂ ಹಾಲು ಕಮ್ಮಿಯ ಕರಿ ಕಾಫಿಯನ್ನು ಆಗಾಗ್ಗೆ ಬಾಯಿಗೆ ಬಸಿದುಕೊಳ್ಳುತ್ತಾ ಎಲ್ಲಾ ಕೆಲಸ ಮಾಡಿಕೊಳ್ಳುತ್ತಿದ್ದರು. ಅವರ ಕಾಫಿ ಕಂಚನ್ನು ಇಣುಕಿ ನೋಡಲೂ ಅವಕಾಶವಿರಲಿಲ್ಲ ನಮಗೆ.

ನಮ್ಮ ಅಜ್ಜಿಯ ಅಣ್ಣನ ಕುಟುಂಬವೆಲ್ಲಾ ಚಿಕ್ಕಮಂಗಳೂರಿನ ಬಸವನ ಹಳ್ಳಿ ಬಡಾವಣೆಯಲ್ಲಿ ನೂರಾರು ವರ್ಷಗಳಿಂದ ನೆಲೆ ಊರಿದ್ದರಂತೆ. (ನೆಲ) ನಾನು 9 ವರ್ಷದವಳಿದ್ದಾಗ ನನ್ನ ತಂದೆಯ ಸೋದರ ಮಾವನ ಮಗ ನನ್ನನ್ನು ಚಿಕ್ಕಮಗಳೂರಿಗೆ ಕರೆದುಕೊಂಡು ಹೋಗಿದ್ದರು. ಅವರ ಮನೆ ಬೆಳಗಿನ ಕಾಫಿ ಸಮಾರಾಧನೆ ನನಗೆ ಇಂದಿಗೂ ಮರೆಯುವಂತಿಲ್ಲ. ಅವರ ಮೇಲೆ 10-15 ಜನ. ಬೆಳಗ್ಗೆ ಸ್ನಾನದ ಹಂಡೆ ಒಲೆಗೆ ಜೋರಾಗಿ ಉರಿ ಹಾಕಿ ಒಂದೆರಡು ಕೊರಡು ಮುಂದಕ್ಕೆ ಎಳೆದು ಕಪ್ಪು ಹಿಡಿದ ಹಿತ್ತಾಳೆ ದೊಡ್ಡ ಡಬರಿಯಲ್ಲಿ ನೀರು ಕುದಿಯಲಿಟ್ಟು ಕುದ್ದನಂತರ ಬೆಲ್ಲ ಹಾಕಿ ಆಗಲೇ ಪುಡಿಮಾಡಿದ ಘಮಘಮ ಕಾಫಿಪುಡಿ ಸುರಿದು ತಟ್ಟೆ ಮುಚ್ಚಿ ಪಕ್ಕಕಿಟ್ಟು, ಆಗಲೇ ಕರೆದು ತಂದ ಎಮ್ಮೆ ಹಾಲನ್ನು ಹದವಾಗಿ ಕಾಯಿಸಿಕೊಂಡು ಇನ್ನೊಂದು ಪಾತ್ರೆಗೆ ಕಾಫಿ ಬಟ್ಟೆ ಹಾಸಿ, ಕಾಫಿ ಡಿಕಾಕ್ಷನ್‌ನ್ನು ಸೋಸಿ, ಕಾಫಿ ಬಟ್ಟೆಯ ಎರಡೂ ಬದಿಯ ತುದಿಯನ್ನು ತಿರಟಿ ಕಿವಿ ಹಿಂಡಿದಂತೆ

ಹಿಂಡಿ, ಬಿಸಿ ಹಾಲು ಬೆರಸಿ ತಳಮೇಲೆ ಮಾಡಿ ಕಂಚಿನ ಲೋಟಗಳಿಗೆ ಸುರಿದು ಎಲ್ಲರಿಗೂ ಕೊಟ್ಟು ನೀರಿನೊಲೆ ಮುಂದೆಯೇ ಎಲ್ಲರೂ ಸುಡುರ್ ಸೊರ್ ಎಂದು ಕುಡಿಯುತ್ತಾ ಆಗಾಗ್ಗೆ ಎಡಗೈನಲ್ಲಿ ಚಳಿಗೆ ಸೋರುವ ಮೂಗನ್ನು ಒರೆಸಿಕೊಳ್ಳುತ್ತಾ ಆನಂದ ಪಡುತ್ತಿದ್ದ ಆ ಇತಿಹಾಸ ಪ್ರಸಿದ್ಧ ದೃಶ್ಯ ಇಂದೂ ನನ್ನ ಕಣ್ಮುಂದೆ ಕಟ್ಟಿದಂತಿದೆ.

ಅತಿಶಯವಾಗಿ ಕಾಫಿಯ Copy right ದಕ್ಷಿಣ ಭಾರತೀಯರಿಗೇ ವಿಶೇಷವಾಗಿ ಕರ್ನಾಟಕದವರಿಗೇ ಹಕ್ಕು ಕಾದಿರಿಸಿದೆ ಎಂದರೆ ಹೆಗ್ಗಳಿಕೆಯಲ್ಲ. ಭರತ ಖಂಡದಲ್ಲಿ ರಾಮರಾವಣರ ಯುದ್ಧದ ಸಂದರ್ಭದಲ್ಲಿ ಲಕ್ಷ್ಮಣ ಮೂರ್ಛೆ ಹೋದಾಗ ಶ್ರೀರಾಮ ದುಃಖ ತಡೆಯಲಾರದೆ ಗೊಳೋ ಎಂದು ಪ್ರಲಾಪಿಸುತ್ತಾ ಇದ್ದಾಗ ರಾಮನ ಭಂಟ ಕಪಿರಾಜ ಹನುಮ ಚಿಕ್ಕಮಂಗಳೂರಿಗೆ ಹಾರಿ ಹೋಗಿ ಬಾಬಾ ಬುಡನ್‌ಗಿರಿಯ ತಪ್ಪಲಲ್ಲಿ ಬೆಳೆದಿದ್ದ ಕೆಂಪು ಹಣ್ಣಿನಿಂದ ತೂಗುತ್ತಿದ್ದ ಗಿಡಗಳ ಒಂದು ಭೂಭಾಗವನ್ನೇ ಕಿತ್ತು ಎತ್ತಿಕೊಂಡು ಹಾರಿ ಹಿಂತಿರುಗಿ ಆ ಕೆಂಪು ಹಣ್ಣುಗಳನ್ನು ಹಿಂಡಿ ರಸವನ್ನು ಲಕ್ಷ್ಮಣನ ಮೂಗಿನಲ್ಲಿ ಹಾಕಿದಾಗ ಸೌಮಿತ್ರಿ ತಕ್ಷಣ ಎಚ್ಚರಗೊಂಡು (aroma thereupy) ಲವಲವಿಕೆಯಿಂದ ಪುನಃ ಯುದ್ಧ ಮಾಡಲು ಸಿದ್ಧನಾದನಂತೆ. ಅದಕ್ಕೆ ಆ ಗಿಡಕ್ಕೆ ಸಂಜೀವಿನಿ (ಈಗಿನ ಕಾಫಿಗಿಡ) ಎಂದು ಹೆಸರು ಬಂತು ಎಂದು ನನ್ನ ಕೆಂಪು ಸೀರೆ ಅಜ್ಜಿಹೇಳಿದ ಕಥೆ ಇದು. ನಮ್ಮಜ್ಜಿ ಹಾಡು ಹಸೆ, ನಾಜೂಕಾದ ಕೆಲಸ, ಜಡೀಚೂಟಿ ಔಷಧಿ, ರುಚಿರುಚಿ ಅಡಿಗೆ ಮಾಡುವುದರಲ್ಲಿ ಅತ್ಯಂತ ನಿಪುಣೆ. ಅವರು ದಿನ ಬೆಳಗಾದರೆ ಕಾಫಿ ಮೇಲೆ ಒಂದು ಹಾಡು ಹೇಳುತ್ತಿದ್ದರು. ನನಗೆ ಯಾವಾಗಲೂ ಒಂದೇ ಒಂದು ಸಾಲು ಜ್ಞಾಪಕವಿರುತ್ತಿತ್ತು. ಇತ್ತೀಚೆಗೆ ನಾನು ಬೆಂಗಳೂರಿಗೆ ಹೋಗಿದ್ದಾಗ ನನ್ನ ದೊಡ್ಡಪ್ಪನ ಮಗಳನ್ನು ನೋಡಲು ಹೋಗಿದ್ದೆ. ಅವಳು ನನಗೆ ತಿಂಡಿ ಕಾಫಿ ಕೊಟ್ಟು ಉಪಚಾರ ಮಾಡಿದಾಗ ತಕ್ಷಣ ನಾನು "ವಿಮಲ ನಿನಗೆ ಅಜ್ಜಿ ಹೇಳುತ್ತಿದ್ದ ಕಾಫಿ ಹಾಡು ಬರುತ್ತದೆಯೇ" ಎಂದೆ. ಅವಳಿಗೇನು ಸ್ಫೂರ್ತಿ ಬಂದು ಬಿಟ್ಟಿತೋ ತತ್‌ಕ್ಷಣ ಗೋಡೆ ಬದಿಗೆ ಚಾಪೆ ಹಾಸಿಕೊಂಡು ಚಕ್ಕಳಮಟ್ಟಿಗೆ ಹಾಕಿಕೊಂಡು ಮೈತುಂಬಾ ಸೆರಗು ಹೊದ್ದುಕೊಂಡು ಬೆರಳುಗಳನ್ನು ತಾಳದಂತೆ ಚಲಿಸುತ್ತಾ ಎರಡು ನುಡಿಯ ಆ ಹಾಡನ್ನು ಸುಶ್ರಾವ್ಯವಾಗಿ ಹಾಡಿಯೇ ಬಿಟ್ಟಳು. ಅದೇನು ನಮ್ಮಜ್ಜಿಯ ಸ್ವಯಂ ರಚನೆಯೋ ಯಾವ ದಾಸರ ಪದವೋ ನನಗೆ ಗೊತ್ತಿಲ್ಲ. ನನಗೆ ಪುನಃ ಮರೆತುಹೋಗದಂತೆ ಆ ಹಾಡು ಬರೆದು ಕೊಂಡು ಬಂದು ಈ ಲಘು ಪ್ರಬಂಧವನ್ನು ಬರೆದು ಈ ಹಾಡಿನಿಂದ ಮುಕ್ತಾಯಗೊಳಿಸುತ್ತಿದ್ದೇನೆ. ನಿಮಗಿಷ್ಟವಾದರೆ ನೀವೂ ಕಾಫಿ ಕುಡಿದು ಈ ಹಾಡು ಹೇಳಿ.

ಭೂಸುರಾಸುರ ಪಾನ ಕಾಫಿ ಪಾಪಿ
ಭೂಲೋಕದಲ್ಲೆಲ್ಲಾ ವ್ಯಾಪಿಸಿತು ಈ ಕಾಫಿ । (2)
ಕಾಸುಗಳು ಕಳೆದರು ಕಲಿಜನರು
ಕಾಫಿ ಪಾನದ ನಂತರ ಸ್ನಾನವೆಂದರು ಮಡಿವಂತರು
(ಭೂಸುರಾ...)

ಮತಿ ವಿಹೀನ ಅಂಗನೆಯರು ಕೆಲವರು
ಸತಿ ಪತಿಗಳಾಗಿ ಕೆಲವರು
ಈ ಕಾಫಿ ಇಲ್ಲದೇ ಬಿದ್ದರಪ್ಪಾ
ಅಪ್ಪಾ ಇದು ಕಲಿಕಾಲದ ಸ್ವರೂಪವಪ್ಪಾ (2)
ಬಡತನವು ಹೆಚ್ಚಿತು ಸಿರಿತನದ ಬಿಂಕ ಬೀಗಿತ್ತು
ಕಾಫಿ ಇಲ್ಲದಿರೆ ಪ್ರಾಣವೇ ಹೋದಂತಾಯಿತು
ಅಯ್ಯೋ ಪಾಪಿ ಕಾಫಿ ಎಂತಹ ಕೀರ್ತಿವ್ಯಾಪ್ತಿ
(ಭೂಸುರಾಸುರ...)

ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿರುವ

ಪಡುಕೋಣೆ ರಮಾನಂದರಾವ್ ಸ್ಮಾರಕ

ನಗೆ ಲೇಖನ ಸ್ಪರ್ಧೆ 2008

ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 4ರಿಂದ 6 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ(ರೂ. 750/-) ಹಾಗೂ ಮೂರನೇ (ರೂ. 500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ ಬಡಾವಣೆ 1ನೇ ಹಂತ, ಬೆಂಗಳೂರು - 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2008.

Mailing Date
5th of every month
Mailed at: Rajajinagar - PO

CPMG/KA/BGW-544/2006-20(
RNI-KAR-KAN / 2005 / 154



Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR